ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

07 ಸೆಪ್ಟೆಂಬರ್ 2016 ಪುಟ 20 ರೂ. 15/-


ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದಲಿತರು




ತಪ್ಪೇನೂ ಹೇಳಿಲ್ಲ

ಹಿಂದೂ ಹುಡುಗನನ್ನೇ ಕೊಂದ ಕೌ ಬ್ರಿಗೇಡ್





ಠುಸ್ ಆದ ಹಿಂದ




ಜಿಎಸ್‌ಟಿ ಭಯೋತ್ಪಾದನೆ -2

ಜಿಎಸ್‌ಟಿ ದೇಶದ ಒಕ್ಕೂಟ ವ್ಯವಸ್ಥೆಗೆ ಮತ್ತು ಸಂವಿಧಾನಕ್ಕೆ ವಿರುದ್ಧವಾ

ಕಳೆದ ಸಂಚಿಕೆಯಲ್ಲಿ ಜಿಎಸ್‌ಟಿ ಎಂಬುದು ಸಾಮಾನ್ಯ ಜನರ ಮೇಲೆ ಅಸಾಮಾನ್ಯ ತೆರಿಗೆಯನ್ನು ವಿಧಿಸುವುದಾಗಿದೆ ಮತ್ತು ಅದು ಜನರ ಮೇಲೆ ತೆರಿಗೆ ಭಯೋತ್ಪಾದನೆಯನ್ನು ಹೇರುತ್ತದೆ ಎಂಬುದನ್ನೂ, ಆದರೆ, ಪ್ರಧಾನಮಂತ್ರಿಗಳು ಜಿಎಸ್‌ಟಿಯು 'ತೆರಿಗೆ ಭಯೋತ್ಪಾದನೆ'ಯನ್ನು ಕೊನೆಗೊಳಿಸುತ್ತದೆ ಎಂದು ಹೇಳಿರುವುದರ ಹಿಂದಿನ ಹುನ್ನಾರವೇನು ಎಂಬುದನ್ನು ನೋಡಿದ್ದೇವೆ. ಈ ಸಂಚಿಕೆಯಲ್ಲಿ ದೇಶದ ಒಕ್ಕೂಟ ವ್ಯವಸ್ಥೆಗೆ ಜಿಎಸ್‌ಟಿ ಹೇಗೆ ವಿರುದ್ಧ ಮತ್ತು ಸಂವಿಧಾನದ ಆಶಯಗಳಿಗೆ ಹೇಗೆ ವಿರುದ್ಧ ಎಂಬುದನ್ನು ಚರ್ಚಿಸಲಾಗಿದೆ.

ದೇಶದ ಸ್ವಾತಂತ್ರ್ಯ ಹೋರಾಟದ ಫಲಿತವಾಗಿ ರೂಪುಗೊಂಡ ಸಂವಿಧಾನ ರಚನಾ ಸಭೆಯು, ಭವಿಷ್ಯದ ಭಾರತವನ್ನು ಒಂದು ಒಕ್ಕೂಟ ವ್ಯವಸ್ಥೆಯಾಗಿ ಕಲ್ಪಿಸಿಕೊಂಡಿತು ಮತ್ತು ಹಾಗಾಗಿಯೇ ಸಂವಿಧಾನದ ಮೊದಲ ಭಾಗದ ಮೊದಲ ಕಲಂ, 'ಇಂಡಿಯಾ, ಅಂದರೆ ಈ ಭಾರತವು, ರಾಜ್ಯಗಳ ಒಕ್ಕೂಟವಾಗಿರುತ್ತದೆ' ಎಂದು ಹೇಳುತ್ತದೆ. ಇದು ಕೇವಲ ಮೊದಲ ಕಲಂನ ಮೊದಲ ವಾಕ್ಯ ಮಾತ್ರವಲ್ಲಾ ಇದು ಸಂವಿಧಾನದ ಉಳಿದ ಭಾಗಗಳಲ್ಲೂ ಅಭಿವ್ಯಕ್ತವಾಗುತ್ತದೆ. ನಿತ್ಯದ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನ ಆಯಾಮಗಳಲ್ಲಿ ಯಾವುವು ಕೇಂದ್ರದ ಕೈಯ್ಯಲ್ಲಿರಬೇಕು, ಯಾವುದು ರಾಜ್ಯಗಳ ಕೈಯ್ಯಲ್ಲಿರಬೇಕು ಮತ್ತು ಯಾವುವು ಸಮವರ್ತಿ ಪಟ್ಟಿಯಲ್ಲಿರಬೇಕು ಎಂಬುದನ್ನು ಸಂವಿಧಾನದ ಕಲಂಗಳು ಸ್ಪಷ್ಟವಾಗಿ ಹೇಳಿವೆ. ಸಂವಿಧಾನದ ಅಧ್ಯಾಯ 11 ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧದ ಕುರಿತು ಹಲವು ನಿಯಮಗಳನ್ನು ಮುಂದಿಡುತ್ತದೆ. ಹಾಲಿ ಇರುವ ಈ ನಿಯಮಗಳೇ ಕೇಂದ್ರಕ್ಕೆ ಹೆಚ್ಚೆಚ್ಚು ಅಧಿಕಾರವನ್ನು ನೀಡುತ್ತವೆ ಮತ್ತು ರಾಜ್ಯ ಸರ್ಕಾರಗಳು ಕೇವಲ ಮುನಿಸಿಪಾಲಿಟಿಗಳಾಗಿವೆ ಎಂಬುದು ಹಲವರ ಅಭಿಪ್ರಾಯವಾಗಿದೆ. ಹೀಗಿದ್ದೂ, ಒಂದಷ್ಟು ಅಧಿಕಾರವಾದರೂ ರಾಜ್ಯಗಳ ಕೈಯ್ಯಲ್ಲಿ ಇವೆ.

ಈ ಅಧಿಕಾರವು ಕೇವಲ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ್ದ ಮಾತ್ರವಲ್ಲದೇ, ತನಗೆ ಬೇಕಾದ ಸಂಪನ್ಮೂಲವನ್ನು ಕ್ರೋಢೀಕರಿಸಿಕೊಳ್ಳುವ ವಿಚಾರಕ್ಕೂ ಅನ್ವಯಿಸುತ್ತದೆ. ಉದಾಹರಣೆಗೆ ಅಧ್ಯಾಯ 12ರಲ್ಲಿ ಹಣಕಾಸು, ಸಾಲ, ಆಸ್ತಿ ಇತ್ಯಾದಿಗಳ ಕುರಿತು ಚರ್ಚಿಸುತ್ತದೆ. ಅದರಲ್ಲಿ ಮೊದಲನೇ



ಭಾಗ ಹಣಕಾಸಿನ ವಿಚಾರ. ಅದರಲ್ಲಿ ಒಂದಿಡೀ ಅಧ್ಯಾಯ ಕೇಂದ್ರ ಮತ್ತು ರಾಜ್ಯಗಳ ನಡುವೆ ತೆರಿಗೆ ಆದಾಯದ ಹಂಚಿಕೆಯ ಕುರಿತೇ ಇದೆ. ಕಲಂ 274, 'ರಾಜ್ಯಗಳ ಹಿತಾಸಕ್ತಿಗೆ ಧಕ್ಕೆಯಾಗಬಹುದಾದ ಹಣಕಾಸು ಮಸೂದೆ ಮಂಡನೆಗೆ ಮುಂಚೆಯೇ ರಾಷ್ಟ್ರಪತಿಯ ಅನುಮೋದನೆ ಬೇಕು' ಎಂದು ಹೇಳುತ್ತದೆ. ಸಂಪನ್ಮೂಲ ಕ್ರೋಢೀಕರಣದಲ್ಲಿ ಸ್ವಾಯತ್ತತೆ ಇಲ್ಲದಿದ್ದರೆ, ರಾಜ್ಯಗಳು ಕೇಂದ್ರ ಸರ್ಕಾರದ ಮುಂದೆ ಭಿಕ್ಷಾಪಾತ್ರೆ ಇಟ್ಟುಕೊಂಡು ನಿಲ್ಲಬೇಕಾಗುತ್ತದೆ ಎನ್ನುವ ಕಾರಣಕ್ಕೇ ಈ ರೀತಿ ಮಾಡಲಾಗಿದೆ.

ಇದು ಸಂವಿಧಾನ ರಚನಾ ಸಭೆಯಲ್ಲೇ ವಿಸ್ತೃತವಾಗಿ ಚರ್ಚೆಯಾಯಿತು. ರಾಜ್ಯಗಳು ಸಂಗ್ರಹಿಸುವ ಮಾರಾಟ ತೆರಿಗೆಯ ಮಟ್ಟ ಎಷ್ಟಿರಬೇಕೆಂದು ನಿರ್ಧರಿಸುವ ಹಕ್ಕು ಕೇಂದ್ರಕ್ಕಿರಬೇಕು ಎಂಬುದನ್ನು ಡಾ.ಬಿ.ಆರ್.ಅಂಬೇಡ್ಕರ್ ಅವರು ಸ್ಪಷ್ಟವಾಗಿ ವಿರೋಧಿಸಿದ್ದರು. 'ಅತ್ಯಂತ ಹೆಚ್ಚು ಸಂಪನ್ಮೂಲಗಳು ಕೇಂದ್ರದ ಕೈಯ್ಯಲ್ಲೇ ಇರುವುದರಿಂದ, ಕನಿಷ್ಠ ಒಂದು ಪ್ರಮುಖ ಸಂಪನ್ಮೂಲ ಸಂಗ್ರಹದ ಮೂಲವನ್ನು ಪ್ರಾಂತಗಳಿಗೆ ಬಿಡಲೇಬೇಕು' ಎಂದು ಅವರು ಹೇಳಿದ್ದರು.


ಅದರಂತೆ, ಕಳೆದ ಸಂಚಿಕೆಯಲ್ಲೂ ಹೇಳಿದಂತೆ, ಕೆಲವು ಪರೋಕ್ಷ ತೆರಿಗೆಗಳನ್ನು ರಾಜ್ಯಗಳು ಸಂಗ್ರಹಿಸುತ್ತಿದ್ದವು. ಇದರ ಜೊತೆಗೆ ಸ್ಥಳೀಯ ಸಂಸ್ಥೆಗಳೂ ಸಹ ಆಕ್ಟ್ರಾಯ್ ಥರದ ಕೆಲವು ತೆರಿಗೆಗಳನ್ನು ಕೆಲವು ಕಾಲ ಸಂಗ್ರಹಿಸುತ್ತಿದ್ದವು. ಈಗಲೂ ಮುಂಬಯಿ ಮತ್ತು ಪುಣೆಗಳಲ್ಲಿ ಆಕ್ಟ್ರಾಯ್ ತೆರಿಗೆ ಜಾರಿಯಲ್ಲಿದೆ. ಮುಂಬಯಿ ಕಾರ್ಪೊರೇಷನ್ 2014-15ರಲ್ಲಿ ಆಕ್ಟ್ರಾಯ್ ಮೂಲಕ 6,733 ಕೋಟಿ ರೂ.ಗಳನ್ನು ಸಂಗ್ರಹಿಸಿತ್ತು ಮತ್ತು ಅದು ಅದರ ಒಟ್ಟಾರೆ ಆದಾಯದ ಶೇ.42ರಷ್ಟಿತ್ತು. ಜಿಎಸ್‌ಟಿಯ ಮೂಲಕ ದೇಶಾದ್ಯಂತ ಎಲ್ಲಾ ಸರಕು ಮತ್ತು ಸೇವೆಗಳಿಗೆ ಒಂದೇ ತೆರಿಗೆಯನ್ನು ಹೇರುವ ಮೂಲಕ, ಇಂತಹ ಎಲ್ಲಾ ತೆರಿಗೆ ಸಂಗ್ರಹವನ್ನೂ ಇಲ್ಲವಾಗಿಸುತ್ತದೆ ಮತ್ತು ಈ ರೀತಿ ಸಂಗ್ರಹವಾಗುವ ತೆರಿಗೆಯಲ್ಲಿ ರಾಜ್ಯಗಳ ಪಾಲು ಮತ್ತು ಕೇಂದ್ರದ ಪಾಲನ್ನು ಕೇಂದ್ರೀಕೃತವಾಗಿಯೇ ತೀರ್ಮಾನಿಸಲಾಗುತ್ತದೆ.

ಇದರಿಂದ ಯಾವುದೇ ರಾಜ್ಯ ತನ್ನ ಅಗತ್ಯಕ್ಕೆ ತಕ್ಕಂತೆ, ತನ್ನ ರಾಜ್ಯದ ನಿರ್ದಿಷ್ಟ ಪರಿಸ್ಥಿತಿಗಳಿಗೆ ಅನುಗುಣವಾಗಿ, ಆ ರಾಜ್ಯದಲ್ಲಿ ಆಯ್ಕೆಯಾಗಿರುವ ಸರ್ಕಾರ ಯಾವ ಭರವಸೆಗಳ ಮೇಲೆ ಆಡಳಿತಕ್ಕೆ ಬಂದಿರುತ್ತದೋ ಅದನ್ನು ಈಡೇರಿಸಲು ಅದು ತೆರಿಗೆ ಸಂಗ್ರಹಿಸಲು ಮುಂದಾಗುವಂತಿಲ್ಲ. ಜಿಎಸ್‌ಟಿಯು ಸಂಗ್ರಹಿಸುವ ರಾಜ್ಯಗಳ ಅಧಿಕಾರ ಮತ್ತು ಸ ಕಿತ್ತುಕೊಳ್ಳುತ್ತದೆ. ಇದು ಸಂವಿಧಾನದ ಆಶ ಉಲ್ಲಂಘನೆಯಾಗಿದೆ. ಈ ಹಿಂದೆಯೇ ವ್ಯಾಟ್ ತ ಇದೇ ರೀತಿಯಲ್ಲಿ ವಿವಿಧ ಬಗೆಯ ಸರಕುಗಳ ಬಗೆಯ ತೆರಿಗೆಯನ್ನು ಹಾಕುವ ವಿಧಾನ ಜಾರಿಗ ಅದೂ ಸಹ ರಾಜ್ಯಗಳ ಅಧಿಕಾರವನ್ನು ಒಂದಷ ಮೊಟಕುಗೊಳಿಸಿತ್ತು. ಆದರೆ, ವ್ಯಾಟ್ ಎಂಬುದ ಸರಕುಗಳಿಗೆ ಅನ್ವಯಿಸುತ್ತಿತ್ತು ಮತ್ತು ಅದು ಒಂದೇ ತೆರಿಗೆಯಾಗಿರಲಿಲ್ಲ; ನಾಲ್ಕು ವಿವಿಧ ದರಗಳ ಗ ಸರಕುಗಳನ್ನು ವಿಂಗಡಿಸಲಾಗುತ್ತಿತ್ತು. ಈಗ ದೇಶಾದ್ಯ ಒಂದೇ ಬಗೆಯ ತೆರಿಗೆ ದರ (ಒಂದು ರಾಜ್ಯ ಇನ್ನೊಂದು ಕೇಂದ್ರ ಜಿಎಸ್‌ಟಿ - ರಾಜ್ಯ ಜಿಎ ಎಲ್ಲಾ ರಾಜ್ಯಗಳಲ್ಲೂ ಒಂದೇ ಆಗಿರುತ್ತದೆ) ನಿಗದಿಯಾ ಮತ್ತು ಅದನ್ನು ನಿರ್ಧರಿಸುವ ಅಧಿಕಾರವು ಜಿಎಸ್‌ಟಿ ಕೈಯ್ಯಲ್ಲಿ ಇರುವುದು ಅಪಾಯಕಾರಿಯಾಗಿದೆ.

ಈ ರೀತಿಯ ಅನ್ಯಾಯ ರಾಜ್ಯಗಳಿಗೆ ನೋಡಿಕೊಳ್ಳಲು ಮೂರು ಅಂಶಗಳನ್ನು ಕೇಂದ್ರ ಸಚಿವ ಜೇಟ್ಲಿ ಪ್ರತಿಪಾದಿಸುತ್ತಿದ್ದಾರೆ. ಒಂದು ರೆವಿನ್ಯೂ ಜಿಎಸ್‌ಟಿ ದರ. ಅಂದರೆ, ರಾಜ್ಯಗಳ ಒಟ್ಟಾರೆ ತೆರಿಗೆ ಆ ಹೆಚ್ಚೇನೂ ಬದಲಾವಣೆ ಆಗದೇ ಇರುವಂತೆ ನೋಡ ಎಂಬುದು ಅವರ ವಾದ. ಇದು ಎಷ್ಟಿರುತ್ತದೆ ವ ದೇಶಕ್ಕೆ ಒಂದೇ ತೆರಿಗೆ ದರ ಆಗಿದ್ದರೆ, ಅದು ಎಲ್ಲಾ ನ್ಯಾಯ ಒದಗಿಸುವುದು ಹೇಗೆ ಸಾಧ್ಯ ಎಂಬುದು ಗೊತ್ತಿಲ್ಲ. ಏಕೆಂದರೆ, ಕೆಲವು ರಾಜ್ಯಗಳು ಹೆಚ್ಚಾಗಿ ಆಧಾರಿತ ರಾಜ್ಯಗಳಾಗಿದ್ದರೆ, ಕೆಲವು ರಾಜ್ಯಗಳು ರಾಜ್ಯಗಳಾಗಿವೆ. ನಿರ್ದಿಷ್ಟ ಸರಕಿಗೆ ಉತ್ಪಾದನಾ ರಾಜ ತೆರಿಗೆ ಇದ್ದಲ್ಲಿ ಹೆಚ್ಚೆಚ್ಚು ಮಾರಾಟವಾಗುತ್ತದೆ ಎಂದು ಬಳಕೆದಾರ ರಾಜ್ಯವು ಹೆಚ್ಚು ತೆರಿಗೆಯಿದ್ದಲ್ಲಿ ತ ಲಾಭ ಎಂದು ಬಯಸುತ್ತದೆ. ಹೀಗಾಗಿ ಇದು ರೀತಿಯ ವೈರುಧ್ಯಗಳಿಗೆ ಕಾರಣವಾಗುತ್ತದೆ.

ಕೃಷ್ಣನೇ ಪ್ರಥಮ ಗೋ ರಾಜಕಾರಣಿ, ಸಂಘಿಗಳು ಗುಗ್ಗುರು ಅಪ





ಹೋರಿಗೆ ಭಾರತದೆಲ್ಲೆಡೆ ಆಲಯವಿದೆ ಆದರೆ ಹಸುವಿಗೆಲ್ಲಿದೆ ಆಲಯ? ಶೈವರ ನಂದಿಯ ವಿರುದ್ಧ ವೈಷ್ಣವರು ರಚಿಸಿರುವ ಷಡ್ಯಂತ್ರವೇ ಹಸುವಿನ ಮೇಲ್ಮೆ ಆಗಿದೆಯೇ? ಎಂಬ ಧಾರ್ಮಿಕ ಜಿಜ್ಞಾಸೆಯ ಪ್ರಶ್ನೆಗಳನ್ನು ನನ್ನ ಮಿತ್ರರಾದ ಕನ್ನಡ ಸಾಹಿತಿ ಹಾಗೂ ತುಳು ಸಂಸ್ಕೃತಿಯ ಹಿರಿಯ ಸಂಶೋಧಕ ಪೆರೂರು ಜಾರು ಇವರು ಎತ್ತಿದ್ದಾರೆ. ಸಾಮಾನ್ಯವಾಗಿ ಪ್ರತಿಯೊಂದು ಶಿವನ ದೇವಾಲಯಗಳಲ್ಲಿ ಶಿವನಿಗೆ ಎದುರಾಗಿ ದರ್ಶನ ಪಡೆಯುತ್ತಿರುವ ನಂದಿಯ (ಹೋರಿಯ) ವಿಗ್ರಹವನ್ನು ಎಲ್ಲೆಡೆ ಕಾಣಬಹುದು. ಅಷ್ಟೇ ಅಲ್ಲ, ನಂದಿಗೆಂದೇ ಮುಡಿಪಾದ ಕೆಲವು ಪ್ರತ್ಯೇಕ ದೇವಾಲಯಗಳೂ ಭಾರತದಲ್ಲಿ ಕಂಡುಬರುತ್ತವೆ. ಆದರೆ ಹಸುವಿಗೆ ಮುಡಿಪಾದ ಆಲಯ ಎಲ್ಲಿಯೂ ಕಂಡು ಬರುವುದಿಲ್ಲ ಯಾಕೆ? ಗೋವು ಕೃಷ್ಣನಿಗೆ ತುಂಬಾಪ್ರಿಯವಾದುದು ಎನ್ನಲಾಗುತ್ತದೆ. ಆದರೆ ಕೇವಲ 130 ವರ್ಷ ಹಳೆಯ ರಾಜಾ ರವಿವರ್ಮನ ಚಿತ್ರಗಳ ಹೊರತು ಬೇರೆ ಯಾವುದೇ ಪುರಾತನ ದೇವಾಲಯಗಳಲ್ಲಿ ಕೃಷ್ಣನು ಗೋವುಗಳೊಟ್ಟಿಗೆ ಇರುವಂತಹ ಶಿಲ್ಪಾ ಅಥವಾ ಚಿತ್ರಗಳು ಕಾಣಸಿಗುವುದಿಲ್ಲ, ಕೃಷ್ಣ ಎಲ್ಲೆಡೆ ಕಾಣ ಸಿಗುವುದು ರಾಧೆಯೊಂದಿಗೆ. (ಈ ರಾಧೆ ಗೋಮಾತೆಯ ಅವತಾರ ಎಂಬ ಕಾಲ್ಪನಿಕ ಉಪಕಥೆಯನ್ನು ಸದ್ಯದಲ್ಲಿಯೇ ವೈದಿಕರು ಹುಟ್ಟುಹಾಕುವುದು ಖಂಡಿತ).

ಜಗಜ್ಯೋತಿ ಬಸವೇಶ್ವರರು ನಂದಿಯ ಅವತಾರ ಎನ್ನುತ್ತಾರೆ ವೀರಶೈವ ಲಿಂಗಾಯತರು. ಆದರೆ ಬಸವಣ್ಣನವರ ಇಬ್ಬರು ಪತ್ನಿಯರು ಅಥವಾ ಅವರ ತಾಯಿಯನ್ನು ಕಾಮಧೇನು ಅಥವಾ ಬೇರೆ ದೈವಿ ಹಸುವಿನ ಅವತಾರ ಎಂದು ಯಾಕೆ ಹೇಳಲಾಗುತ್ತಿಲ್ಲ ಗೊತ್ತೇ? ಯಾಕೆಂದರೆ ಹಸುವಿಗೆ ಲಿಂಗಾಯತ ಧರ್ಮದಲ್ಲಿ ಪ್ರಾಮುಖ್ಯತೆಯಿಲ್ಲ, ಬಸವ ಅರ್ಥಾತ್ ನಂದಿಯನ್ನು ಸಾಮಾನ್ಯವಾಗಿ ಶಿವನ ವಾಹನ ಎಂದೇ ಗುರುತಿಸಲಾಗುತ್ತದೆ. ಆದರೆ ನಿಜವಾಗಿ ನಂದಿ ಕೇವಲ ಶಿವನ ವಾಹನವಷ್ಟೇ ಅಲ್ಲ, ಅವನು ಕೈಲಾಸದ ಮೇಲ್ವಿಚಾರಕ ಸಹ ಆಗಿದ್ದಾನೆ. ಪತಂಜಲಿ ಒಳಗೊಂಡಂತೆ ಹದಿನೆಂಟು ಸಿದ್ಧರ ಮುಖ್ಯಸ್ಥನಾದ ನಂದಿ ಅತಿ ಧೈರ್ಯಶಾಲಿ, ಬಲಶಾಲಿ ಹಾಗೂ ಬುದ್ಧಿಶಾಲಿ ಎಂದು ಶಿವಪುರಾಣ ಹೇಳುತ್ತದೆ. ಸದೃಢ ಮೈಕಟ್ಟು ಹಾಗೂ ವಿವೇಕವನ್ನು ಪ್ರತಿನಿಧಿಸುವ ಸಂಕೇತ ನಂದಿ. ಹಾಗಾಗಿ ನಂದಿಗೆ ಎಲ್ಲೆಡೆ ಆಲಯಗಳಿವೆ.

ಮೈಸೂರಿನ ಚಾಮುಂಡಿ ಬೆಟ್ಟದಲ್ಲಂತೂ 20 ಅಡಿ ಎತ್ತರದ ನಂದಿಯ ವಿಶ್ವ ಪ್ರಸಿದ್ಧ ಅದ್ಭುತ ಏಕಶಿಲಾ ಮೂರ್ತಿಯಿದೆ. ಆದರೆ ಅಲ್ಲೆಲ್ಲೂ ಹಸುವಿನ ಮೂರ್ತಿ ಕಂಡುಬರುವುದಿಲ್ಲ, ಬೆಂಗಳೂರಿನ ಬಸವನಗುಡಿಯು ಬುಲ್ ಟೆಂಪಲ್ ಎಂದೇ ಪ್ರಸಿದ್ಧವಾಗಿದೆ. ಉತ್ತರ ಕರ್ನಾಟಕದಲ್ಲಿ ಜುಲೈ ತಿಂಗಳಲ್ಲಿ ಮಣ್ಣೆತ್ತಿನ ಅಮಾವಾಸ್ಯೆಯನ್ನು ಎಲ್ಲಾ ರೈತರು ಬಹಳ ಉತ್ಸಾಹದಿಂದ ಆಚರಿಸುತ್ತಾರೆ. ಆದರೆ ಮಣ್ಣು-ಹಸುವಿನ ಅಮಾವಾಸ್ಯೆ ಅಥವಾ ಗೋವಿನ ಹುಣ್ಣಿಮೆ ಯಾರೂ ಆಚರಿಸುವುದಿಲ್ಲ, ಹಾಗಿರುವಾಗ ಹಸುವಿಗೆ ಗೋಮಾತೆ ಎಂದು ಕರೆಯುತ್ತಾ ಇತ್ತೀಚಿಗೆ ಒಮ್ಮೆಲೇ ಇಷ್ಟು ಪವಿತ್ರತೆ ಬರಲು ಕಾರಣವೇನು?

ನಂದಿಯ ಹೆಸರಲ್ಲಿ ನಂದಿಗುಡ್ಡ ನಂದಿಗಿರಿ, ನಂದಿಹೊಳೆ, ನಂದಿಹಳ್ಳಿ, ನಂದಿಗೆರೆ, ಬಸವನ ಹಳ್ಳಿ, ಬಸವನ ಗುಡಿ ಮುಂತಾದ ಊರುಗಳಿವೆ. ಆದರೆ ಹಸುವಿನ ಹೆಸರಿನ ಯಾವುದೇ ಊರಿಲ್ಲ, ಹಸುವಿನ ಮೈಯಲ್ಲಿ 33 ಕೋಟಿ ದೇವರಿದ್ದರೆ ಪುರುಷ ಪ್ರಧಾನ ಆರ್ಯ ಸಂಸ್ಕೃತಿಯ ಪ್ರಕಾರ ಹಸುವಿನ ಪತಿರಾಯನಾದ ಹೋರಿಯ ಮೈಯಲ್ಲಿ ಕಡೇ ಪಕ್ಷ 33 ಕೋಟಿಗಿಂತ ಒಂದು ದೇವರಾದರೂ ಹೆಚ್ಚು ಇರಲೇಬೇಕು ಹಾಗೂ ಅದರ ಮೂತ್ರದಲ್ಲೂ ಚಿನ್ನದ ಜತೆ ಪ್ಲಾಟಿನಂ ಆದರೂ ಇರಬೇಕಲ್ಲವೇ? ಹಾಗಾದರೆ ವೈಷ್ಣವರಿಗೆ ಮತ್ತು ಸಂಘ ಪರಿವಾರದವರಿಗೆ ಎತ್ತು-ಹೋರಿ ಪೂಜಾರ್ಚ ಯಾಕಿಲ್ಲ? ಶೈವರ ನಾಗ ಪಂಚಮಿಗೆ ಎದುರಾಗಿ ಗರುಡ ಪಂಚಮಿ ಹಾಗೂ ನಾಗದೇವರಿಗೆ ಎದುರಾಗಿ ವಾಸುಕಿಯನ್ನು ಹುಟ್ಟು ಹಾಕಿದ ವೈಷ್ಣವರು ಈಗ ಶೈವರ ನಂದಿಗೆ ಎದುರಾಗಿ ತಮ್ಮ ಗೋಮಾತೆಯನ್ನು ಹುಟ್ಟು ಹಾಕಿರುವುದು ಸ್ಪಷ್ಟ.

ಗೋವನ್ನು ಇಂದು ಯಾವ ರೀತಿ ರಾಜಕೀಯ ಮೋಸದ ಉದ್ದೇಶಕ್ಕಾಗಿ ಬಳಸಲಾಗುತ್ತಿದೆಯೋ ಅದೇ ರೀತಿ ಮಹಾಭಾರತ ಕಾಲದಲ್ಲಿ ರಾಜಕೀಯ ಎದುರಾಳಿಗಳನ್ನು ಮೋಸದಿಂದ ದುರ್ಬಲಗೊಳಿಸಲು ಈ ಗೋವನ್ನು ಬಳಸಲಾಗಿತ್ತು ಎಂಬುದಕ್ಕೆ ಬಲರಾಮನೇ ಸಾಕ್ಷಿ. ಕುರುಕ್ಷೇತ್ರ ಯುದ್ಧಕ್ಕೆ ಮೊದಲು ಕೃಷ್ಣನು ಪಾಂಡವರ ಪಕ್ಷಕ್ಕೆ ಹೋದ ಮೇಲೆ ಒಪ್ಪಂದದಂತೆ ಕೃಷ್ಣನ ನಾರಾಯಣಿ ಸೇನೆ ಹಾಗೂ ಅದರ ಸೇನಾಪತಿಯಾಗಿದ್ದ ಬಲರಾಮ ಕೌರವರ ಪಕ್ಷದಿಂದ ಯುದ್ಧ ಮಾಡುವುದೆಂದು ನಿಶ್ಚಯವಾಗಿತ್ತು. ಆದರೆ ಬಲರಾಮ ಕೌರವರ ಕಡೆಗಿದ್ದರೆ ಪಾಂಡವರು ಸುಲಭದಲ್ಲಿ ಸೋತುಹೋಗುತ್ತಾರೆ ಎಂದು ಕೃಷ್ಣನಿಗೆ ಗೊತ್ತಿದ್ದುದರಿಂದ ಬಲರಾಮನನ್ನು ಯುದ್ಧ ಭೂಮಿಯಿಂದ ಉಪಾಯವಾಗಿ ನಿವಾರಿಸಲು ಕೃಷ್ಣ ಒಂದು ಕುತಂತ್ರ ಹೆಣೆಯುತ್ತಾನೆ. ಅವನು ತನ್ನ ಕಡೆಯ ಒಬ್ಬ ಮಾಯಾವಿಗೆ ಹಸುವಿನ ರೂಪ ಧರಿಸಿ ಬಲರಾಮನ ಮೇಲೆ ದಾಳಿ ಮಾಡಲು ಹೇಳುತ್ತಾನೆ. ಆ ಮಾಯಾವಿಯು ಹಸುವಿನ ರೂಪದಲ್ಲಿ ಬಲರಾಮನ ಮೇಲೆ ದಾಳಿ ಮಾಡಿದಾಗ ಅದಕ್ಕೆ ಹಸಿವಾಗಿರಬಹುದು ಎಂದು ಭಾವಿಸಿ ಬಲರಾಮ ಒಂದು ಹಿಡಿ ಹುಲ್ಲು ಕಿತ್ತು ಆ ಹಸುವಿನತ್ತ ಬಿಸಾಕುತ್ತಾನೆ. ಆ ಹುಲ್ಲು ಹಣೆಗೆ ತಾಗಿ ಮಾಯಾವಿ ಹಸು ಸತ್ತಂತೆ ನಟಿಸುತ್ತದೆ. ಕೃಷ್ಣ ತನ್ನ ಕೆಲವು ಗುಪ್ತಚಾರರಿಗೆ ಬ್ರಾಹ್ಮಣ ವೇಷ ತೊಡಿಸಿ ಅದೇ ಸಮಯಕ್ಕೆ ಅಲ್ಲಿಗೆ ಬರುವಂತೆ ಮೊದಲೇ ವ್ಯವಸ್ಥೆ ಮ ಬಲರಾಮನ ಹುಲ್ಲು ತಾಗಿ ಸತ್ತ ಆ ಹಸುವನ ಆ ನಕಲಿ ಬ್ರಾಹ್ಮಣರು (ಈಗಿನ ನಕಲಿ ದೇ ಇದು ಘೋರ ಗೋಹತ್ಯೆಯೆಂದು ಹುಯಿಲ ಗೋವಧೆ ಮಹಾಪಾಪವಾಗಿದ್ದು ಅದರ ಪ್ರಾಯ ಬಲರಾಮನು 18 ದಿನಗಳ ಕಾಲ ತೀರ್ಥ ಹೋಗಬೇಕೆಂದು ಆ ಕಪಟ ಬ್ರಾಹ್ಮಣರು ಅದೇ ಪ್ರಕಾರ ಯುದ್ಧ ಶುರುವಾಗುವ ದ ತೀರ್ಥಯಾತ್ರೆಗೆ ಹೋದ ಬಲರಾಮ ಕೊನೆಯ ಮರಳಿ ಬರುವಂತೆ ಕೃಷ್ಣ ವ್ಯವಸ್ಥೆ ಮಾಡುತ್ತಾನ 18 ದಿನ ಮಾತ್ರ ಕುರುಕ್ಷೇತ್ರ ಯುದ್ಧ ನಡ ಎಂದು ಕೃಷ್ಣನಿಗೆ ಮೊದಲೇ ಗೊತ್ತಿರುವಾಗ ಮನುಷ್ಯ ಹಾಗೂ ಪ್ರಾಣಿಗಳನ್ನು ಬಲಿ ಪಡೆ ತಪ್ಪಿಸುವ ತಾಕತ್ತು ಸಹ ಅವನಿಗೆ ಇತ್ತು ಸಾಬೀತಾಯಿತು. ಆದರೂ ಅವನು ಆ ಘ ಮಾಡದಿರುವುದು ಕೃಷ್ಣ ದೇವರಲ್ಲ ಎಂಬುದ ಹೀಗೆ ಗೋಹತ್ಯೆಯನ್ನು ರಾಜಕೀಯ ದುರುಪಯೋಗ ಮಾಡಿದ್ದು ಕೃಷ್ಣನೇ ಮೊದ ಪ್ರಸಂಗದ ಮೇಲೆ ಕೃಷ್ಣ-ಸಂಧಾನ ಎಂಬ ಯ ಕರಾವಳಿಯಲ್ಲಿ ಜನಪ್ರಿಯವಾಗಿದೆ. ಗೋ-ರಾಜಕೀಯಕ್ಕೆ ಕೃಷ್ಣನೇ ಮೊದಲ ಗುರು. ಈಗಿನ ಗುಗ್ಗುರು ಅಷ್ಟೇ.

■ ಪ್ರವೀಣ್ ಎಸ್ ಶೆಟ್ಟಿ, ಮ

ಭಾರತವೂ ಪಾಕಿಸ್ತಾನದಂತಾದಾಗ...

ಅದು ಚಳಿಗಾಲದ ಒಂದು ದಿನ. ಅವತ್ತು ಎಷ್ಟು ಇತ್ತೆಂದರೆ ಹೊರ ಬಿಡುತ್ತಿದ್ದ ಉಸಿರು ಹವೆಯಾಗಿ ಮ್ಮುತ್ತಿತ್ತು. ನನ್ನೊರ್ವ ಗೆಳತಿ ಮತ್ತು ನಾನು ಎಲ್ಲಿಗೋ ಯುತ್ತ ಹೋಗುತ್ತಿದ್ದೆವು. ಆಗ ರಸ್ತೆಬದಿ ಒಬ್ಬ ಬೇಯಿಸಿದ ನೆಸ್ಟ್‌ಗಳನ್ನು ಮಾರುತ್ತಿದ್ದ. ಅವುಗಳ ರುಚಿ ನಮ್ಮ ಯಿಸಿದ ಕಡಲೆಕಾಯಿ ತರಹ ಇರುತ್ತದೆ. ನಾವಿಬ್ಬರೂ ದಿಷ್ಟು ಚೆಸ್ಟ್‌ನಟ್‌ಗಳನ್ನು ಕೊಳ್ಳಲು ನಿಂತೆವು. ಆತನ ಬಣ್ಣ ನೋಡಿದ ನನ್ನ ಇಂಗ್ಲೆಂಡಿನ ಗೆಳತಿ "ನೀವು ವ ದೇಶದವರು?" ಎಂದು ಕೇಳಿದಳು. ಆತ ಕಿಸ್ತಾನ" ಎಂದು ಹೇಳುತ್ತ ನನಗೆ ಆಕೆಗಿಂತ ಹೆಚ್ಚಿನ ನೆಸ್ಟ್‌ಗಳನ್ನು ಕೊಟ್ಟ. ಅದನ್ನು ಕಂಡು ಚಕಿತಳಾದ ಗೆಳತಿ "ಈಕೆಗೆ ಯಾಕೆ ಹೆಚ್ಚಿಗೆ ಕೊಡುತ್ತಿದ್ದೀರಿ? ಕೆ ಭಾರತದವಳು" ಎಂದಳು. ಆತ ನಗುತ್ತಾ ದರೇನಂತೆ. ನಾವೆಲ್ಲ ಒಂದೆ" ಎಂದ. ಇದು ನಡೆದದ್ದು ರಿಸ್‌ನಲ್ಲಿ. ಹೀಗೆ ಇಂಗ್ಲೆಂಡ್‌ನಲ್ಲೂ ಹಲವಾರು ಬಾರಿ ಯಿತು. ಲಂಡನ್‌ನಲ್ಲಿರುವ 'ಇಂಡಿಯನ್' ಹೋಟೆಲ್‌ಗಳನ್ನು ನಡೆಸುವವರು ಹೆಚ್ಚಾಗಿ ಭಾರತ ಮೂಲದವರಲ್ಲ, ಬದಲಾಗಿ ಪಾಕಿಸ್ತಾನ್ ಮೂಲದವರು. ಂಡಿಯನ್' ಹೋಟೆಲ್‌ಗಳಿಗೆ ಹೋದಾಗ ನಾನು ರತೀಯಳು ಎಂದು ಗೊತ್ತಾದರೂ ಪಾಕಿಸ್ತಾನ ಮೂಲದ ಲೀಕರು ನನ್ನನ್ನು ಚೆನ್ನಾಗಿ ಮಾತನಾಡಿಸುತ್ತಾ, ನನಗೆ ಚ್ಚಿನ ಗಮನ ಕೊಡುತ್ತ ಉಪಚರಿಸುತ್ತಿದ್ದರು.



ಪಾಕಿಸ್ತಾನದ ಸಾಮಾನ್ಯ ಜನ ಭಾರತಕ್ಕೆ ಬಂದಾಗ ರತೀಯರು ಅವರನ್ನು ಚೆನ್ನಾಗಿಯೇ ನೋಡಿಕೊಳ್ಳುತ್ತಾರೆ, ರೊಂದಿಗೆ ಸಹಜವಾಗಿಯೇ ನಡೆದುಕೊಳ್ಳುತ್ತಾರೆ. ರತದ ಸಾಮಾನ್ಯ ಜನ ಪಾಕಿಸ್ತಾನಕ್ಕೆ ಹೋದಾಗ ಅಲ್ಲಿನ ರೂ ನಮ್ಮವರೊಂದಿಗೆ ಮನುಷ್ಯರಾಗಿಯೇ ವರ್ತಿಸುತ್ತಾರೆ, ತ್ತಮವಾಗಿ ಉಪಚರಿಸುತ್ತಾರೆ. ನಮ್ಮವರಾಗಲಿ, ಅವರಾಗಲಿ ರನ್ನೂ ಶತ್ರುಗಳು ಎಂಬಂತೆ ವರ್ತಿಸುವುದಿಲ್ಲ. ಕೆಂದರೆ ಎರಡೂ ದೇಶಗಳಲ್ಲಿ ವಾಸಿಸುವ ಹೆಚ್ಚಿನ ರು ದೇಶ ಅಂದರೆ ಸರ್ಕಾರವಲ್ಲ, ಮನುಷ್ಯರು ಎಂದು ಿರುವ ಮಾನವತಾವಾದಿಗಳು, ಶಾಂತಿಪ್ರಿಯರು.

ಆದರೆ ಎರಡೂ ದೇಶಗಳಲ್ಲಿ ಇರುವ ೂಲಭೂತವಾದಿಗಳು ಮಾತ್ರ ಪರದೇಶದವರೊಂದಿಗೆ ತ್ರವಲ್ಲ, ತಮ್ಮದೇ ದೇಶದ ಪರಧರ್ಮದವರೊಂದಿಗೂ ಪಾತಕಿಗಳಂತೆ ವರ್ತಿಸುತ್ತಾರೆ. ಪಾಕಿಸ್ತಾನದ ಹಿರಿಯ ಜಕಾರಣಿ ಆಗಿದ್ದ ಸಲ್ಮಾನ್ ತಸೀರ್ ಎಂಬುವವರು ಆ ಶದ ಧರ್ಮನಿಂದನೆ ಕಾನೂನನ್ನು ವಿರೋಧಿಸಿದ್ದರು. ಕಾರಣಕ್ಕೆ ಅವರ ಅಂಗರಕ್ಷಕ ತಸೀರ್ ಅವರನ್ನು ಂದು ಹಾಕಿದ್ದ. ಅದಕ್ಕೆ ಕಾರಣ ಆ ಅಂಗರಕ್ಷಕ ರ್ಮಾಂಧನಾಗಿದ್ದದ್ದು. ಹಾಗೆಯೇ ಅಲ್ಲಿನ ೂಲಭೂತವಾದಿಗಳು ಅಲ್ಲಿನ ಅಲ್ಪಸಂಖ್ಯಾತ ದೂಗಳಿಗೆ, ಜಾತ್ಯತೀತರಿಗೆ, ಪ್ರಗತಿಪರರಿಗೆ ಕೊಟ್ಟಿರುವ ಂಸೆಗಳಿಗೆ, ಮಾಡಿರುವ ಕೊಲೆಗಳಿಗೆ ಲೆಕ್ಕವಿಲ್ಲ.

ಬಾಂಗ್ಲಾ ದೇಶದಲ್ಲೂ ಇತ್ತೀಚೆಗೆ ನಾಸ್ತಿಕರನ್ನು ಡುಹಗಲೇ ಧರ್ಮಾಂಧರು ಕೊಂದು ಹಾಕುತ್ತಿದ್ದಾರೆ. ್ನ ಹಲವು ಕೋಮುವಾದಿಗಳು ಐಎಸ್ ಎಂಬ ಯೋತ್ಪಾದಕ ಸಂಘಟನೆಯನ್ನೂ ಸೇರುತ್ತಿದ್ದಾರೆ. ಫ್ಘಾನಿಸ್ತಾನದಲ್ಲಿನ ಪ್ರಸ್ತುತ ಸ್ಥಿತಿಯ ಬಗ್ಗೆ ಹೇಳುವುದೇ ೆ. ಅಲ್ಲಿ ಯಾವತ್ತು ಮೂಲಭೂತವಾದ ತಲೆ ಎತ್ತಿತೋ ತ್ತೆ ಆ ದೇಶ ವಿನಾಶದತ್ತ ಹೆಜ್ಜೆ ಹಾಕಿತ್ತು, ಅಫ್ಘಾನಿಸ್ತಾನ ಸರ್ವನಾಶವಾಗುವ ಹಂತಕ್ಕೆ ಬಂದು ನಿಂತಿದೆ.

ಪಾಕಿಸ್ತಾನ ಯಾವತ್ತು ಇಸ್ಲಾಮ್ ದೇಶವಾಯಿತೋ ತ್ತಿಂದ ಅದು ತನ್ನ ಸಾಮಾನ್ಯ ಜನರನ್ನು ರಕ್ಷಿಸುವುದಿರಲಿ, ಪ್ರಮುಖ ನೇತಾರರನ್ನೂ ರಕ್ಷಿಸಿಕೊಳ್ಳುವಲ್ಲಿ ಮತ್ತೆ ತ್ತೆ ಸೋಲುತ್ತಾ ಸಾಗಿದೆ. ಹಾಗೆಯೇ ಯಾವಾಗ ಂಗ್ಲಾದೇಶದಲ್ಲೂ ಮೂಲಭೂತವಾದ ಹೆಚ್ಚಾಗುತ್ತಾ ೋಯಿತೋ ಅಲ್ಲೂ ಧರ್ಮದ ಹೆಸರಿನಲ್ಲಿ ಜನರನ್ನು ಕೊಚ್ಚಿ ಕೊಂದು ಹಾಕುವುದೂ ಸಾಮಾನ್ಯವಾಗುತ್ತಿದೆ.

ಅಕ್ಕಪಕ್ಕದ ದೇಶಗಳಲ್ಲಿ ಧರ್ಮಾಧಾರಿತ ರಾಜಕಾರಣ ತಂದೊಡ್ಡಿರುವ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡೇ ಭಾರತದ ಜಾತ್ಯತೀತರು ಧರ್ಮಾಧಾರಿತ ಹಿಂದೂತ್ವವನ್ನು ವಿರೋಧಿಸುತ್ತಾ ಬಂದಿರುವುದು. ಆದರೆ ಜಾತ್ಯತೀತರು ಪ್ರತಿ ಬಾರಿ ಎಚ್ಚರಿಸಿದಾಗಲೂ ಹಿಂದೂತ್ವವಾದಿಗಳಿಂದ ಬಂದಿರುವ ಪ್ರತಿಕ್ರಿಯೆ "ಬೇಕಿದ್ದರೆ ನೀವು ಪಾಕಿಸ್ತಾನಕ್ಕೆ ಹೋಗಿ". ಭಾರತ ಪಾಕಿಸ್ತಾನದಂತಾಗಕೂಡದು ಎಂದರೆ "ನೀವು ಅಲ್ಲಿಗೆ ಹೋಗಿ" ಎಂದು ಉತ್ತರಿಸುವವರು ಇನ್ನೆಷ್ಟು ಮೂರ್ಖರಿರಬೇಕು.

ಬಾಲಿವುಡ್ ನಟ ಶಾರುಖ್ ಖಾನ್ ಭಾರತದಲ್ಲಿ ಅಸಹಿಷ್ಣುತೆ ಹೆಚ್ಚಾಗುತ್ತಿದೆ ಎಂಬ ಆತಂಕವನ್ನು ವ್ಯಕ್ತಪಡಿಸಿದರೆ ಸಾಧ್ವಿ ಪ್ರಾಚಿ ಎಂಬಾಕೆ "ಆತ ಪಾಕಿಸ್ತಾನದ ಏಜೆಂಟ್. ಅವನು ಪಾಕಿಸ್ತಾನಿಗಳಂತೆಯೇ ವರ್ತಿಸುತ್ತಾನೆ. ಆತ ಪಾಕಿಸ್ತಾನಕ್ಕೆ ಹೋಗಬೇಕು" ಎಂದು ಚೀರುತ್ತಾಳೆ.

ಯು.ಆರ್.ಅನಂತಮೂರ್ತಿ "ಮೋದಿ ಪ್ರಧಾನಿ ಆದ ಭಾರತದಲ್ಲಿ ನಾನಿರಲು ಇಚ್ಛಿಸಲಾರೆ" ಎಂದರೆ ಕೊಲೆಗಾರ ನರೇಂದ್ರ ಶೆಟ್ಟಿ ಅವರಿಗೆ ಪಾಕಿಸ್ತಾನಕ್ಕೆ ಒನ್ ವೇ ಟಿಕೆಟ್ ಕಳುಹಿಸುತ್ತಾನೆ.

ಇನ್ನೊಬ್ಬ ನಟ ಆಮೀರ್ ಖಾನ್ ಹೆಚ್ಚುತ್ತಿರುವ ಧರ್ಮಾಂಧತೆಗೆ ಹೆದರಿರುವ ತನ್ನ ಪತ್ನಿ "ಬೇರೆ ದೇಶಕ್ಕೆ ಹೋಗೋಣವೆ" ಎಂದು ಒಮ್ಮೆ ಕೇಳಿದ್ದಳು ಎಂದದ್ದೇ ತಡ, ಹಿಂದೂ ಮಹಾಸಭಾದ ಮುಖ್ಯಸ್ಥ "ಹಿಂದೂ ಮಹಿಳೆಯನ್ನು ಮದುವೆ ಆಗಿರುವ ಆಮೀರ್ ಖಾನ್ ಒಂದೋ 'ಘರ್ ವಾಪಸಿ' ಯೋಜನೆಯಡಿ ಹಿಂದೂ ಧರ್ಮಕ್ಕೆ ಮರು ಮತಾಂತರಗೊಳ್ಳಬೇಕು, ಇಲ್ಲ ಪಾಕಿಸ್ತಾನಕ್ಕೆ ತೊಲಗಬೇಕು" ಎಂದು ಅಬ್ಬರಿಸುತ್ತಾನೆ.

ಗೋಮಾಂಸ ತಿನ್ನುವ ಹಕ್ಕನ್ನು ಕಸಿದುಕೊಳ್ಳಬಾರದು ಎಂದರೆ, ಮುಕ್ತಾರ್ ಅಬ್ಬಾಸ್ ನಕ್ವಿ ಎಂಬ ಮುಸಲ್ಮಾನ ಮಂತ್ರಿಯೇ "ಗೋಮಾಂಸ ತಿನ್ನ ಬಯಸುವವರು ಬೇಕಿದ್ದರೆ ಪಾಕಿಸ್ತಾನಕ್ಕೆ ಹೋಗಲಿ" ಎಂದು ಫತ್ವಾ ಹೊರಡಿಸುತ್ತಾನೆ.

ಮೋದಿ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಏರುತ್ತಿರುವ ಅಸಹಿಷ್ಣುತೆಯನ್ನು ಖಂಡಿಸಿ ಲೇಖಕರು ತಮ್ಮ ಪ್ರಶಸ್ತಿಗಳನ್ನು ಹಿಂದಿರುಗಿಸಿದರೆ ಅದೂ ಕೂಡ ಪಾಕಿಸ್ತಾನ ಪ್ರಚೋದಿತ ಆಂದೋಲನವಾಗಿ ಚೆಡ್ಡಿಗಳಿಗೆ ಕಾಣಿಸುತ್ತದೆ.

ಮೋದಿ ತನ್ನ ಪ್ರಮಾಣವಚನ ಸ್ವೀಕರಿಸುವ ಸಮಾರಂಭಕ್ಕೆ ಪಾಕಿಸ್ತಾನದ ಪ್ರಧಾನ ಮಂತ್ರಿ ನವಾಜ್ ಶರೀಫರನ್ನು ಆಹ್ವಾನಿಸಿದರೆ ಅದು ಹಿಂದೂತ್ವವಾದಿಗಳಿಗೆ ಮುತ್ಸದ್ದಿತನದಂತೆ ಕಾಣಿಸುತ್ತದೆ. ಆತ ಆಹ್ವಾನವಿಲ್ಲದೆ ನವಾಜ್ ಶರೀಫನ ಮೊಮ್ಮಗಳ ಮದುವೆಗೆ ಹೋದರೆ ಅದು ಸ್ವಾಗತಾರ್ಹ ವಿದೇಶಾಂಗ ನೀತಿ ಎಂದು ಚಪ್ಪಾಳೆ ಹೊಡೆಯುತ್ತಾರೆ. ಆತ ಪಾಕಿಸ್ತಾನದ ಪ್ರಧಾನಿಯ ತಾಯಿಗೆ ಸೀರೆಯನ್ನು ಉಡುಗೊರೆಯಾಗಿ ಕೊಟ್ಟರೆ ಅದು ಮಾತೃಪ್ರೇಮ ಎಂದು ಬಣ್ಣಿಸುತ್ತಾರೆ. ಯಾವ ಪಠಾಣ್‌ಕೋಟ್ ಮೇಲೆ ಪಾಕಿಸ್ತಾನದ ಭಯೋತ್ಪಾದಕರು ದಾಳಿ ಮಾಡಿದರೋ, ಆ ದಾಳಿಯ ತನಿಖೆಗೆ ಪಾಕಿಸ್ತಾನದ ಸೈನ್ಯಕ್ಕೆ ಮೋದಿ ಅವಕಾಶ ಮಾಡಿಕೊಟ್ಟರೆ ಅದು ಸತ್ಯವನ್ನು ಹೊರಗೆಳೆಯುವ ಸೂತ್ರ ಎಂದು ಪ್ರಶಂಸಿಸುತ್ತಾರೆ.

ಆದರೆ ನಟಿ ರಮ್ಯಾ "ಪಾಕಿಸ್ತಾನದ ಜನ ನಮ್ಮ ತರಹವೇ ಇದ್ದಾರೆ" ಎಂದಿದ್ದನ್ನೇ ದೊಡ್ಡದು ಮಾಡಿ "ಆಕೆ ಪಾಕಿಸ್ತಾನ್ ಪ್ರೇಮಿ. ಆಕೆ ಅಲ್ಲಿಗೆ ಹೋಗಲಿ" ಎಂದು ಪ್ರತಿಭಟಿಸುತ್ತಾರೆ. ನಟ ಜಗ್ಗೇಶ್ ತರಹದ 'ಮೇಧಾವಿ'ಗಳು "ನಾಲ್ಕಕ್ಷರ ಓದಿದವರಿಂದ, ಅನುಭವ ಇಲ್ಲದವರಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ? ಆಕೆಗೆ ನೊಬೆಲ್ ಪೀಸ್ ಪ್ರಶಸ್ತಿ ಬೇಕಿದೆ. ಬಿಲ್ ಕ್ಲಿಂಟನ್ ಜೊತೆ ಫೋಟೋ ತೆಗೆಸಿಕೊಳ್ಳಬೇಕಿದೆ, ಅದಕ್ಕೆ ಹೀಗೆಲ್ಲ ಹೇಳಿದ್ದಾಳೆ" ಎಂದು ಜರಿಯುತ್ತಾರೆ. ಈ ಜಗ್ಗೇಶ್ ಎಂತಹ ಅದ್ಭುತ ಚಿಂತಕ ಎಂದರೆ, ಕಾರ್ಗಿಲ್ ಯುದ್ಧ ನಡೆಯುತ್ತಿದ್ದ ಸಂದರ್ಭದಲ್ಲಿ ಕಾರ್ಗಿಲ್ ಯೋಧರಿಗೆಂದು ಕನ್ನಡ ಚಿತ್ರರಂಗ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಆ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಜಗ್ಗೇಶ್'ಜಿ' ಅವರು "ಭಾರತೀಯರೆಲ್ಲರೂ ಗಡಿಯಲ್ಲಿ ನಿಂತು ಉಚ್ಚೆ ಉಯ್ದರೆ ಪಾಕಿಸ್ತಾನ ಇನ್ನಿಲ್ಲದಂತೆ ಮುಳುಗಿಹೋಗುತ್ತದೆ" ಎಂದಿದ್ದ ಪುಣ್ಯಾತ್ಮ.

ಹಿಂದೂತ್ವವಾದಿಗಳ ಪ್ರಮುಖ ನಾಯಕರಲ್ಲಿ ಒಬ್ಬನಾದ ರಕ್ಷಣಾ ಸಚಿವ ಮನೋಹರ್ ಪರಿಕ್ಕರ್ "ಪಾಕಿಸ್ತಾನಕ್ಕೆ ಹೋಗುವುದೆಂದರೆ ನರಕಕ್ಕೆ ಹೋಗುವಂತೆ" ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ. ಹಾಗಾದರೆ ಭಾರತ- ವಿಶೇಷವಾಗಿ ಮೋದಿ ಪ್ರಧಾನಿ ಆದ ಮೇಲೆ-ಸ್ವರ್ಗದಂತಿದೆಯಾ?

ಕಂಡಹಾಗೆ

ಮೋದಿ ಪ್ರಧಾನಿ ಆದ ಒಂದು ತಿಂಗಳಲ್ಲೇ ಪುಣೆಯಲ್ಲಿ ಒಂದು ಘಟನೆ ನಡೆಯಿತು. ಅವತ್ತು ಯಾರೋ ಬುದ್ಧಿಹೀನರು ಸಾಮಾಜಿಕ ಜಾಲತಾಣಗಳಲ್ಲಿ ಶಿವಾಜಿ ಮತ್ತು ಬಾಳ್‌ಠಾಕ್ರೆಯನ್ನು ಅವಮಾನಿಸುವ ಚಿತ್ರಗಳನ್ನು ಹಾಕಿದ್ದರು. ಆ ಚಿತ್ರಗಳಿಗೂ ಮೋಹ್ಸಿನ್ ಶೇಕ್ ಎಂಬ 24 ವರ್ಷ ವಯಸ್ಸಿನ ಟೆಕ್ಕಿಗೂ ಸಂಬಂಧವೇ ಇರಲಿಲ್ಲ. ಆದರೇನಂತೆ, ಮೋಹ್ಸಿನ್ ಮುಸಲ್ಮಾನನಾಗಿದ್ದೇ ಅವರಿಗೆ ಸಾಕಾಗಿತ್ತು, ಎಂಟು ಜನರ ಗೂಂಡಾ ಪಡೆ ಮೋಹ್ಸಿನ್‌ನನ್ನು ಹೊಡೆದು ಕೊಂದುಹಾಕಿತು.

ಮುಂಬೈಯಲ್ಲಿ ಸಿನಿಮಾ ಮಂದಿರದಲ್ಲಿ ರಾಷ್ಟ್ರಗೀತೆ ಪ್ರದರ್ಶನಗೊಂಡಾಗ ಯಾರೋ ಎದ್ದು ನಿಲ್ಲಲಿಲ್ಲ (ಕಾನೂನಿನಪ್ರಕಾರ ಎದ್ದು ನಿಲ್ಲುವುದು ಕಡ್ಡಾಯವಲ್ಲ) ಎಂದು ಅವರನ್ನು ಥಳಿಸಿ ಹೊರದಬ್ಬಿದರು. ಇತ್ತೀಚೆಗೆ ದೇಶದಾದ್ಯಂತ ವಿವಿಧ ಕಡೆ "ಭಾರತ್ ಮಾತಾ ಕಿ ಜೈ" ಎನ್ನದಿದ್ದಕ್ಕೆ ಆಗಿರುವ ದಾಳಿ ಪ್ರಕರಣಗಳಿಗೆ ಲೆಕ್ಕವಿಲ್ಲ.

ದಾದ್ರಿಯಲ್ಲಿ ಆದದ್ದು ಎಲ್ಲರಿಗೂ ಗೊತ್ತಿದೆ. ಹಾಗೆಯೇ ಉನಾ ಪ್ರಕರಣದ ವಿವರಗಳೂ ಗೊತ್ತಿದೆ. ಕಳೆದ ವಾರ ನಮ್ಮ ರಾಜ್ಯದಲ್ಲೇ ಗೋಸಾಗಾಣಿಕೆ ಸಂಶಯದ ಮೇಲೆ ಚೆಡ್ಡಿ ಹಂತಕರು ಪ್ರವೀಣ್ ಪೂಜಾರಿ ಎಂಬಾತನನ್ನು ಕೊಂದು ಹಾಕಿದ್ದಾರೆ.

ಇಂತಹ ಘಟನೆಗಳು ನಡೆದಾಗಲೆಲ್ಲ 'ಮೌನಿ' ಮೋದಿ ಸುಮ್ಮನಿದ್ದೇ ಇವುಗಳಿಗೆ ಪ್ರಚೋದನೆ ನೀಡುತ್ತಿದ್ದಾನೆ. ದೇಶದಲ್ಲಿ ಸ್ಪಷ್ಟವಾಗಿ ಧರ್ಮಾಂಧತೆ, ಕೋಮು ದ್ವೇಷ, ಜಾತಿ ಹೆಸರಲ್ಲಿ ದಬ್ಬಾಳಿಕೆ ಇತ್ಯಾದಿಗಳು ಹೆಚ್ಚಾಗುತ್ತಿವೆ. ಕೋಮುವಾದಿ ಮೋದಿಯ ನೇತೃತ್ವದಲ್ಲಿ ಭಾರತ ಪಾಕಿಸ್ತಾನದಂತಾಗುತ್ತಿದೆ.

ಇದನ್ನು ಭಾರತದ ಜಾತ್ಯತೀತರು ಮಾತ್ರವಲ್ಲ, ಪಾಕಿಸ್ತಾನದ ಖ್ಯಾತ ಮಹಿಳಾವಾದಿ, ಲೇಖಕಿ ಮತ್ತು ಜಾತ್ಯತೀತವಾದಿ ಆಗಿರುವ ಫಾಹ್ಮಿದಾ ರಿಯಾಜ್ ಅವರು ಎರಡು ವರ್ಷಗಳ ಹಿಂದೆಯೇ ಗುರುತಿಸಿದ್ದರು. ಫಾಹ್ಮಿದಾ ಅವರನ್ನು ಭಾರತದ ಒಂದು ಸಾಹಿತ್ಯ ಸಮ್ಮೇಳನಕ್ಕೆ ಕರೆದಿದ್ದಾರೆ, ಅವರು 'ತುಮ್ ಬಿಲ್‌ಕುಲ್ ಹಮ್ ಜೈಸೇ' ಎಂಬ ತಮ್ಮ ಒಂದು ಪದ್ಯವನ್ನು ವಾಚಿಸಿದ್ದರು. ಆ ಪದ್ಯವನ್ನು ಸಹೋದರ ಮತ್ತು ಖ್ಯಾತ ಚಿತ್ರ ನಿರ್ದೇಶಕ ಬಿ.ಸುರೇಶ್ ಭಾವಾನುವಾದ ಮಾಡಿದ್ದಾರೆ. ಅದನ್ನು ಇಲ್ಲಿ ನಿಮಗೆ ನೀಡುತ್ತಿದ್ದೇನೆ.

ಓ! ಹಾಗಾದಾರೆ ನೀವೂ ನಮ್ಮ ಹಾಗೆಯೇ ಗೆಳೆಯರೇ!
ಇಷ್ಟು ದಿನ ಅದೆಲ್ಲಿ ಅವಿತಿದ್ದಿರಿ, ದೋಸ್ತಿಗಳೇ!

ಅದೇ ಮೂರ್ಖತನ, ಅದೇ ಜಡ್ಡುತನ
ನಾವು ಧರಿಸಿದ್ದೇವೆ ಶತಮಾನದಿಂದ.
ಅದೀಗ ನಿಮ್ಮ ಪಾದರಕ್ಷೆಯನ್ನೇರುತ್ತಿದೆ ಎಂಬ
ಅನುಮಾನದಿಂದ
ಶುಭಾಶಯ ಹೇಳುತ್ತಿದ್ದೇವೆ ಹತಾಶೆಯಿಂದ!

ಧರುಮದ ಬಾಗಿಲುಗಳು ತೆರೆದುಕೊಂಡಿವೆ
ಧರುಮದ ಬಾವುಟಗಳೂ ಹಾರತೊಡಗಿವೆ
ಇನ್ನು ನೀವು? ನೀವೂ ಕೂಡ ಎಲ್ಲವನ್ನೂ ಒರೆಸುವಿರಲ್ಲವೇ?
ನಿಮ್ಮದೇ 'ರಾಜ್ಯ' ಸ್ಥಾಪಿಸುವಿರಲ್ಲವೇ??
ಸುಂದರ ಹೂ ತೋಟದ ಅಂದಗೆಡಿಸುತ್ತೀರಲ್ಲವೇ?

ಕಾಣುತ್ತಿದೆ.
ಸಿದ್ಧತೆ ಶುರುವಾಗಿದೆ.



• ಗೌರಿ ಲಂಕೇಶ್
editorlankesh@gmail.com

ಯಾರು 'ನಿಜ' ಮೂಲದವರು
ತಿಳಿಯಬೇಕಾಗಿದೆ
ನಾಯಕರು ಹೊರಡಿಸುವ ಫರ್ಮಾನು/
ಫತ್ವಾಗಳಿಗೆ ನಮ್ಮವರಂತೆ
ನಿಮ್ಮವರು ಬಾಯ್ದೆರೆದು ಕೂತದ್ದು ಕಾಣುತ್ತಿದೆ!

ಇನ್ನು ನಮ್ಮವರಂತೆಯೇ
ನಿಮ್ಮವರೂ ಮಾತಾಡುತ್ತಾರೆ
ಬದುಕು ಹಸನಾಗಲಿದೆ ಎಂದು ಕೀರಲುತ್ತಾರೆ!
ಬೀದಿಬೀದಿಗಳಲ್ಲಿ ರಕ್ತದ ಕಾಲುವೆ ಹರಿಸುತ್ತಾರೆ!
ಇನ್ನೆಲ್ಲಾ ಇಲ್ಲಿನಂತೆಯೇ!

ನೀವು ಆನಂದಗಳಿಲ್ಲದ ಬದುಕ ಬೇಯಿಸುತ್ತೀರಿ
ಸ್ವಚ್ಛ ಗಾಳಿಗೆ ಎಡೆಬಿಡದೆ ತಹತಹಿಸುತ್ತೀರಿ
ಕೊರಗುತ್ತಿರುವ ನಾವು ನಗುತ್ತೇವೆ ನೋಡುತ್ತಾ
ನಮ್ಮಂತಾದ ನಿಮ್ಮನ್ನ.
ಒಡೆದು ಎರಡಾಗಿಸಿದವರು 'ಮಹಾಜಾಣರು' ಎನ್ನುತ್ತಾ!

ಇನ್ನಷ್ಟೆ!
ವಿದ್ಯೆ - ಶಿಕ್ಷಣಗಳನು ಗಾಳಿಗೆ ತೂರಿಬಿಡಿ
ರಸ್ತೆಯಲ್ಲಿನ ಹಳ್ಳತಿಟ್ಟಿನ ಚಿಂತೆ ಬಿಟ್ಟುಬಿಡಿ
ಕಲ್ಪಿತ ನಿನ್ನೆಗಳ ಸುಖದಲ್ಲಿ ಮೈಮರೆತು ಕೂತುಬಿಡಿ
ತಜ್ಞರಾಗುವವರೆಗೆ ತಾಲೀಮು ಮಾಡಿಬಿಡಿ!
ಹಿಂದಕ್ಕೆ ದಾಪುಗಾಲಿಡುವುದನ್ನ ಬೇಗ ಕಲಿತುಬಿಡಿ!
ಇಂದಿನ ಈ ಕ್ಷಣಗಳಿಗೆ ಬೆಂಕಿ ಇಟ್ಟುಬಿಡಿ!
ನಿನ್ನೆಯ ಹಳಸುಗಳನ್ನೆ ಹಾಸಿ ಹೊದ್ದುಬಿಡಿ!


ಮತ್ತೆ ಮತ್ತೆ...
ಮತ್ತೆ ಮತ್ತೆ...
ಅದನ್ನದನ್ನೇ
ಹೇಳುತ್ತಾ ಉಳಿದುಬಿಡಿ!
"ನಮ್ಮ ಪರಂಪರೆಯ ಶ್ರೇಷ್ಠತೆಯು ಗೊತ್ತೇನಣ್ಣಾ?!
ನಮ್ಮ ಪುರಾಣ ಪುರುಷರ ಸಾಧನೆಯ ಲೆಕ್ಕವಿದೆಯೇನಣ್ಣಾ?!"

ಆಗ, ಆಗ ಸಂಗಾತಿಗಳೇ
ನೀವೂ ತಲುಪುತ್ತೀರಿ
ನಾವು ತಲುಪಿದ ತಾಣಕ್ಕೆ!

ಹೌದು, ಅನುಮಾನ ಬೇಡ!
ನೀವೀಗ ಅಲ್ಲೇ ಇದ್ದೀರಿ!
ಹೊಸಿಲು ದಾಟಿ ಒಳಗಡಿ ಇಡುವುದಷ್ಟೇ ಬಾಕಿ!
ನಮ್ಮ ನರಕದ ದರುಶನವಾಗಲಿದೆ ನಿಮಗೂ!

ರೆಕ್ಕೆ ಸುಟ್ಟ ಮೇಲೆ, ಸಂಪರ್ಕದಲ್ಲಿರಿ!
ನಮ್ಮ ಹಾಗೆಯೇ ನೀವೂ ಆಗಿದ್ದನ್ನ
ನರಕದ ನಾದ 'ಗೀತೆ' ಮಾಡೋಣ!
ಒಟ್ಟಿಗೆ ಇಬ್ಬರೂ ಹಾಡುತ್ತಾ ಸಾಯೋಣ!

ಠುಸ್ ಆದ ಈಶ್ವರಪ್ಪನ 'ಹಿಂದ



ಯಾಕೋ ಚಿಡ್ಡಿಗಳ ಟೈಮೇ ಸರಿಯಿದ್ದಂತಿಲ್ಲ. ಏನೋ ಹುನ್ನಾರ ಹಾಕಿ ಇನ್ನೇನಕ್ಕೊ ಕೈಯಿಟ್ಟರೂ ಅದೇ ಅವರಿಗೆ ಉಲ್ಟಾ ಹೊಡೆಯುತ್ತಿದೆ. ಜೆಎನ್‌ಯು ದೇಶದ್ರೋಹಿಯೆಂದು ಬಿಂಬಿಸಲು ಹೋಗಿ ಕನ್ನಯ್ಯ ಕುಮಾರ್‌ನಂಥ 'ಹೀರೋ' ಒಬ್ಬನನ್ನು ಸೃಷ್ಟಿಸಿಬಿಟ್ಟರು. ಆ ಕಾಲದಿಂದಲೂ ಕಮ್ಯುನಿಸ್ಟ್ ರಾಜಕಾರಣದಲ್ಲಿರುವ ಪ್ರಕಾಶ್ ಕಾರಟ್, ಸೀತಾರಾಂ ಯೆಚೂರಿಯಂಥವರೇ ಜನಸಾಮಾನ್ಯರ ಪಾಲಿಗೆ ಅಪರಿಚಿತರಂತಿರುವಾಗ ಸಂಘಿಗಳ ಜೆಎನ್‌ಯು ಷಡ್ಯಂತ್ರ ಅವರಿಗೇ ಮುಳುವಾಗಿ ಯೆಚೂರಿ, ಕಾರಟ್‌ರನ್ನೇ ಮೀರಿಸಿ ಕನ್ನಯ್ಯನೆಂಬ ತಾರೆಯೊಂದರ ಉದಯವಾಯಿತು!

ಹೈದರಾಬಾದ್ ವಿವಿಯಲ್ಲಾಗಿದ್ದೂ ಇದೇ! ಎಬಿವಿಪಿ ಯನ್ನು ಪೋಷಿಸಲು ಹೋಗಿ ರೋಹಿತ್ ವೇಮುಲನಂಥ ಧ್ರುವತಾರೆಯನ್ನು ಹುಟ್ಟುಹಾಕಿದರು. ಇನ್ನೂ ಗೋಹತ್ಯೆ ವಿರುದ್ಧ ಗುಜರಾತ್ ದಲಿತರನ್ನು ಮಟ್ಟಾ ಹಾಕಲೆತ್ನಿಸಿದ ಚಿಡ್ಡಿಗಳ ಕಾರ್ಯತಂತ್ರ ಅವರಿಗೇ ಮುಳುವಾಗಿ ಜಿಗ್ನೇಶ್ ಮೆವಾನಿಯಂಥ ಮತ್ತೊಬ್ಬ ದಲಿತ ಹೀರೋ ತಲೆ ಎತ್ತುವಂತಾಯ್ತು. ದಲಿತ ಚಳವಳಿಯಾಗಲಿ, ಕಮ್ಯುನಿಸ್ಟ್ ರಾಗಲಿ ಇನ್ನು ಐವತ್ತು ವರ್ಷಗಳ ಕಾಲ ಹೆಣಗಾಡಿದರೂ ಒಬ್ಬ ವೇಮುಲನನ್ನು, ಒಬ್ಬ ಮೆವಾನಿಯನ್ನು ಅಥವಾ ಒಬ್ಬ ಕನ್ನಯ್ಯನನ್ನು ಹುಟ್ಟು ಹಾಕಲು ಸಾಧ್ಯವಿತ್ತೇ?

ಕರ್ನಾಟಕದ ಮಟ್ಟಿಗೆ ನೋಡಿದರೂ ಮೊನ್ನೆಯಷ್ಟೇ ಚಿಡ್ಡಿ ಗ್ಯಾಂಗ್ ನಟಿ ರಮ್ಯಾ ವಿರುದ್ಧ ಬೊಬ್ಬೆ ಹೊಡೆಯಿತಲ್ಲ; ಅದರ ಪರಿಣಾಮವಾದರೂ ಏನು? ರಾತ್ರೋರಾತ್ರಿ ರಮ್ಯಾ ರಾಷ್ಟ್ರೀಯ ನ್ಯೂಸ್ ಚಾನಲ್ಲುಗಳ ಡಾರ್ಲಿಂಗ್ ಆಗಿ ಅಂತರರಾಷ್ಟ್ರೀಯ ಮಟ್ಟಕ್ಕೆ ಸುದ್ದಿಯಾದರು!

ಸಂಘಿಗಳ ಟೈಮೇ ಸರಿಯಿಲ್ಲವೋ ಅಥವಾ ಕೈ ಇಟ್ಟದ್ದೆಲ್ಲಾ ಹಾವಾಗಿ ಕಚ್ಚುತ್ತಿದೆಯೋ ಗೊತ್ತಾಗುತ್ತಿಲ್ಲ. ಇಲ್ಲದಿದ್ದರೆ ಬಿಜೆಪಿಯನ್ನು ಎಡಬಿಡಂಗಿ ಈಶ್ವರಪ್ಪನ 'ಹಿಂದ' ಹುಚ್ಚಾಟ ಮತ್ತು 'ರಾಯಣ್ಣ ಬ್ರಿಗೇಡಿ'ನ ಕಲ್ಯಾಟಕ್ಕೆ ಇಂಥಾ ಗತಿ ಬರುತ್ತಿತ್ತೆ?

ಊಳಿಟ್ಟ ನರಿಗಳು

ಕಳೆದ ಒಂದು ತಿಂಗಳಿಂದ ಕುದ್ಧ ಕಮಂಗಿಯಂತೆ ಈಶ್ವರಪ್ಪ 'ಹಿಂದ' ಹುಟ್ಟು ಹಾಕ್ತೇನಿ ಎಂದದ್ದೇನು? ರಾಜ್ಯಾದ್ಯಂತ ದಲಿತರು, ಹಿಂದುಳಿದವರನ್ನೆಲ್ಲ ಗುಡ್ಡೆ ಹಾಕಿ ರಾಯಣ್ಣ ಬ್ರಿಗೇಡ್ ಕಟ್ತೇನಿ ಎಂದು ಹೂಂಕರಿಸಿದ್ದೇನು? ಚಿಡ್ಡಿ ಬ್ರಿಗೇಡ್ ಮಾತ್ರ ಈಶ್ವರಪ್ಪನ ಹಿಂದ ಮತ್ತು ಬ್ರಿಗೇಡ್ ಹುಲಿ ಬಂತು ಹುಲಿ ಎಂದು ಕೇಕೆ ಹಾಕಿದ್ದೇ ಹಾಕಿದ್ದು. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಹಿಂದದ ಕತೆ ಮುಗಿದೇಹೋಯಿತು, ರಾಯಣ್ಣ ಬ್ರಿಗೇಡ್‌ಗೆ ಉತ್ತರ ಕರ್ನಾಟಕದ ಕುರುಬ ಹುಡುಗರೆಲ್ಲ ನುಗ್ಗಾಟಕ್ಕೆ ಬಿದ್ದು ಸೇರ್ಪಡೆಯಾಗಲಿದ್ದಾರೆ. ಅಲ್ಲಿಗೆ ಕಾಂಗ್ರೆಸ್ ಅಹಿಂದ ಜಪಕ್ಕೆ ಕವಡೆ ಕಿಮ್ಮತ್ತಿಲ್ಲದಂತಾಗಿ ಬಿಜೆಪಿ ಗಾಳಿ ರಭಸವಾಗೇ ಬೀಸುತ್ತೆ, ಇನ್ನೊಂದು ವರ್ಷ ಹಾಗೂಹೀಗೂ ಮುಗಿಯಿತೆಂದರೆ ತಮ್ಮದೇ ದರ್ಬಾರ್, ತಮ್ಮದೇ ಸಾಮ್ರಾಜ್ಯವೆಂಬುದು ಚಿಡ್ಡಿಗಳ ದುರಾಸೆಯಾಗಿತ್ತು.

ಯಡ್ಡಿ ರಾಜ್ಯ ಬಿಜೆಪಿಯ ಚುಕ್ಕಾಣಿ ಹಿಡಿದದ್ದೇ ಶುರುವಾದ ಈಶ್ವರಪ್ಪನ ಬಾಯಿಚಪಲದ ಫಲವಾಗಿ ಅಕ್ಷರಶಃ ಥಂಡಾ ಹೊಡೆದದ್ದು ಯಡಿಯೂರಪ್ಪನೇ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೆಜೆಪಿಯ ಅಭ್ಯರ್ಥಿಯಾಗಿ ತನ್ನನ್ನು ಮಣ್ಣು ಮುಕ್ಕಿಸಿದ ರುದ್ರೇಗೌಡರನ್ನು ಶಿವಮೊಗ್ಗದ ಜಿಲ್ಲಾಧ್ಯಕ್ಷನನ್ನಾಗಿ ನೇಮಿಸಿದ್ದೇ ಈಶ್ವರಿ ಪಿತ್ಥ ನೆತ್ತಿಗೇರಿತು. ರುದ್ರೇಗೌಡ ಒಮ್ಮೆ ಶಿವಮೊಗ್ಗ ಜಿಲ್ಲಾ ಬಿಜೆಪಿ ಅಧ್ಯಕ್ಷನಾದನೆಂದರೆ ಮುಂಬರುವ ಚುನಾವಣೆಯಲ್ಲಿ ಶಿವಮೊಗ್ಗದಿಂದ ಆತನೇ ಬಿಜೆಪಿಯ ಅಧಿಕೃತ ಅಭ್ಯರ್ಥಿಯಾಗಿ ತನ್ನನ್ನು ಕೇವಲ ವಿಧಾನ ಪರಿಷತ್ ಸದಸ್ಯನಾಗೇ ಇರಿಸುವ ಯಡ್ಡಿ ತಂತ್ರವನ್ನು ಈಶ್ವರಪ್ಪ ಸೂಕ್ಷ್ಮವಾಗೇ ಗ್ರಹಿಸಿದ್ದ. ಹೇಗೂ ಎಮ್ಮೆಲ್ಸಿಗಿರಿ ಇದ್ದೇ ಇದೆಯಲ್ಲ; ಬಿಜೆಪಿ ಅಧಿಕಾರಕ್ಕೆ ಬಂತೆಂದರೆ ಮಂತ್ರಿಗಿರಿ ಸಿಕ್ಕೇ ಸಿಗುತ್ತೆ. ಅಂಥಾದ್ದರಲ್ಲಿ ರುದ್ರೇಗೌಡರಿಗೊಮ್ಮೆ ಶಿವಮೊಗ್ಗವನ್ನು ಬಿಟ್ಟುಕೊಟ್ಟರೆ ನಿಮಗೇನೂ ನಷ್ಟವಿಲ್ಲ.....! ಎಂಬ ಯಡ್ಡಿಯ ಸಲಹೆಯೂ ಈಶ್ವರಪ್ಪನ ತಲೆ ಹೊಕ್ಕಿತ್ತು.

ತನ್ನನ್ನು ಎಮ್ಮೆಲ್ಲೆಯಾಗುವುದನ್ನು ತಪ್ಪಿಸುವ ಮೂಲಕ ರಾಜಕೀಯ ನಿರಾಶ್ರಿತನನ್ನಾಗಿ ಮಾಡುವ ಯಡ್ಡಿಯ ದೂರಾಲೋಚನೆಯೊಂದೇ ಈಶ್ವರಪ್ಪನ ಹತಾಶೆಗೆ ಕಾರಣವಾಗಿರಲಿಲ್ಲ, ಮುಂದೆ ಬಿಜೆಪಿ ಅಧಿಕಾರಕ್ಕೆ ಬಂತೆಂದರೆ ಮುಖ್ಯಮಂತ್ರಿಗಾದಿಗೆ ಕೇವಲ ಒಕ್ಕಲಿಗರು- ಲಿಂಗಾಯತರಲ್ಲಷ್ಟೇ ಹಣಾಹಣಿ ಎದ್ದರೆ ತಾನು ಅಪ್ರಸ್ತುತನಾಗಬೇಕಲ್ಲ! ಅದಕ್ಕೇ ಈಗಿನಿಂದಲೇ ಹಿಂದುಳಿದ ವರ್ಗಗಳ ಬೊಬ್ಬೆ ಶುರು ಹಚ್ಚಿಕೊಂಡರೆ.....?

ರಾಂಲಾಲ್?

ಒಂದೇ ಕಲ್ಲಲ್ಲಿ ಎರಡು ಹಕ್ಕಿ ಹೊಡೆಯುವ ಈಶ್ವರಪ್ಪನ ದಾಹ ಮೊದಮೊದಲು ಆರೆಸ್ಸೆಸ್ ಕಟ್ಟರ್‌ಗಳಿಗೆ ಅರ್ಥವಾಗಲಿಲ್ಲ. ಯಡ್ಡಿ ಅಧ್ಯಕ್ಷನಾಗಿದ್ದೇ ಮೂಲ ಬಿಜೆಪಿಯವರನ್ನು ಮೂಲೆಗೆ ತಳ್ಳಿ ಕೆಜೆಪಿಯಲ್ಲಿದ್ದ ತನ್ನ ಬಂಟರಿಗೆ ಮಣೆ ಹಾಕುತ್ತಿದ್ದಾರೆಂದೂ ಅದರಲ್ಲೂ ತನ್ನ ಜಾತಿಬಾಂಧವರನ್ನೇ ಹಿಡಿಹಿಡಿದು ಜಿಲ್ಲಾ ಅಧ್ಯಕ್ಷರನ್ನಾಗಿ ನೇಮಿಸುತ್ತಿದ್ದಾರೆಂಬ ಈಶ್ವರಪ್ಪನ ಕ್ಯಾತೆಯನ್ನು ಹೈಕಮಾಂಡ್ ಗಂಭೀರವಾಗಿ ಪರಿಗಣಿಸಿರಲಿಲ್ಲ. ಯಾವತ್ತು ಪಕ್ಷದ ಹಿರಿಯರನ್ನೆಲ್ಲ ಕಡೆಗಣಿಸಿ, ಕಾಟಾಚಾರಕ್ಕೂ ಅವರೊಂದಿಗೆ ಚರ್ಚಿಸದೆ ಪದಾಧಿಕಾರಿಗಳನ್ನು ಯಡ್ಡಿ ನೇಮಿಸುತ್ತಿದ್ದಾರೆಂಬ 'ವರಸೆ' ಶುರುವಾಯಿತೋ ಸಿ.ಟಿ. ರವಿ, ಸದಾನಂದ ಗೌಡ, ಪ್ರಹ್ಲಾದ ಜೋಷಿ, ಜಿಗಜಿಣಗಿಯಂಥವರೆಲ್ಲ ಒಳಗೊಳಗೇ ಈಶ್ವರಪ್ಪನನ್ನು ಪ್ರೋತ್ಸಾಹಿಸಲಾರಂಭಿಸಿದರು.

ಇದರಿಂದ ಮತ್ತಷ್ಟು ಪಿತ್ಥ ಕೆರಳಿದ ಈಶ್ವರಪ್ಪ ಹಳೇ ಆರೆಸ್ಸೆಸ್ ಹಿರೀಕರದ್ದೇ ಹಿತೈಷಿಕೂಟವೊಂದನ್ನು ಕಟ್ಟಿಕೊಂಡ. ಶಿವಮೊಗ್ಗದ ಹಳೇ ಚಿಡ್ಡಿ ಭಾನುಪ್ರಕಾಶ್, ದಾವಣಗೆರೆಯ ಮುದಿ ಸಂಘಿ ಶಿವಯೋಗಿಸ್ವಾಮಿ, ಮೈಸೂರಿನ ಗೋ. ಮಧುಸೂದನ್, ತಂತ್ರ ನಿಪುಣ ಸಂತೋಷ್‌ಜಿ, ಹಳೇ ಹುಲಿ ಬಿ.ಬಿ. ಶಿವಪ್ಪ ತಂಗಾ; ಹೀಗೆ ತೆರೆಮರೆಯಲ್ಲಿದ್ದು ಆರೆಸ್ಸೆಸ್ ತಂತ್ರಗಳ ವಾಹಕರಂತಿದ್ದವರನ್ನೆಲ್ಲ ಯಡ್ಡಿ ವಿರುದ್ಧ ಎತ್ತಿಕಟ್ಟಿದ. ಯಡ್ಡಿ ರಾಜ್ಯಾಧ್ಯಕ್ಷನಾಗಿದ್ದು ಮೂಲ ಬಿಜೆಪಿಗಳಿಗಿಂತಲೂ ಕೆಜೆಪಿಯವರಿಗೇ ಅಧಿಕ ಲಾಭವಾಗುತ್ತಿದೆ ಎಂಬ ಕೂಗಿನೊಂದಿಗೆ ಶುರುವಾದ ಈಶ್ವರಿ ಬಂಡಾಯಕ್ಕೆ ವ್ಯಾಪಕ ಪ್ರಚಾರವೂ ಸಿಕ್ಕಿತ್ತು. ಇವರೆಲ್ಲರನ್ನೂ ಕಟ್ಟಿಕೊಂಡೇ ದೆಹಲಿ ವಿಮಾನವೇರಿದ ಈಶ್ವರಪ್ಪ ದುಮ್ಮಾನ ತೋಡಿಕೊಳ್ಳಬೇಕಿದ್ದು ರಾಷ್ಟ್ರ ಬಿಜೆಪಿ ಅಮಿತ್ ಶಾನಲ್ಲಿ ತಾನೆ?

ಆದರೆ ಈಶ್ವರಪ್ಪನ ನಿಯೋಗ ಭೇಟಿಯಾಗಿದ್ದು ದೆಹಲಿ ಕೇಂದ್ರ ಕಚೇರಿಯಲ್ಲಿದ್ದ ಆರೆಸ್ಸೆಸ್ ವರಿಷ್ಠ ರಾಮಲಾಲ್‌ನನ್ನು. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಲ್ಲೊಬ್ಬನಾದ ರಾಮಲಾಲ್ ಸಂಘ ಪರಿವಾರದ ಹಳೇ ತಲೆ ಮತ್ತು ಸಂಘಟನೆಯಲ್ಲಿ ಹೊಣೆಗಾರಿಕೆಯ ಆಸಾಮಿ. ಕಾಟಾಚಾರಕ್ಕಷ್ಟೇ ಅಮಿತ್ ಶಾಗೆ ಮನವಿ ಒಗಾಯಿಸಿ ಬಂದರು. ಇದರರ್ಥ ಹೇಗೂ ಅಮೀತ್ ಶಾ ಯಡ್ಡಿಯನ್ನು ಬಿಟ್ಟು ಕೊಡುವುದಿಲ್ಲವಾದ್ದರಿಂದ ತಮಗೊಬ್ಬ ಪರ್ಯಾಯ ವರಿಷ್ಠರನ್ನು ಸ್ಥಾಪಿಸಿಕೊಳ್ಳುವುದು ಮತ್ತು ಖುದ್ದು ಅಮಿತ್ ಶಾನೇ ತಲೆ ಕೆರೆದುಕೊಳ್ಳುವಂತೆ ಮಾಡುವುದು!

ಹಾವೇರಿ ಸಮಾವೇಶ

ಹುಷಾರಾದ ಅಮಿತ್ ಶಾ ಎಲ್ಲ ನಾಯಕರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವಂತೆ ಯಡ್ಡಿಗೆ ಸೂಚಿಸಿದಂತೆ ಮಾಡಿ ಈಶ್ವರಪ್ಪನ ಬಾಯಿಬಂದ್ ಮಾಡಿಸಲೇನು ಬೇಕು ಅಷ್ಟು ಸಾಕೆಂದು ತೆಪ್ಪಗಾದರು. ಅಲ್ಲಿಗೆ ಈಶ್ವರಪ್ಪನ ದಂಗೆಯೂ ಮುಗಿಯಬೇಕಿತ್ತು, ಇನ್ನು ಕಾಟ ತಪ್ಪಿತೆಂದು ಯಡ್ಡಿಯೂ ರಾಜ್ಯ ಪ್ರವಾಸಕ್ಕೆ ನಿಂತರು. ಈಶ್ವರಪ್ಪ ಕೂಡ ಒಂದೆರಡು ತಿಂಗಳು ತೆಪ್ಪಗಿದ್ದಂತೆ ಓಡಾಡಿಕೊಂಡಿದ್ದ. ಆದರೆ ಓಡಾಡುತ್ತಿದ್ದು ತನ್ನ ಎರಡನೇ ಸುತ್ತಿನ ಹಾವಳಿಗಾಗಿ!

ಜೂನ್ ಮತ್ತು ಜುಲೈ ತಿಂಗಳ ಆಷಾಢದ ವಿರಾಮ ವೆಂಬಂತೆ ತೆಪ್ಪಗಿದ್ದ ಈಶ್ವರಪ್ಪನ ಹಾವಳಿ ಮತ್ತೆ ಆಗಸ್ಟ್ ಮೊದಲ ವಾರಕ್ಕೆ ಮೊಳಕೆಯೊಡೆದಿತ್ತು. ಇದ್ದಕ್ಕಿದ್ದಂತೆ ತಾನು ಹಿಂದುಳಿದ ವರ್ಗಗಳ ಸಂಘಟನೆಗೆ ಇಳೀತೀನಿ ಅಂದ. ಅದಕ್ಕೆ ರಾಯಣ್ಣ ಬ್ರಿಗೇಡ್ ಅಂತ ಹೆಸರಿಟ್ಟದ್ದೀವಿ ಎಂದ. ಸರ್ಕಾರ ದೇವರಾಜ ಅರಸರ ಜನ್ಮ ದಿನಾಚರಣೆಯನ್ನು ಅದ್ದೂರಿಯಾಗಿ ಆಚರಿಸುತ್ತ ಪದೇಪದೇ ಅಹಿಂದ ಮಂತ್ರ ಜಪಿಸುವುದರ ವಿರುದ್ಧ ಇದು ಬಿಜೆಪಿ ತಂತ್ರವೆಂದೇ ಲೆಕ್ಕಾಚಾರವಾಗಿತ್ತು. ಕಾಂಗ್ರೆಸ್ ಮತ್ತು ಸಿದ್ದು ಇದು ಪರ್ಯಾಯ ಅಹಿಂದ ಎಂದೇ ಬಿಂಬಿಸ... ಆದರೆ ದಿನಕಳೆದಂತೆ ಗೊತ್ತಾಗಿದ್ದು ಇದು ಯಡ್ಡಿ ವಿ... ಈಶ್ವರಪ್ಪನ ಎರಡನೇ ಸುತ್ತಿನ ದಾಳಿ!


ಹಾವೇರಿಯಲ್ಲಿ ಸೆಪ್ಟೆಂಬರ್‌ನಲ್ಲಿ ಭಾರೀ ಹಿಂದು... ಸಮಾವೇಶ ನಡೆಸುತ್ತೇನೆಂದೂ ಅದರ ಬೆನ್ನಲ್ಲೇ ರಾ... ಬ್ರಿಗೇಡ್ ಕೂಡ ಸ್ಥಾಪನೆಯಾಗಲಿದೆ ಎಂಬುದು ಈ... ವರಸೆ. ಒಮ್ಮೆ ರಾಯಣ್ಣ ಬ್ರಿಗೇಡ್ ಎಂದರೆ ಮ... ಹಿಂದ. ಯಾವುದು ಏತಕ್ಕೆ, ಯಾರು ಇತ್ಯಾದಿ ಏ... ಸ್ಪಷ್ಟವಿಲ್ಲ. ಇದ್ದಕ್ಕಿದ್ದಂತೆ ದೆಹಲಿಯಲ್ಲಿ ರಾಯಣ್ಣನ ... ಹಾಕಬೇಕು ಅನ್ನುವುದು. ಮತ್ತೊಮ್ಮೆ ಹಿಂದ ಸಮ... ಅನ್ನುವುದು ಮೊದಮೊದಲು ಇದು ಗಂಭೀ... ಕಾರ್ಯಕ್ರಮ ಎಂಬಂತೆಯೇ ಇತ್ತು. ಆದರೆ ಇದು ... ಕಲ್ಲಿಗೆ ಎರಡು ಹಕ್ಕಿ ಹೊಡೆಯುವ; ಅಂದರೆ ಮುಖ... ಸಿದ್ದುಗೂ ಸೆಡ್ಡು ಹೊಡೆದಂತೆ ಮತ್ತು ಯಡ್ಡಿಗೂ ... ಕೊಟ್ಟಂತೆ ಸೂಕ್ಷ್ಮವಾಗಿ ಹೆಣೆಯಲಾಗಿತ್ತು.


ತಿರುಗುಬಾಣ


ಸಿದ್ದು ಅಹಿಂದ ಮಂತ್ರ ಪಠಿಸಿದರೆ ತಮ್ಮದು ... ಅಂದರೆ ಅಲ್ಪಸಂಖ್ಯಾತರನ್ನು ಹೊರಗಿಟ್ಟು ಕೇವಲ ಹಿಂ... ವರ್ಗಗಳು ಮತ್ತು ದಲಿತರನ್ನು ಸಂಘಟಿಸು... ಮೇಲುನೋಟಕ್ಕೆ ದಲಿತರು, ಹಿಂದುಳಿದವರ ಬಗ್ಗೆ ... ಆದರೆ ಆಳದಲ್ಲಿ ಮುಸ್ಲಿಂ ದ್ವೇಷ. ದಲಿತರು, ಹಿಂ... ವರನ್ನು ಮುಸ್ಲಿಮರ ವಿರುದ್ಧ ಎತ್ತಿ ಕಟ್ಟುವುದು ... ಇದರ ಗೂಢಾರ್ಥ. ದಲಿತರು, ಹಿಂದುಳಿದವರನ್ನು ... ಕಾಂಗ್ರೆಸ್ ಮಾತ್ರವೇ ಅಲ್ಲ ಬಿಜೆಪಿಯೂ ಉದ್ಧ... ಎಂದು ಯಾರೋ ಪುಡಿ ಬಿಜೆಪಿಯೊಬ್ಬ ಹೇಳಿಕೆ ಕೆ... ದಲಿತರು ಹಿಂದುಳಿದವರನ್ನು ಅಲ್ಪಸಂಖ್ಯಾತರ ... ಬಡಿದಾಟಕ್ಕಿಳಿಸುವ ಮೂಲಕ ದಲಿತ, ಹಿಂದು... ಆಶೋತ್ತರಗಳ ಪಕ್ಕಾ ವೈರಿಯಾದ ಮನುವಾ... ಮರೆದಾಡಿಸುವ, ತನ್ಮೂಲಕ ಮುಂದೊಂದು ದಿ... ವರ್ಗಗಳನ್ನು ಮತ್ತೆ ವೈದಿಕಶಾಹಿಗೆ ಗುಲಾಮರನ್ನಾ... ಸೂಕ್ಷ್ಮತಂತ್ರ ನೆಣೆದಿದ್ದು ಚಿಡ್ಡಿ ಸಂತೋಷ್‌ಜಿ.


ಇತ್ತ ಆರೆಸ್ಸೆಸ್ ಉದ್ದೇಶ ಈಡೇರಿಸಿದಂತ... ಸಿದ್ದುಗೂ ಬರೆ ಎಳೆದಂತಾಯ್ತು. ದಲಿತ ಹಿಂದುಳಿದ... ಯಾಮಾರಿಸಿದಂತಾಯ್ತು, ಮುಸ್ಲಿಮರು-ಕ್ರೈಸ್ತರಿಗೂ ... ಹೊಡೆದಂತಾಯ್ತು ಎಂಬ ಸಂತೋಷ್‌ಜಿಯ ಪ... ಈಶ್ವರಪ್ಪ ಕೇಶವಕೃಪಾಕ್ಕೆ ಹೋಗಿ ಗಿಣಿಪಾಠ ... ಯಡ್ಡಿಗೆ ಲಗಾಮು ಸಿದ್ದುಗೆ ಗುದ್ದು ಎಂದುಕೊಂ... ಹಿರೀಕರೆಲ್ಲ ಒಳಗೊಳಗೆ ಖುಷಿಪಟ್ರೂ. ... ಮೊದಮೊದಲು ಗಿಮಿಕ್, ಮಷ್ಕಿರಿಯಂತಿದ್ದ ... ರಾಯಣ್ಣ ಬ್ರಿಗೇಡ್ ಆಗಸ್ಟ್ ಮೂರನೇ ವಾರದ ... ಗಂಭೀರ ಸ್ವರೂಪಕ್ಕೆ ಬಂದಿತ್ತು. ಆಗಸ್ಟ್ 21 ರ ಭಾ... ಬೆಂಗಳೂರಿನ ಶಾಸಕರ ಭವನದಲ್ಲಿ ಹಿಂದ ಸಮಾ... ಪೂರ್ವಭಾವಿ ಸಭೆಯೆಂದು ಸೇರಿದ ಐನಾತಿಗಳ... ಎಂಥವರು?


ಮಾಜಿ ಸಂಸದ ವಿರೂಪಾಕ್ಷಪ್ಪ, ಮುಕುಡಪ್ಪ, ... ರಾಮು, ಫೋರ್ ಟ್ವೆಂಟಿ ಮಾಮು ಮುಂತಾ...


















ಯಡ್ಡಿ ವಿರುದ್ಧ ಬಿಜೆಪಿಯಲ್ಲೇ ಅಹಿಂದ?









ಸತ್ಯವೇನೆಂಬುದು ಅವರವರ ಕಚ್ಚಾಟದ ಮೂಲಕವೇ ಬಯಲಿಗೆ ಬರುವಂತೆ ಅಪರೂಪಕ್ಕೆ ಯತ್ನಾಳರ ಬಾಯಿಂದ ಹಕೀಕತ್ತು ಹೊರಬಿದ್ದಿದೆ. ಬಸನಗೌಡ ಯತ್ನಾಳ್, ಯಡ್ಡಿ ಪರ ಮಾಡಿದ ಬ್ಯಾಟಿಂಗ್‌ನಲ್ಲಿ ಬೌಂಡರಿ ಹೊಡೆದಂತೆ ಬಾಯಿಬಿಟ್ಟದ್ದು ಬಿಜೆಪಿಯಲ್ಲಿ ಯಡ್ಡಿ ವಿರುದ್ಧ ಯಾರ್‍ಯಾರು ಕತ್ತಿ ಮಸೆಯುತ್ತಿದ್ದಾರೆಂಬ ಕಟು ಸತ್ಯವನ್ನೇ...

ಕೇಂದ್ರ ಮಂತ್ರಿ ಸದಾನಂದ ಗೌಡ, ಸಂಸದ ಜಿಗಜಿಣಗಿ, ಜಗದೀಶ್ ಶೆಟ್ಟರ್, ಪ್ರಹ್ಲಾದ್ ಜೋಷಿ, ಸಿಟಿ ರವಿ ಮತ್ತು ಆರೆಸ್ಸೆಸ್ ಕಟ್ಟಾಳು ಸಂತೋಷ್ ಜೀಯೇ ಯಡ್ಡಿ ನಾಶಕ್ಕೆ ಸೂತ್ರಧಾರಿಗಳಂತೆ. ಧೈರ್ಯವಾಗಿ ಎದುರಿಸಲಾರದೇ ಈಶ್ವರಪ್ಪನವರನ್ನು ಛೂಬಿಟ್ಟು ಇವರೆಲ್ಲ ತೆರೆಮರೆಯಿಂದ ತಂತ್ರ ರೂಪಿಸುತ್ತಾರಂತೆ. ಇವರ ಹಂಗಿಗೆ ಬಿದ್ದ ಈಶ್ವರಪ್ಪ ಸ್ವಂತ ಬುದ್ಧಿಯಿಲ್ಲದೆ ಯಡ್ಡಿಯನ್ನು ತಡವಿಕೊಂಡಿದ್ದಾರಂತೆ. ಈಶ್ವರಪ್ಪ ಏನಿದ್ದರೂ ಹರಕೆಯ ಕುರಿಯಷ್ಟೇ ಎನ್ನುವ ಯತ್ನಾಳರ ಮಾತಲ್ಲಿ ಸತ್ಯವಿಲ್ಲದಿಲ್ಲ.

ಬಿಜೆಪಿಯಲ್ಲಿ ಇನ್ನೆಂಥಾ ಅಂತಃಕಲಹ ಭುಗಿಲೆದ್ದಿದೆ ಯೆಂಬುದಕ್ಕೆ, ಯತ್ನಾಳರ ಮಾತಿಗಿಂತ ಬೇಕೆ? ಯಡ್ಡಿಯ ಮರ್ಜಿಯಿಲ್ಲದೆ ಯತ್ನಾಳ್ ಇಂಥ ಘಟಾನುಘಟಿಗಳನ್ನು ಎದುರು ಹಾಕಿಕೊಳ್ಳಲು ಹೇಗೆ ತಾನೇ ಸಾಧ್ಯ? ಇದರರ್ಥ ಬಿಜೆಪಿಯಲ್ಲೇ ಲಿಂಗಾಯತರ ಗೌಡಿಕೆ ವಿರುದ್ಧ ಅಹಿಂದ ಗುಂಪೊಂದು ತಲೆ ಎತ್ತಿದಂತಲ್ಲವೆ? ಆ ಮಟ್ಟಿಗೆ ಸಿದ್ದು ಅಹಿಂದ ಎಫೆಕ್ಟ್‌ಗೆ ಬಿಜೆಪಿ ಬಲಿಯಾದಂತಾಯ್ತು!

ವ್ವುದೋ ಕಾಲಕ್ಕೆ ಸಂಸದನಾಗಿದ್ದು ಈಗ ಬಿಪಿ, ಶುಗರ್, ಪ್ಯಾಕ್ಷದಲ್ಲೇ ಹೈರಾಣಾಗಿರುವ ವಿರೂಪಾಕ್ಷಪ್ಪ ಬದುಕಿರುವ ಗ್ಗಿಯೇ ಆತನ ಮನೆಯವರಿಗೆ ಖಾತರಿಯಿಲ್ಲ. ನಿಂತರೆ ರಲಾರ ಕೂತರೆ ಏಳಲಾರ. ಸಿದ್ದು ಕೈಯಲ್ಲಿ ಚಾಮಗೋಚರ ಬೈಸಿಕೊಂಡು ಹೊರದಬ್ಬಲ್ಪಟ್ಟ ಕುವಷ್ಟಾಗಿ ಮತ್ತೆ ಮುಖವಿಲ್ಲ. ಚಿನಾ ರಾಮು ಯಾವ ಟಿಗೆ ಯಾರಿಗಾದರೂ ತನ್ನ ತಾನೇ ಮಾರಿಕೊಳ್ಳಬಲ್ಲ; ರ್ದ್ಯಾರಿಗೂ ಹತ್ತು ಮಂದಿಯನ್ನು ಸಂಘಟಿಸುವ ತಾಕತ್ತಿಲ್ಲ. ಥ ನಕಲಿಗಳನ್ನು ಕಟ್ಟಿಕೊಂಡು ಹಿಂದ ಸಮಾವೇಶ ಡಲು ಹೊರಟ ಈಶ್ವರಪ್ಪನ ಹುಚ್ಚಾಟಕ್ಕೆ ಬಂದಿದ್ದ ೀಡಿಯಾಗಳೆಲ್ಲ ನಕ್ಕಿದ್ದೇ ನಕ್ಕಿದ್ದು.

ಅಶೋಕ್ ಆತಂಕ

"ಅಲ್ರೀ ನೀವು ದಲಿತ್ರು ಅಂತೀರಾ? ಅದ್ಯಾಕ್ರೀ ಯಣ್ಣನ ಹೆಸರಿಟ್ಟಿದ್ದೀರಿ?" ಎಂದು ವರದಿಗಾರನೊಬ್ಬ ದ್ದಕ್ಕೆ ಚಿನಾ ರಾಮು ಮಿಕಿಮಿಕಿ ನೋಡುತ್ತಿದ್ದ. ಏನೇನು ರ್ಯಕ್ರಮ ಹಾಕ್ಕೊಂಡಿದ್ರಿ ಎಂದರೆ ವಿರೂಪಾಕ್ಷಪ್ಪ ಬೆಚ್ಚಿಬ್ಬಿ ದು ಶುಗರ್ ಪ್ರಾಬ್ಲಂಗೆ ಊಟಕ್ಕೆ ಕೂತುಬಿಟ್ಟ. ಕುಡಪ್ಪನನ್ನು ಮಾತಾಡಿಸುವವರ್ಯಾರು? ಹತ್ತೇ ನಿಮಿಷಕ್ಕೆ ಂಬರಾಟ ನಡೆದಂತೆ ಹಿಂದ ಸಭೆ ಬರಖಾಸ್ತಾಯಿತು. ದಕ್ಕೆ, ಸಿಕ್ಕ ಮೀಡಿಯಾ ಪ್ರಚಾರ ಮಾತ್ರ ಚೀತವೆಂಬಂತಿತ್ತು. ಬರಬರುತ್ತ ಇದು ತನ್ನ ಬುಡಕ್ಕೇ ದಿದ್ದನ್ನು ನೋಡಿದ್ದೇ ಯಡ್ಡಿ ತನ್ನ ಚೇಲಾ ಡಿ.ಎಸ್. ರಯ್ಯನನ್ನು ಛೂಬಿಟ್ಟಿದ್ದೇ ಈಶ್ವರಪ್ಪ ವಿರುದ್ಧ ಕಾಗೋಷ್ಠಿಯ ಬಾಣ ಬಿಟ್ಟಿದ್ದ. ಪಕ್ಷದಲ್ಲೇ ಆಯಾ ತಿ, ಜನಾಂಗಗಳ ಹಿತಾಸಕ್ತಿಗೆಂದು ದಲಿತ ಮೋರ್ಚಾ, ಹಿಳಾ ಮೋರ್ಚಾ, ಹಿಂದುಳಿದವರ ಮೋರ್ಚಾ ಇತ್ಯಾದಿ ೀರ್ಚಾಗಳಿರುವಾಗ ಈಶ್ವರಪ್ಪನ ಹಿಂದ ಸಮಾವೇಶಕ್ಕೆ ವುದೇ ಅರ್ಥವಿಲ್ಲ ಎಂದುಬಿಟ್ಟ.

ಈಶ್ವರಪ್ಪ ಮಷ್ಕಿರಿಗೆಂದು ಬಿಟ್ಟ ಬಾಣ ಸರಿಯಾಗೇ ಸ ಮಾಡಿತ್ತು. ಇನ್ನೇನು ಇದು ಅತಿರೇಕಕ್ಕೆ ಹೋಗಲಿದೆ ಬ ಲಕ್ಷಣಗಳು ಕಾಣಿಸಿದ್ದು ಆಗಸ್ಟ್ 20 ರ ಹೊತ್ತಿಗೆ. ಸ್ಸೆಸ್ ಅಜೆಂಡಾ, ಮುಸ್ಲಿಮರ ವಿರುದ್ಧ ಹಿಂದ, ಅಹಿಂದ ದ್ಧ ಹಿಂದ ಎಂಬಂತೆ ಶುರುವಾದದ್ದು ಬರುಬರುತ್ತ ಪಿ ಮತ್ತು ಯಡ್ಡಿ ವಿರುದ್ಧವೇ ತಿರುಗಿತ್ತು. ಸಿದ್ದು ಂದಕ್ಕೆ ಪೂರಕವಾಗಿ ಅಂದರೆ ಕಾಂಗ್ರೆಸ್‌ಗೆ ಬಲವೆಂಬಂತೆ ಈಶ್ವರಪ್ಪ ಹಿಂದ ಸಮಾವೇಶ ಟಿಸುತ್ತಿದ್ದಾರೆಂಬ ಅಭಿಪ್ರಾಯಕ್ಕೇ ಹೆಚ್ಚು ಒತ್ತು ಸಿಕ್ಕಿತ್ತು. ರಿಂದ ನಿಜಕ್ಕೂ ಥಂಡಾ ಹೊಡೆದದ್ದು ಮಾಜಿ ಡಿಸಿಎಂ ೀಕ್. ಲಿಂಗಾಯತರು, ಒಕ್ಕಲಿಗರ ವಿರುದ್ಧ ಎಲ್ಲಿ ಪಿ ವಲಯದ ಹಿಂದುಳಿದ ದಲಿತರೇ ತಿರುಗಿಬಿದ್ದು ೀಕ್ಷವಾಗಿ ಕಾಂಗ್ರೆಸ್ ಮತ್ತು ಅಹಿಂದ ಬೆಂಬಲಕ್ಕೆ ಬಿಟ್ಟಾರೋ ಎಂಬ ಆತಂಕ ಅಶೋಕ್‌ಗಿತ್ತು. ಸಿದ್ದು ದ್ಧ ಈಶ್ವರಪ್ಪ ಶುರುವಿಟ್ಟ ಹಿಂದ ಬರುಬರುತ್ತ ಂದದ ರೂಪ ಪಡೆಯುವುದನ್ನು ನೋಡಿದ ಸೀಟಿ , ಸದಾನಂದ ಗೌಡ, ಯಡ್ಡಿ, ಶೆಟ್ಟರ್ ಥರದವರಿಗೆಲ್ಲ ವಾಗಿ ಅಮಿತ್ ಶಾಗೇ ಅಲವತ್ತುಕೊಂಡಿದ್ದಾರೆ. ಕ್ಕೂ ಮೊದಲೇ ಯಡ್ಡಿ ಮೂಲಕ ಶಾಗೆ ಈಶ್ವರಪ್ಪ ವಳಿಗಳ ಕುರಿತಂತೆ ಮಾಹಿತಿಯೂ ರವಾನೆಯಾಗಿತ್ತಲ್ಲ. ರಪ್ಪ ಹುಚ್ಚಾಟಕ್ಕೆಲ್ಲ ಒಂದು ಪೂರ್ಣ ವಿರಾಮ ಹಾಕುವ ಹೊತ್ತೇ ಆಗಸ್ಟ್ 21 ರ ಭಾನುವಾರದ ಮಂಗಳೂರಿನ ಗಾ ಯಾತ್ರಾ ಕಾರ್ಯಕ್ರಮಕ್ಕೆ ಬಂದಿದ್ದ ಅಮಿತ್ ಶಾ ಭಾಷಣಕ್ಕೂ ಮುನ್ನ ಯಡ್ಡಿಯನ್ನು ಸಂಬೋಧಿಸಿದ್ದೇ ಾಜಿ ಹಾಗೂ ಭಾವಿ ಮುಖ್ಯಮಂತ್ರಿಗಳೇ.....! ದುಬಿಟ್ಟರು!

ಸದಾನಂದ ಗೌಡ, ಸೀಟಿ ರವಿ, ಲಿಂಬಾವಳಿ, ಶ್ರೀನಿವಾಸ್ ಜಾರಿ, ಕಟೀಲು ಮುಂತಾದವರಿದ್ದ ವೇದಿಕೆಗೆ ಈಶ್ವರಪ್ಪ ದ್ದೇಶಪೂರ್ವಕವಾಗೇ ಚಕ್ಕರ್ ಹಾಕಿದ್ದ. ಆದರೂ ಸಂದೇಶ ಟ್ಟಿಸಬೇಕಲ್ಲ; ಮಾಜಿ ಹಾಗೂ ಮುಂದಿನ ಖ್ಯಮಂತ್ರಿಗಳಾದ ಯಡಿಯೂರಪ್ಪನವರೇ ಎಂದುಬಿಟ್ಟರೆ ರಪ್ಪ ಹುಚ್ಚಾಟಕ್ಕೊಂದು ತೆರೆ ಎಳೆದಂತಾಗುತ್ತದೆ ಎಂಬ ಹಾಕಿಯೇ ಅಮಿತ್ ಶಾ ಈ ತಂತ್ರ ಬಳಸಿದ್ದ. ರ್ಥ ಯಡ್ಡಿಯೇ ಮುಂದಿನ ಮುಖ್ಯಮಂತ್ರಿ ಾಯ್ತು. ಇದರ ಹಿಂದಿನ ದಿನವೇ ಆರೆಸ್ಸೆಸ್ ರಾಜ್ಯ ುಖರೊಬ್ಬರ ಮನೆಯಲ್ಲಿ ಈಶ್ವರಪ್ಪ ನಡೆಸಿದ ್‌ನಲ್ಲೂ ಯಡ್ಡಿ ಆಧಿಪತ್ಯವನ್ನು ಧಿಕ್ಕರಿಸದಂತೆ ತಾಕೀತು ದಲಾಗಿತ್ತು. ಮಂಗಳೂರಿನಿಂದ ದೆಹಲಿಗೆ ವಾಪಸ್ಸಾಗುವ ಪೆ ಈಶ್ವರಪ್ಪರನ್ನು ಸಂಪರ್ಕಿಸಿದ ಅಮಿತ್ ಶಾ ಹಿಂದ, ೀಡ್ ಹುಚ್ಚಾಟವನ್ನೆಲ್ಲ ನಿಲ್ಲಿಸಿ ಮಿಷನ್-150 ಗೆ ಕೆಡಿಸಿಕೊಳ್ಳುವಂತೆ 'ಆದೇಶ' ನೀಡಿದ್ದು ಕೂಡ ಕಾರಣವಿರಬೇಕು.


ಇಷ್ಟಾಗಿದ್ದೇ ಈಶ್ವರಪ್ಪನ 'ಹಿಂದ' ಸದ್ದೂ ಇಲ್ಲ, ರಾಯಣ್ಣ ೀದೂ ಬರಖಾಸ್ತು!

ಅಂದರೆ ಈ ತನಕ ಈಶ್ವರಪ್ಪ ಮಾಡಿದ್ದೆಲ್ಲ ಮಂಗಾಟ! ವಿಚಿತ್ರವೆಂದರೆ ಸಿದ್ದು ಅಹಿಂದಕ್ಕೆ ಸೆಡ್ಡು ಹೊಡೆಯಲು ಗಿ ಪರೋಕ್ಷವಾಗಿ ಅಹಿಂದವನ್ನೇ ಪೋಷಿಸಿದ್ದ. ಪ್ರಚಾರ ದ್ದ ಮತ್ತು ಸಿದ್ದು ಅಭಿಮಾನಕ್ಕೇ ನೆರವಾಗಿದ್ದ. ತನ್ಮೂಲಕ ಹಿಂದು ಷಡ್ಯಂತ್ರ, ಅದಕ್ಕೇ ತಿರುಗುಬಾಣವಾಗುವಲ್ಲೂ, ಬಲ್ಲದಂತೆ ಕಾಂಗ್ರೆಸ್ಸಿಗೆ ಉಪಕರಿಸಿದ್ದ!

ಯಾಕೋ ಬಿಜೆಪಿಯ ಟೈಮೇ ಸರಿಯಿಲ್ಲ!

■ ರಾ. ಸೋಮನಾಥ್

ಈಶ್ವರಪ್ಪನ ರಾಯಣ್ಣ



ನಮ್ಮ ಈ ವ್ಯವಸ್ಥೆಯೊಳಗಿನ ಶಿಕ್ಷಣ ಸಂಸ್ಥೆಗಳು, ಸರಕಾರಿ ಕಚೇರಿಗಳು ಮತ್ತು ರಾಜಕಾರಣದೊಳಗೆ ಹರಡಿಕೊಂಡಿರುವ ಕೆಲ ಧೀಮಂತ ಮನುಷ್ಯಗಳು ಹಠಾತ್ತನೆ ಜಾತಿ ಹೆಸರಿನಲ್ಲಿ ಚೀರಿಕೊಳ್ಳುತ್ತವೆ. ಅದು ಅವರ ಕಡೆಯ ಅಸ್ತ್ರ. ಯಾಕೆಂದರೆ ಇಲ್ಲಿ ವೈಯಕ್ತಿಕ ನಿಂದನೆಗೆ ಕಿವಿಗೊಡದ ಜನ ಜಾತಿ ಹೆಸರಿಡಿದು ಟೀಕಿಸಿದಾಗ ವ್ಯಗ್ರಗೊಂಡು ಒಟ್ಟಾಗುವುದು ಹಿಂದಿನಿಂದಲೂ ನಡೆದುಬಂದಿದೆ. ಇದು ಮೂರ್ಖರಿಗಿಂತ ಬುದ್ಧಿವಂತರಲ್ಲೇ ಹೆಚ್ಚು.

ಈಗ "ನನ್ನ ರಕ್ತವೇ ಆರೆಸ್ಸೆಸ್ಸು" ಎಂದು ಬಹಿರಂಗವಾಗಿಯೇ ಹೇಳಿಕೊಂಡಿರುವ ಈಶ್ವರಪ್ಪನವರು, ಕಡೆಯ ಅಸ್ತ್ರವಾಗಿ ಜಾತಿಯ ಸಂಘಟನೆಗೆ ತೊಡಗಿದ್ದಾರೆ. ಇದಂತೂ ಅವರ ಹಣೆಬರಹ, ಬೇಕಾದ್ದು ಮಾಡಿಕೊಳ್ಳಲಿ. ಆದರೆ ಸ್ವಾತಂತ್ರವೀರ ಸಂಗೊಳ್ಳಿ ರಾಯನಾಯಕನ ಮೊರೆ ಹೊಕ್ಕಿರುವುದು ಖಂಡನೆಗೆ ಯೋಗ್ಯ. ಏಕೆಂದರೆ ರಾಯನಾಯಕ ಈ ಮಣ್ಣಿನ ಸ್ವಾಭಿಮಾನದ ಸಂಕೇತ, ಹೋರಾಟದ ಸ್ಫೂರ್ತಿ. ಬೈಲಹೊಂಗಲ, ಖಾನಾಪುರ, ಕಿತ್ತೂರು, ಬೆಳಗಾವಿ ಇಲ್ಲೆಲ್ಲಾ ಈ ಸ್ವಾಭಿಮಾನಿಯ ಕಥೆಗಳು ಹಸಿರಾಗಿವೆ. ಎಲ್ಲ ಜನಾಂಗದ ಪ್ರೀತಿ ಗಳಿಸಿದ ರಾಯಣ್ಣ ಎಂದೂ ತನ್ನ ಜಾತಿಯೊಂದಿಗೆ ಗುರುತಿಸಿಕೊಳ್ಳದೆ ಬ್ರಿಟಿಷರನ್ನು ಸೋಲಿಸಿ ಮತ್ತೆ ಚೆನ್ನಮ್ಮನನ್ನು ರಾಣಿಯಾಗಿಸಬೇಕೆಂಬ ಹಂಬಲದಲ್ಲೇ ಹೋರಾಡಿ ನೇಣಿಗೇರಿದವನು. ರಾಯಣ್ಣನ ಹೋರಾಟ ಆ ನೆಲದಲ್ಲಿ ಎಷ್ಟು ಹಸಿರಾಗಿತ್ತೆಂದರೆ ಸ್ವಾತಂತ್ರ್ಯಾನಂತರ ಬೆಳಗಾವಿ ಮತ್ತು ಕೊಲ್ಲಾಪುರ ಬಾಂಬೆಯ ಕಲಾವಿದರೆಲ್ಲಾ ಸೇರಿಕೊಂಡು ಆತನ ಸಿನಿಮಾ ತೆಗೆದರು. ಆ ಚಿತ್ರದಲ್ಲಿ ಬಹುತೇಕ ಮರಾಠಿ ರಂಗಭೂಮಿ ಕಲಾವಿದರೇ ಇದ್ದರು. ಲತಾ ಮಂಗೇಶ್ಕರ್ ಮತ್ತು ಮನ್ನಾಡೆ ಕೂಡ ಹಾಡಿದ್ದರು. ನಿರ್ಮಾಪಕರು ನಿರ್ದೇಶಕರೆಲ್ಲಾ ಮರಾಠಿ ಜನರಾಗಿದ್ದರು.


ಆ ಚಿತ್ರದಲ್ಲಿ ರಾಯಣ್ಣನ ಒಂದು ಮಾತು ಮಾತ್ರ ಸಾಯುವವರೆಗೂ ನೆನಪಿನಲ್ಲುಳಿಯುವಂತಿದೆ. ಅದೇನೆಂದರೆ ಆತನನ್ನು ಬ್ರಿಟಿಷರಿಗೆ ಹಿಡಿದುಕೊಡಲು ಸಂಚು ಮಾಡುವವರಿಗೆ "ಮನುಷೇರ ಜನುಮೈತಿ ನಾಯಿ ಬದುಕ ಬದುಕಬೇಡ್ರಿ" ಎನ್ನುತ್ತಾನೆ. ಈ ಮಾತು ಇಂದಿಗೂ ರಾಯಣ್ಣನನ್ನು ಕುರುಬನನ್ನಾಗಿ ಹಿಡಿದಿಡಲು ಹೊರಟವರಿಗೆ ಅನ್ವಯಿಸುವಂತದ್ದು.

ಕಿತ್ತೂರು ಪ್ರಾಂತ್ಯದಲ್ಲಿ ರಾಯಣ್ಣ ಎಂದಕೂಡಲೇ ಸ್ವಾಮಿನಿಷ್ಠೆ, ದೇಶಪ್ರೇಮದ ಪ್ರತೀಕವೇ ಅವನು ಎಂಬಂತೆ ನೆನೆಸುತ್ತಾರೆ. ಇಂತಹ ಮಹಾ ಸೇನಾನಿ ಕ್ರಮೇಣ ಬೆಂಗಳೂರವರೆಗೂ ಬಂದು ರೈಲ್ವೆ ನಿಲ್ದಾಣದ ಎದುರು ಪ್ರತಿಮೆಯಾದದ್ದೂ ಅಲ್ಲದೆ ರೈಲ್ವೆ ನಿಲ್ದಾಣಕ್ಕೂ ತನ್ನ ಹೆಸರಿಡುವಂತಾದದ್ದು ಆತನ ಸಾಹಸಗಳಿಂದ.

ಆದರೆ ಈಶ್ವರಪ್ಪ ಎಂಬ ಬಿಜೆಪಿ ನಾಯಕರು ತಮ್ಮ ರಾಜಕಾರಣದ ನೆಲ ಅದುರಿದ ಕೂಡಲೇ ರಾಯಣ್ಣ ಬ್ರಿಗೇಡ್ ಮಾಡಲು ಹೊರಟಿರುವುದು ತಮಾಷೆಯ ಜೊತೆಗೆ ಖಂಡನೆಗೂ ಯೋಗ್ಯವಾಗಿ ಕಾಣುತ್ತದೆ. ಏಕೆಂದರೆ ಈಶ್ವರಪ್ಪನವರು ಅಕ್ಷರ ಕಲಿತ ನಂತರ ಬಯಲಲ್ಲಿ ಎದೆಮೇಲೆ ಕೈ ಹಿಡಿದು ನಿಂತು ಹೇಳಿದ್ದು "ನಮಸ್ತೇ ಸದಾವತ್ಸಲೇ ಮಾತೃಭೂಮಿ" ಎಂಬ ಶ್ಲೋಕವನ್ನು. ಅದು ಬಿಜೆಪಿ ನಿರ್ಮಿತ ಮಾತೃಭೂಮಿಯೇ ಹೊರತು ಭಾರತವಲ್ಲ.

ಭಾರತ ಎಂದಿಗೂ ಸರ್ವಜನಾಂಗದ ಶಾಂತಿಯ ತೋಟ. ಆ ತೋಟಕ್ಕೆ ಆಗಾಗ್ಗೆ ವಾನರ ಸೇನೆಯಂತೆ ನುಗ್ಗಿ ಹಾವಳಿ ಮಾಡುವ ಮಂಗನ ಪಡೆಯ ಲೀಡರಂತೆ ಮಾತನಾಡುತ್ತ ಬಂದಿರುವ ಈಶ್ವರಪ್ಪನವರು, ಕುರುಬನಾಗಿ ಬಾಳದ ರಾಯಣ್ಣನಿಗೆ ಸಲ್ಲಿಸುವ ಗೌರವ ಯಾವುದೆಂದರೆ, ಆತನ ಹೋರಾಟವನ್ನು ಸಂಘ ಪರಿವಾರಕ್ಕೆ ಬೋಧಿಸುವುದು. ಜೊತೆಗೆ ತಾವು ಗೌರವಿಸುವ ನಾಯಕರ ಸಾಲಿನಲ್ಲಿ ನಿಲ್ಲಿಸುವುದು. ಆದರೂ ಏನೇ ಮಾಡಿದರೂ ರಾಯಣ್ಣನನ್ನು ಅಲ್ಲಿಟ್ಟುಕೊಳ್ಳಲಾಗುವುದಿಲ್ಲ. ಆದ್ದರಿಂದ ಆತನನ್ನು ಆತನ ಪಾಡಿಗೆ ಬಿಟ್ಟುಬಿಡುವುದು ಒಳ್ಳೆಯದು.


ಆ ದಿಸೆಯಲ್ಲಾದರು ಯಡಿಯೂರಪ್ಪನನ್ನು ಮಾದರಿಯಾಗಿಟ್ಟುಕೊಳ್ಳುವುದು ಒಳ್ಳೆಯದು. ಅವರು



ಬಿಜೆಪಿ ಸೇರಿದಾಗಲೇ ಬಸವಣ್ಣನನ್ನು ಮರೆತರು. ಆತನ ವಚನಗಳನ್ನು ಮರೆತರು. ಇದು ನಿಜಕ್ಕೂ ಮೆಚ್ಚುವ ನಡವಳಿಕೆ. ಆ ವಿಷಯದಲ್ಲವರು ಬಸವದ್ರೋಹ ಬಗೆಯಲಿಲ್ಲ. ಬಸವಣ್ಣ ಹೇಗೆ ವೈದಿಕ ಧರ್ಮವನ್ನು ಕೊಡವಿ ಲಿಂಗಾಯತ ಧರ್ಮ ಕಟ್ಟಿದನೋ ಹಾಗೆ ಯಡಿಯೂರಪ್ಪ ಲಿಂಗಾಯತ ಜಾತಿ ತೊರೆದು ವೈದಿಕರ ನಾಯಕರಾದರು. ಅವರಿಗೆ ಬಿಜೆಪಿ ಬೇಡವಾದಾಗ ಕೆಜೆಪಿ ಮಾಡಿದರೇ ವಿನಃ ಬಸವ ದಳ ಕಟ್ಟಲಿಲ್ಲ. ಈಶ್ವರಪ್ಪ ಕೂಡ ಯಡಿಯೂರಪ್ಪನ ವಿರುದ್ಧ ಸೆಡ್ಡು ಹೊಡೆದಿರುವ ಈ ಸಮಯದಲ್ಲಿ ಪರ್ಯಾಯ ಸಂಘಟನೆಗೆ ಯಾವುದಾದರೂ ಹೆಸರಿಟ್ಟುಕೊಳ್ಳುವುದು ಒಳ್ಳೆಯದು.

ಇನ್ನೊಂದು ಇಂಟರೆಸ್ಟಿಂಗ್ ವಿಷಯವೆಂದರೆ "ನನ್ನ ರಕ್ತದಲ್ಲೇ ಆರೆಸ್ಸೆಸ್ ಇದೆ" ಎಂದ ಈಶ್ವರಪ್ಪ ಒಂದು ಸತ್ಯವನ್ನು ಬಹಿರಂಗಗೊಳಿಸಿದ್ದಾರೆ. ಅದೇನೆಂದರೆ ಅವರ ಇಂದಿನ ಚಟುವಟಿಕೆಗಳಿಗೆ ಆರೆಸ್ಸೆಸ್ಸಿನ ಮಾರ್ಗದರ್ಶನವಿದೆ. ಇಲ್ಲದಿದ್ದರೆ ಅವರು ರಾಯಣ್ಣನ ಹತ್ತಿರ ಸುಳಿಯುತ್ತಿರಲಿಲ್ಲ. ಮಗನನ್ನು ಕಳೆದುಕೊಂಡು ದುಃಖದಲ್ಲಿರುವ ಸಿದ್ಧರಾಮಯ್ಯ ಇನ್ನು ಮುಂದೆ ಅಹಿಂದ ಎಳೆಯುವುದು ಕಷ್ಟ. ಆದ್ದರಿಂದ ಅಲ್ಪಸಂಖ್ಯಾತರನ್ನು ಬಿಟ್ಟು ಬರಿ ಹಿಂದ ಸಂಘಟನೆ ರಾಯಣ್ಣನ ಹೆಸರಿನಲ್ಲಾಗಲಿ; ಆಗ ಯಡಿಯೂರಪ್ಪನ ಲಿಂಗವಂತ ಸಮಾಜದ ಎದುರು ಹಿಂದ ಸಮಾಜ ನಿಲ್ಲಿಸಬಹುದೆಂಬುದು ಚಡ್ಡಿಗಳ ಲೆಕ್ಕಾಚಾರವಾದರೂ ಕೋತಿ ಕಜ್ಜಾಯದ ನ್ಯಾಯವೊಂದು ಮುಂದೆ ಸಂಭವಿಸಬಹುದು. ಅಂದರೆ ಜಗಳವಾಡುವ ನೀವಿಬ್ಬರೂ ಬೇಡ ಎಂದು ಮೂರನೆ ವ್ಯಕ್ತಿಯನ್ನು ಪ್ರತಿಷ್ಠಾಪಿಸುವುದು ಚಡ್ಡಿಗಳ ಲೆಕ್ಕ. ಆಗ ಒಬ್ಬ ಲಿಂಗಾಯತ ಮತ್ತೊಬ್ಬ ಕುರುಬನನ್ನು ಮಟ್ಟಾ ಹಾಕಿದಂತಾಗುತ್ತದೆ ಎಂಬುದು ಚಡ್ಡಿಗಳ ತರ್ಕ.

ಆರೆಸ್ಸೆಸ್ಸಿಗರಿಗೆ ಯಡಿಯೂರಪ್ಪನನ್ನು ಕಂಡರೆ ಮೊದಲಿನ ನಂಬಿಕೆಯಿಲ್ಲ. ಏಕೆಂದರೆ, ಒಮ್ಮೆ ಹೊರಗೋಗಿ ಬಂದವರು, ಮತ್ತೆ ಜೈಲಿಗೂ ಹೋಗಿ ಬಂದವರೆಂಬ ಮೂದಲಿಕೆ ಚಡ್ಡಿ ವಲಯದಲ್ಲಿದೆ. ಆದ್ದರಿಂದ ಅವರು ಈಶ್ವರಪ್ಪನನ್ನು ಮುಂದೆ ಬಿಟ್ಟುಕೊಂಡು ಆಟವಾಡತೊಡಗಿದ್ದಾರೆ. ಈ ಇಬ್ಬರ ಜಗಳದ ವಾಸ್ತವ ಸಂಗತಿಯೇನೆಂದರೆ ಅವರವರ ಅಸ್ತಿತ್ವದ ಪ್ರಶ್ನೆ. ಈಗ ಶಿವಮೊಗ್ಗದಲ್ಲಿ ಕಾಂಗ್ರೆ ಶಾಸಕ ಪ್ರಸನ್ನ ಈಶ್ವರಪ್ಪನಿಗಿಂತಲೂ ಶಕ್ತಿವಂತನಾಗಿ ಯಡಿಯೂರಪ್ಪನಿಗೆ ಕಾಣಿಸಿದ್ದಾರೆ. ಆತನ ಎದುರು ಈಶ್ವರಪ್ಪ ಸೋಲಬಹುದು. ಏಕೆಂದರೆ, ಅಲ್ಲಿನ ಬ್ರಾಹ್ಮಣರು ಈಶ್ವರಪ್ಪನ ಒಡ್ಡೋಲಗದಲ್ಲಿ ತಿಂದು ಉಂಡು ಕಾಣಿಕೆ ಪಡೆದು ಬಾಯಿ ಒರೆಸಿಕೊಂಡು



ಪ್ರಸನ್ನನ ಕಡೆಗಿದ್ದಾರಂತೆ. ಆದ್ದರಿಂದ ಒಂದು ಸೀಟು ಕಳೆದುಕೊಳ್ಳುವುದಕ್ಕಿಂತ ರುದ್ರೇಗೌಡರಿಗೆ ಟಿಕೆಟ್ ಕೊಟ್ಟು ಗೆಲ್ಲಿಸಿಕೊಂಡು ಮುಂದೆ ಈಶ್ವರಪ್ಪನನ್ನು ಮತ್ತೆ ಎಮ್ಮೆಲ್ಸಿ ಮಾಡುವ ಭರವಸೆ ಯಡಿಯೂರಪ್ಪನದಂತೆ. ಆದರೆ ಶಿವಮೊಗ್ಗದಲ್ಲಿ ಈಶ್ವರಪ್ಪನನ್ನು ಚುಕ್ತಾ ಮಾಡುವ ಸಂಚು ಯಡಿಯೂರಪ್ಪನದೆಂದು ಭಾವಿಸಿರುವ ಈಶ್ವರಪ್ಪ ತನ್ನ ನಂತರ ತನ್ನ ಮಗನನ್ನು ಶಿವಮೊಗ್ಗಕ್ಕೆ ಪ್ರತಿಷ್ಠಾಪಿಸುವ ಕನಸಿನಲ್ಲಿದ್ದಾರಂತೆ.

"ಯಡಿಯೂರಪ್ಪ ಶಿಕಾರಿಪುರಕ್ಕೆ ತನ್ನ ಮಗನನ್ನು ಪ್ರತಿಷ್ಠಾಪಿಸಿದ ಮೇಲೆ ನಾನು ತನ್ನ ಮಗನಿಗೆ ಶಿವಮೊಗ್ಗ ಬಿಟ್ಟುಕೊಡುವುದು ನ್ಯಾಯವಲ್ಲವೆ? ಲೆಕ್ಕಾಚಾರ ಹೀಗಿರುವಾಗ ನನ್ನನ್ನೇ ಶಿವಮೊಗ್ಗದಿಂದ ಖಾಲಿ ಮಾಡಿಸಲು ಬಂದರೆ ನಾನು ಸುಮ್ಮನಿರುವುದಿಲ್ಲ" ಎಂದ ಈಶ್ವರಪ್ಪ ರಾಯಣ್ಣನ ಮೊರೆ ಹೋಗಿದ್ದಾರೆ.

ಈಶ್ವರಪ್ಪನ ಕರ್ತವ್ಯನಿಷ್ಠೆ ಆರೆಸ್ಸೆಸ್ಸಿಗೆ. ಹಾಗೆ ರಾಜಕೀಯ ನಿಷ್ಠೆ ಬಿಜೆಪಿಗೆ. ಇನ್ನು ತತ್ವನಿಷ್ಠೆ ಪೇಜಾವರರಿಗೆ. ಇಷ್ಟು ನಿಷ್ಠೆಯನ್ನಿಟ್ಟುಕೊಂಡಿರುವ ಈಶ್ವರಪ್ಪ ಸಹಾಯ ಮಾಡಿರುವ ಜನಾಂಗದ ಪೈಕಿ ಬ್ರಾಹ್ಮಣರದೇ ಸಿಂಹ ಪಾಲಿದ್ದರೆ ಕುರುಬರದ್ದು ಕಡೆಯ ಪಾಲಂತೆ. ಕನಕಗೋಪುರ ಬಿದ್ದಾಗಲೂ ಆತ ಪೇಜಾವರರ ಗಂಟಲಾಗಿ ಮಾತನಾಡಿದ್ದರು. ಅಷ್ಟೇ ಅಲ್ಲ, ಅಲ್ಲಿ ಕನಕಗೋಪುರ ಇತ್ತು ಎನ್ನುವುದಾದರೆ ನಾನು ರಾಜಕೀಯವನ್ನೇ ಬಿಡುತ್ತೇನೆಂದಿದ್ದರು. ಮುಂದೆ ಈತ ರಾಯಣ್ಣನ ಪ್ರತಿಮೆ ಜಾಗಕ್ಕೆ ಪೇಜಾವರರ ಪ್ರತಿಮೆ ಅಥವ ಗೋಳವಾಲ್ಕರ್ ಪ್ರತಿಮೆ ವಿಷಯದಲ್ಲಿ ಜಗಳ ಬಂದರೆ "ರಾಯಣ್ಣ ಇದ್ದ ಎಂದು ಸಾಬೀತಾದರೆ ನಾನು ನಾಲಗೆಯನ್ನೇ ಕತ್ತರಿಸಿಕೊಳ್ಳುವೆ" ಎಂದು ಬಿಡಬಲ್ಲ ಆಸಾಮಿ.

ಅಚ್ಚರಿಯೆಂದರೆ ಇವರಿಬ್ಬರ ಜಗಳ ಟಿವಿ ಚಾನಲ್‌ನೊಳಗಿರುವ ಚಡ್ಡಿಗಳಿಗೆ ಆತಂಕ ಸೃಷ್ಟಿಸಿರುವುದು. ಆದ್ದರಿಂದ ರಾಜಿ ಸಂಧಾನದ ವಿವೇಕ ಹೇಳತೊಡಗಿದ್ದಾರೆ. ಇಷ್ಟಾದರೂ ಹರಿಯ ಮುರಿಯ ಜಗಳವಾದಾಕ್ಷಣ ಒಡೆದುಹೋಗಲು ಅದೇನು ಜನತಾದಳವಲ್ಲ.

ಮನೆ ಮುರುಕಾಯೋಚನೆಯ ಪ್ರಬಲ ಅಜೆಂಡಾವನ್ನು ಹೊಂದಿದ ಬಿಜೆಪಿ ಇಲ್ಲಿ "ಆ ಅನಂತಕುಮಾರನೇ ನನ್ನ ಪದಚ್ಯುತಿಗೆ ತುಸಿಬಿಗೆ ಯಾವಾಗಲೂ ಷಡ್ಯಂತ್ರ ಮಾಡುತ್ತಾರೆ" ಎಂದು ಆಪಾದಿಸಿದ ಮರುದಿನವೇ ಯಡ್ಡಿ ಅನಂತ್ ಜೊತೆಯಲ್ಲಿ ಕುಳಿತು ಹಲ್ಲು ಕಿಸಿಯಬಲ್ಲರು. ದೇವೇಗೌಡರ ಆಣತಿಯಂತೆ ಸದಾನಂದಗೌಡ ಕೇಳುತ್ತಾನೆಂದು ದೂರಿ, ಅಧಿಕಾರದಿಂದ ಕೆಳಗಿಳಿಸಿದ ಕ್ಷಣದಲ್ಲೇ ಯಡ್ಡಿ-ಸದಾ "ನಮ್ಮ ನಡುವೆ ಏನೂ ನಡೆದಿಲ್ಲ" ಎನ್ನುವಂತೆ ನಗಬಲ್ಲರು. ಹಾಗೆಯೇ ಮುಂದೆ ಈಶ್ವರಪ್ಪ ಯಡಿಯೂರಪ್ಪ ಒಂಟಿ-ಒಂಟಿ ಎತ್ತುಗಳು ಹಾದಾಟ ಮುಗಿಸಿ ಜೊತೆಯಾಗಿ ಹುಲ್ಲು ತಿನ್ನುವಂತೆ ಕತ್ತು ಬಗ್ಗಿಸಿ ಮೇಯಬಲ್ಲರು. ಮೇವಿನ ವಿಷಯದಲ್ಲಿ ಇಬ್ಬರ ಮೇಲೂ ಕೇಸುಗಳಿವೆ. ಆ ವಿಷಯದಲ್ಲವರು ಸಮಾನ ಮನಸ್ಕರು. ಆದರೆ ಆಳದಲ್ಲಿ ಪರಮ ವೈರಿಗಳು. ಇಂತಹ ಸಹಬಾಳ್ವೆ ಬಿಜೆಪಿಯಲ್ಲಿ ಮಾತ್ರ ಸಾಧ್ಯ.

ಈಗಲೂ ಯಡ್ಡಿ-ಈಶ್ವರಿ ಸಂಧಾನ ನಡೆದರೆ ರಾಯಣ್ಣ ಬಚಾವಾಗಬಲ್ಲ. ಅಂತಹದ್ದೊಂದು ಸಮಾಧಾನ ಸಂಭವಿಸಲಿ.

■ ವರದಿಗಾರ

ಮನುಷ್ಯತ್ವ ಇದ್ದವರಿಗೆ ಮಾತ್ರ ಅರ್ಥವಾಗುವ ಸತ

ರಮ್ಯ ಹೇಳಿದ್ರಲ್ಲಿ ತಪ್ಪೇನೂ ಇಲ




ಅದು 2008ರ ಜುಲೈ ಮಾಹೆ. ಬೆಂಗಳೂರಿನ ನಾರಾಯಣ ಹೃದಯಾಲಯದ ಆ ಆಪರೇಷನ್ ಥಿಯೇಟರ್‌ನೊಳಗೆ ತಮ್ಮ ಹಸಿರು ಗೌನ್‌ನಲ್ಲಿ ತೂರಿಕೊಂಡು, ಮುಖಕ್ಕೆ ಮಾಸ್ಕ್ ಕಟ್ಟಿಕೊಂಡು ಸತತ ಆರು ಗಂಟೆಗಳ ಕಾಲ ಹೆಣಗಾಡಿದ್ದ ಹೆಸರಾಂತ ಹೃದಯತಜ್ಞ ದೇವಿಶೆಟ್ಟಿ ಅಕ್ಷರಶಃ ಬೆವೆತುಹೋಗಿದ್ದರು. ತಮ್ಮ ಮುಂದಿದ್ದ ಓಟಿ ಹಾಸಿಗೆಯ ಮೇಲೆ ಪ್ರಜ್ಞೆ ಇಲ್ಲದೆ ಬಿದ್ದುಕೊಂಡಿದ್ದ ಎರಡು ವರ್ಷದ ಆ ಪುಟ್ಟ ಹುಡುಗಿಯ ಪುಟಾಣಿ ಹೃದಯ, ತೆರೆದ ಎದೆಗೂಡಿನ ರಕ್ತದ ಮಡುವಿನಲ್ಲಿ ಬಡಿದುಕೊಂಡ ಪ್ರತಿಬಾರಿಯೂ ದೇವಿಶೆಟ್ಟಿಯವರ ಕೈಗಳು ಅಧೀರಗೊಳ್ಳುತ್ತಿದ್ದವು. ತಮ್ಮೊಳಗಿನ ಮನುಷ್ಯತ್ವದ ಹೃದಯ ಅದೆಷ್ಟೆ ತೇವಗೊಂಡರೂ ವೈದ್ಯವೃತ್ತಿಯ ನಿಷ್ಠುರತೆಗೆ ಕಟ್ಟುಬಿದ್ದು ಆ ಪುಟ್ಟ ಹೃದಯದ ಕವಾಟಗಳ ಸುತ್ತ ಅವರ ಕೈಯಲ್ಲಿದ್ದ ಕತ್ತರಿ ಎಚ್ಚರಿಕೆಯಿಂದ ಸರಿದಾಡುತ್ತಲೇ ಇತ್ತು....

ಇತ್ತ ಆಸ್ಪತ್ರೆಯ ಹೊರಗೆ, ಆ ಹುಡುಗಿ ಸಾವನ್ನು ಗೆದ್ದು ಬರಲೆಂದು ಹಾರೈಕೆಗಳ ಮಹಾಪೂರವೇ ಹರಿದುಬರುತ್ತಿತ್ತು. ಎಷ್ಟೋ ಮಂದಿರ, ಮಸೀದಿ, ಚರ್ಚುಗಳಲ್ಲಿ ಆಕೆಗೋಸ್ಕರ ಪ್ರಾರ್ಥನೆಗಳು ಸಲ್ಲಿಕೆಯಾದವು. ಬೆಂಗಳೂರಿನ ಕೆಲ ಶಾಲೆಯ ನೂರಾರು ಮಕ್ಕಳಂತೂ 'ನಮ್ಮ ಗೆಳತಿ ಬೇಗ ಹುಷಾರಾಗಲಿ' ಅನ್ನೋ ಬ್ಯಾನರ್‌ಗಳನ್ನಿಡಿದು ಬೀದಿಗಳಲ್ಲಿ ಸಾಲುಗಟ್ಟಿ ದೇವರಲ್ಲಿ ಮೊರೆಯಿಟ್ಟರು. ಆ ಹುಡುಗಿಯ ಚಿಕಿತ್ಸೆಯ ಖರ್ಚಿಗೆಂದು ದೇಶದ ಮೂಲೆಮೂಲೆಯಿಂದ ಹಲವರು ಹಣ ಕಳುಹಿಸಿಕೊಟ್ಟರು. ಆಸ್ಪತ್ರೆಗೆ ತಲುಪಿದ ಶುಭ ಹಾರೈಕೆಯ ಪುಷ್ಪಗುಚ್ಛಗಳಿಗೆ ಲೆಕ್ಕವೇ ಇಲ್ಲ. ಟಿವಿ ಚಾನೆಲ್‌ಗಳಲ್ಲಿ, ಇಂಟರ್ನೆಟ್ ವೆಬ್‌ಸೈಟ್‌ಗಳಲ್ಲಿ ಅವಳು ಬೇಗ ಚೇತರಿಸಿಕೊಳ್ಳಲೆಂದು ಶುಭ ಹಾರೈಕೆಗಳು ಹರಿದಾಡಿದವು. ಅಷ್ಟಕ್ಕೂ ಆ ಹುಡುಗಿ ಯಾರು.......

ನೂರ್ ಫಾತಿಮಾ! ಅಪ್ಪಟ ಪಾಕಿಸ್ತಾನಿ!!

ಅವತ್ತಿಗೂ ಪಾಕಿಸ್ತಾನ ನಮ್ಮ ಕಡುವೈರಿ ರಾಷ್ಟ್ರವೇ ಆಗಿತ್ತು. ಕಾರ್ಗಿಲ್ ಯುದ್ಧ, 2001ರ ಪಾರ್ಲಿಮೆಂಟ್ ಮೇಲಿನ ದಾಳಿಯ ಕಾರಣಕ್ಕೆ ಉಭಯ ದೇಶಗಳ ನಡುವಿನ ರಾಜತಾಂತ್ರಿಕ ನಿಲುವು ಭಯಂಕರವಾಗೇ ಬಿಗಿದುಕೊಂಡಿತ್ತು. ಆದರೂ ಅವತ್ತು ಯಾವೊಬ್ಬ ಭಾರತೀಯನೂ 'ಆ ಪಾಕಿಸ್ತಾನಿ ಹುಡುಗಿಗೆ ನಮ್ಮಲ್ಲೇಕೆ ಆಪರೇಷನ್ ಮಾಡಿಸ್ತೀರಿ. ಸತ್ತರೆ ಸಾಯಲಿ ವಾಪಾಸ್ ಕಳಿಸಿ' ಅಂತ ಕ್ಷುಲ್ಲಕ ತಕರಾರು ತೆಗೆಯಲಿಲ್ಲ. ದೇಶಗಳ ನಡುವಿನ ರಾಜತಾಂತ್ರಿಕ ನಿಲುವಿಗೂ, ಆ ದೇಶಗಳ ಸಹಜ ಮನಸ್ಸಿನ ಮನುಷ್ಯರ ನಡುವಿನ ಮಾನವೀಯ ಸ್ಪಂದನೆಗೂ ಇರುವ ವ್ಯತ್ಯಾಸವೇ ಇದು!

ರಾಜತಾಂತ್ರಿಕ ನಿಲುವುಗಳು ಅಲ್ಲಿನ ಅಧಿಕಾರಶಾಹಿ, ಆಡಳಿತಶಾಹಿ, ಬಂಡವಾಳಶಾಹಿಗಳ ಲಾಭ-ನಷ್ಟದ ದೃಷ್ಟಿಯಿಂದ ನೆಟ್ಟುಕೊಂಡಿರುತ್ತವೆ. ಅವರಿಗೆಲ್ಲ ದೇಶ ಅಂದರೆ ಭೌಗೋಳಿಕವಾಗಿ ಬೇಲಿ ಸುತ್ತಿಸಿಕೊಂಡ ಭೂಭಾಗ. ಅದರೊಳಗಿರುವ ಬದುಕುಗಳೆಂದರೆ ಅವರ ಪಾಲಿಗೆ ಸರಕುಗಳಷ್ಟೆ! ಆದರೆ ಇದ್ಯಾವುದರ ಪರಿವೆಯೇ ಇಲ್ಲದೆ ಒಂದು ಸರಳ, ಸುಂದರ ಜೀವನಕ್ಕೆ ಒಗ್ಗಿಕೊಂಡ ಮನುಷ್ಯರಿಗೆ



ಪೋಷಕರ ಜೊತೆ ನೂರ್ ಫಾತಿಮಾ



ಸ್ನೇಹ, ಪ್ರೀತಿ, ಮನುಷ್ಯತ್ವಕ್ಕಿಂತ ಯಾವುದೂ ದ
ಪಾಕಿಸ್ತಾನದ ಮೇಲಿನ ಕಡುದ್ವೇಷದ ಹೊರತಾಗಿ
ನೂರ್ ಫಾತಿಮಾ ಸಾವನ್ನು ಗೆದ್ದುಬರಲೆಂದು ಭಾರತೀ
ಹಾರೈಸಿದ್ದು ಇದೇ ಕಾರಣಕ್ಕೆ.


ಚಿತ್ರನಟಿ ಹಾಗೂ ಮಾಜಿ ಸಂಸದೆ ರಮ್ಯ ನೀಡಿ
ಹೇಳಿಕೆಯಲ್ಲಿ ಅಡಗಿರುವುದು ಇಂತದ್ದೇ
ಅಭಿಪ್ರಾಯವಷ್ಟೆ. ಆದರೆ 2014ರಿಂದೀಚೆಗೆ ಭ
ಹೊರಳಿಕೊಂಡಿರುವ ಅಪಾಯಕಾರಿ ಸಂದರ್ಭದಲ್ಲಿ ಇ
ಹೇಳಿಕೆ ನೀಡಿದ್ದು ಕಾಂಗ್ರೆಸ್ ಪಾರ್ಟಿಯ ರಾಜಕ
ಹಾಗೂ ಆ ಸಮಯದಲ್ಲಿ ಆಕೆ ರಕ್ಷಣಾ ಸಚಿವ ಮನೋ
ಪಾರಿಕ್ಕರ್ ಹೆಸರನ್ನು ಉಲ್ಲೇಖಿಸಿದ್ದಾಳೆಂಬ ಕಾರಣ
ಇವತ್ತು ಪ್ರತಿಭಟನೆಯ ರೂಪ ಪಡೆದುಕೊಳ್ಳುತ್ತಿವೆ.
ಬಲುದೊಡ್ಡ ವಿಪರ್ಯಾಸ.

ಅಷ್ಟಕ್ಕೂ ರಮ್ಯಾ ಹೇಳಿರುವುದಾದರು ಏನು? ಸ
ರಾಷ್ಟ್ರಗಳ ಯುವ ಸಂಸದೀಯರ ಸಭೆ
ಭಾಗವಹಿಸಲೆಂದು ಪಾಕಿಸ್ತಾನಕ್ಕೆ ಹೋಗಿಬಂದ ಆಕೆ
ಜನರ ಆತಿಥ್ಯವನ್ನು ಕಂಡು "ಆಕ್ಚುಯಲಿ, ನಾವಿಲ್ಲಿ
ಪಾಕಿಸ್ತಾನದ ಬಗ್ಗೆ ಬರೀತಿವಿ, ಹೇಳ್ತೀವಿ, ಮೊನ್ನೆಯ
ಮನೋಹರ್ ಪರಿಕ್ಕರ್ ಕೂಡಾ ಹೇಳಿದ್ರೂ ಪಾಕಿಸ
ಹೋದ್ರೆ ನರಕಕ್ಕೆ ಹೋದಂಗೆ ಆಗುತ್ತೆ, ಆದ್ರೆ ಆ
ಏನೂ ಇಲ್ಲ, ಅಲ್ಲಿರೋ ಜನ ಕೂಡಾ ನಮ್ಮ
ಇದಾರೆ. ಚೆನ್ನಾಗ್ ಮಾತಾಡುಸ್ತಾರೆ. ತುಂಬಾ ಚೆ
ನೋಡ್ಕೊಂಡ್ರು" ಎಂಬ ಅಭಿಪ್ರಾಯವನ್ನಷ್ಟೇ ಹೊರ
ದ್ದಾರೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ
ಪಾಕಿಸ್ತಾನದ ಜನರ ಬಗ್ಗೆ ಆವರ ಆತಿಥ್ಯದ ಬಗ್ಗೆ ಮಾತ
ದ್ದಾರೆಯೇ ಹೊರತು ಪಾಕಿಸ್ತಾನದ ರಾಜತಾಂತ್ರಿಕ
ನೀತಿಯ ಬಗ್ಗೆಯಲ್ಲ, ಭಯೋತ್ಪಾದನೆಗೆ ಕುಮ್ಮ
ನೀಡುತ್ತಿರುವ ಅದರ ಮತಾಂಧ ಅಧಿಕಾರಶಾಹಿ ವ
ಬಗ್ಗೆಯೂ ಅಲ್ಲ. ನಮ್ಮಿಂದಲೇ ಸಿಡಿದುಹೋ
ನಮ್ಮಂತೆಯೇ ಬದುಕುತ್ತಿರುವ ಜನಸಮುದಾಯದ
ಅದರಲ್ಲಿ ಪ್ರತಿಭಟಿಸುವಂತದ್ದೇನಿದೆ?

ಈ ಹಂತದಲ್ಲಿ ಅವತ್ತು ನಾರಾಯಣ ಹೃದಂ
ಯದಲ್ಲಿ ಆಪರೇಷನ್ ಮಾಡಿಸಿಕೊಂಡು, ಕೋಟಿ
ನಿಷ್ಕಲ್ಮಶ ಹಾರೈಕೆಗಳ ಫಲವೆಂಬಂತೆ ಬದುಕುಳಿದ ನ
ಫಾತಿಮಾಳ ಅಪ್ಪ ಸಜ್ಜದ್ ನದೀಮ್ ಹೇಳಿದ ಮಾ
ನೆನಪಿಸಿಕೊಳ್ಳಲೇಬೇಕು. "ನಾನು ಭಾರತೀಯರಿಗೆ ಚಿರ
ಅವರು ನನ್ನ ಮಗಳ ಮೇಲೆ ತೋರಿದ ಔದಾ
ನಾನು ಶರಣಾಗಿದ್ದೇನೆ. ಯಾರು ಮುಸ್ಲಿಂ, ಯಾರು ಹಿ
ಅನ್ನೋದೆ ನನಗೀಗ ಮರೆತುಹೋಗಿದೆ. ಸಾ
ಭಾರತೀಯರು, ಸಾಮಾನ್ಯ ಪಾಕಿಸ್ತಾನಿಗಳಿಗೆ ದೇಶಗಳ ನ
ಯುದ್ಧ ನಡೆಯುವುದು ಬೇಕಿಲ್ಲ, ರಾಜಕಾರಣಿಗಳಿಗೆ, ಆ
ಜನರಲ್‌ಗಳಿಗೆ, ಶಸ್ತ್ರಾಸ್ತ್ರ ತಯಾರಿಸಿ ಮಾರಾಟ ಮಾ
ಎಂಎನ್‌ಸಿ ಕಂಪನಿಗಳಿಗೆ ಮಾತ್ರ ಯುದ್ಧ ಬೇಕಾಗಿರೋ
ನಮ್ಮಂತವರಿಗಲ್ಲ. ಶಾಂತಿಯಿಂದ, ಸ್ನೇಹದಿ
ಸಹಬಾಳ್ವೆಯಿಂದ ಬದುಕುವುದಷ್ಟೇ ನ
ಬೇಕಾಗಿರೋದು. ನಾವು ಭಾರತದೊಳಗೆ ಕಾಲಿಟ್ಟ ಕ್ಷಣ
ನಮ್ಮ ಮೇಲೆ, ನಮ್ಮ ಮಗಳ ಮೇಲೆ ಭಾರತೀ

ಖುಷ್ವಂತ್, ಸತ್ತರ್ ಮತ್ತು ಸಂತ್ರಸ್ತರು

ಬ್ರಿಟಿಷರು ಎಳೆದುಹೋದ ರ್‍ಯಾಡ್‌ಕ್ಲಿಫ್ ಲೈನ್ ಎಂಬ ಗಡಿಯ ಹೊರತಾಗಿ ಭಾರತ, ಪಾಕಿಸ್ತಾನಗಳ ನಡುವೆ ಹೇಳಿಕೊಳ್ಳುವಂತಹ ಭೌಗೋಳಿಕ ಮತ್ತು ಸಾಂಸ್ಕೃತಿಕ ವ್ಯತ್ಯಾಸಗಳೇನೂ ಇಲ್ಲ. ಇಲ್ಲಿನ ಅಲ್ಪಸಂಖ್ಯಾತ ಮುಸ್ಲಿಮರು ಬದುಕುತ್ತಿರುವಂತೆ ಅಲ್ಲಿನ ಬಹುಸಂಖ್ಯಾತ ಮುಸ್ಲಿಮರು ಬದುಕುತ್ತಿದ್ದಾರೆ. ಅಲ್ಲಿನ ಅಲ್ಪಸಂಖ್ಯಾತ ಹಿಂದೂಗಳು ಬದುಕಿದಂತೆಯೇ ಇಲ್ಲಿನ ಬಹುಸಂಖ್ಯಾತ ಹಿಂದೂಗಳು ಬದುಕುತ್ತಿದ್ದಾರೆ. ಯಾಕೆಂದರೆ ಒಂದೇ ಒಡಲನ್ನು ಹಂಚಿಕೊಂಡು ಹುಟ್ಟಿದ ದೇಶಗಳಿವು. ಇಲ್ಲಿರುವ ಅದೆಷ್ಟೋ ಮಂದಿಯ ಬೇರುಗಳು ಪಾಕಿಸ್ತಾನದ ನೆಲದಲ್ಲಿ ಹುದುಗಿಹೋಗಿರುವಂತೆ ಅಲ್ಲಿರುವ ಎಷ್ಟೋ ಮಂದಿ ಇಲ್ಲಿದ್ದ ಬೇರುಗಳನ್ನು ಬಲವಂತವಾಗಿ ಕತ್ತರಿಸಿಕೊಂಡು ಅಲ್ಲಿ ನೆಲೆಸಿದ್ದಾರೆ. ನಮ್ಮ ಹೆಸರಾಂತ ಸಾಹಿತಿ ಖುಷ್ವಂತ್ ಸಿಂಗ್‌ರನ್ನೇ ತೆಗೆದುಕೊಳ್ಳಿ. ಅವರ ಹುಟ್ಟೂರು ಈಗಿನ ಪಾಕಿಸ್ತಾನದಲ್ಲಿರುವ ಪಂಜಾಬ್ ಪ್ರಾಂತ್ಯದ ಹಡಲಿ ಎಂಬ ಹಳ್ಳಿ. 1947ರ ವಿಭಜನೆ ಮತ್ತು ಅದರ ನಂತರ ಹುಟ್ಟಿಕೊಂಡ ಹಿಂಸೆಯನ್ನು ಕಣ್ಣಾರೆ ಕಂಡಿದ್ದ ಖುಷ್ವಂತ್‌ರು ಉಭಯ ದೇಶಗಳ ನಡುವೆ ಶಾಂತಿ ನೆಲೆಸುವಂತೆ ಮಾಡಲು ಅನೇಕ ಬಾರಿ ಪ್ರಯತ್ನಿಸಿದ್ದುಂಟು. ಆದರೆ ಅದು ಸಾಧ್ಯವಾಗಲಿಲ್ಲ. ತನ್ನ ಹುಟ್ಟೂರಿನಲ್ಲಿ ಕೊಂಚ ದಿನಗಳನ್ನಾದರು ಕಳೆಯಬೇಕೆಂಬ ಆಸೆ ಅವರದಾಗಿತ್ತು, ಅದೂ ಈಡೇರಲಿಲ್ಲ. ಕೊನೆಗೆ ತಾನು ಸತ್ತ ಮೇಲೆ ಹುಟ್ಟೂರು ಹಡಲಿಯಲ್ಲೇ ಅಂತ್ಯಸಂಸ್ಕಾರ ಮಾಡಿ ಎಂಬ ಆಸೆಯನ್ನೂ ಹೇಳಿಕೊಂಡಿದ್ದರು. ಅದೂ ಕೈಗೂಡಲಿಲ್ಲ. ಆದರೆ ಅವರ ಮಕ್ಕಳು ತಂದೆಯ ಚಿತಾಭಸ್ಮವನ್ನಾದರೂ ಅವರ ಹುಟ್ಟೂರಿಗೆ ತಲುಪಿಸಬೇಕೆಂದು ಜೋಪಾನವಾಗಿಟ್ಟುಕೊಂಡಿದ್ದರು. ಈ ವಿಚಾರ ಪಾಕಿಸ್ತಾನದ ಸಾಹಿತಿ ಫಕೀರ್ ಸೈಯದ್ ಅಜುದ್ದೀನ್‌ರಿಗೆ ತಿಳಿದು ಅವರು ಖುಷ್ವಂತ್ ಸಿಂಗ್‌ರ ಭಸ್ಮವನ್ನು ಕೊಂಡೊಯ್ದು ಹಡಲಿಯ ಸರ್ಕಾರಿ ಶಾಲೆಯೊಂದರ ಗೋಡೆಯ ಮೇಲೆ ಸಿಮೆಂಟ್ ಜೊತೆಗೆ ಆ ಬೂದಿಯನ್ನು ಬೆರೆಸಿ ಮಾರ್ಬಲ್ ಕಲ್ಲೊಂದನ್ನು ಕೂರಿಸಿದ್ದಾರೆ. ಆ ಕಲ್ಲಿನ ಮೇಲೆ ಹೀಗೆ ಬರೆಯಲಾಗಿದೆ, 'ನನ್ನ ಬೇರುಗಳು ಇರುವುದು ಇಲ್ಲೇ. ಅವುಗಳನ್ನು ನಾನು ಉತ್ಕಟತೆಯ ಕಣ್ಣೀರೆರೆದು ಪೋಷಿಸಿಕೊಂಡು ಬಂದಿದ್ದೇನೆ'. 'ಶತ್ರು'ದೇಶದ ನೆಲದೊಳಗಿರುವ ತನ್ನ ಹುಟ್ಟೂರಿಗಾಗಿ ಹಂಬಲಿಸಿದ ಖುಷ್ವಂತ್ ಸಿಂಗ್‌ರು ದೇಶದ್ರೋಹಿಗಳೇ?



ಖುಷ್ವಂತ್ ಸಿಂಗ್

ಅದಿರಲಿ, ಇತ್ತೀಚೆಗಷ್ಟೇ ಮೃತರಾದ ಪಾಕಿಸ್ತಾನದ ಅಬ್ದುಲ್ ಸತ್ತರ್ ಈಧಿ ಒಂದು ದಶಕದ ಕಾಲ ಮಾತುಬಾರದ ಭಾರತೀಯ ಹಿಂದೂ ಹುಡುಗಿ ಗೀತಾಳನ್ನು ತನ್ನ ಸುಪರ್ದಿಯಲ್ಲಿ ಜೋಪಾನ ಮಾಡಿದ್ದು ಕೂಡಾ ಮಾನವೀಯ ದೃಷ್ಟಿಯಿಂದ. ಸ್ನೇಹ, ಪ್ರೀತಿ, ಸಿಟ್ಟು, ಸೆಡವು, ಸ್ವಾಭಿಮಾನಗಳೆಂಬ ಮನುಷ್ಯ ಸಹಜ ಸಂವೇದನೆಗಳು ಅವರಿಗೂ ಇವೆ. ಆದರೆ ಧರ್ಮಾಂಧ ಮೂಲಭೂತವಾದಿಗಳ ಮತ್ತು ಅಧಿಕಾರಸ್ಥ ಬಂಡವಾಳಶಾಹಿಗಳ ಮುಂದೆ ಅಸಹಾಯಕರಾಗಿದ್ದಾರೆ, ಥೇಟು ನಮ್ಮಂತೆಯೇ!

ನಮ್ಮಲ್ಲಿ ಹೇಗೆ ಪಾಕಿಸ್ತಾನದ ರಾಜತಾಂತ್ರಿಕ ನಿಲುವುಗಳನ್ನು ಅಲ್ಲಿನ ಸಾಮಾನ್ಯ ಜನರಿಗೂ ಅಳವಡಿಸಿ ಪಾಕಿಸ್ತಾನದ ಜೊತೆಜೊತೆಗೆ ಪಾಕಿಸ್ತಾನಿಗಳ ವಿರುದ್ಧವೂ ಒಂದು ವಿವೇಚನಾರಹಿತ ಆಕ್ರೋಶವನ್ನು ಮಡುಗಟ್ಟಿಸಲಾಗಿದೆಯೋ ಅದೇ ಥರಾ ಅಲ್ಲಿನ ಅಧಿಕಾರಸ್ಥ ರಾಜಕಾರಣಿಗಳು ಭಾರತದ ರಾಜತಾಂತ್ರಿಕ ನಿಲುವುಗಳನ್ನು ಇಲ್ಲಿನ ಸಾಮಾನ್ಯ ಜನರ ನಿಲುವನ್ನಾಗಿಸಿ ಭಾರತ, ಭಾರತೀಯರ ವಿರುದ್ಧ ಆಕ್ರೋಶವನ್ನು ಹುಟ್ಟುಹಾಕಿದ್ದಾರೆ. ವಾಸ್ತವವೇನೆಂದರೆ ಜಗತ್ತಿನ ಬಹುದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವೆನಿಸಿಕೊಳ್ಳುವ ಭಾರತದಲ್ಲೇ 'ಸಾಮಾನ್ಯ ಪ್ರಜೆ'ಯ ಪ್ರಭುತ್ವವನ್ನು ಮತ ಹಾಕುವುದಕ್ಕಷ್ಟೇ ಸೀಮಿತವಾಗಿಸಲಾಗಿದೆ. ಮತ ಒತ್ತಿದ ತರುವಾಯ ತನ್ನ ಮೂಲಭೂತ ಹಕ್ಕು ಪಡೆದುಕೊಳ್ಳುವುದಕ್ಕೂ ಅವನು ದೈನೇಸಿಯಾಗಿ ಬಾಗಬೇಕಿದೆ. ಹಾಗಿರುವಾಗ ಅವನ ತುಡಿತಕ್ಕೆ, ಆಶಯಕ್ಕೆ ತಕ್ಕಂತೆ ದೇಶದ ರಾಜತಾಂತ್ರಿಕ ನಿಲುವುಗಳನ್ನು ಆಡಳಿತಶಾಹಿ ವರ್ಗ ರೂಪಿಸುತ್ತದೆಯೇ? ಊಹ್ಞೂಂ, ಸುತರಾಂ ಇಲ್ಲ. ಅವೇನಿದ್ದರು ಬಂಡವಾಳಶಾಹಿಗಳ ಅನುಕೂಲಕ್ಕೆ ತಕ್ಕಂತೆ ತಿರುವು ಪಡೆಯುತ್ತವೆ. ಆದರೆ ಅದನ್ನು ಸಮಸ್ತ ಭಾರತೀಯರು ಪ್ರತಿನಿಧಿಸಬೇಕು! ಈ ವಿಚಾರದಲ್ಲಿ ನೋಡುವುದಾದರೆ ಧರ್ಮದ ನೆಲೆಗಟ್ಟಿನಲ್ಲಿ ದೇಶ ಕಟ್ಟಿಕೊಂಡ ಪಾಕಿಸ್ತಾನಿಗಳ ಪಾಡು ನಮಗಿಂತ ಹೀನಾಯ!! ಒಂದರ್ಥದಲ್ಲಿ ಇಬ್ಬರೂ ಸಂತ್ರಸ್ತರೆ. ಒಬ್ಬ ಸಂತ್ರಸ್ತನ ಸಂಕಟವನ್ನು ಇನ್ನೊಬ್ಬ ಸಂತ್ರಸ್ತ ತಾನೇ ಅರ್ಥಮಾಡಿಕೊಳ್ಳಲು ಸಾಧ್ಯ. ಇಷ್ಟೆಲ್ಲ ವೈರತ್ವ ವಾತಾವರಣದ ನಡುವೆಯೂ ಸತ್ತರ್ ಈಧಿ ಥರದವರು ಗೀತಾಳಂತಹ ಅಸಹಾಯಕಳಿಗೆ ಆಸರೆಯಾಗಿ ನಿಲ್ಲುವುದು, ನೂರ್ ಫಾತಿಮಾಳಂತಹ ಅಮಾಯಕಳ ಬದುಕಿಗಾಗಿ ಇಡೀ ಭಾರತೀಯರೇ ಮೊರೆಯಿಡುವುದು, ಇವೆಲ್ಲಾ ಘಟಿಸುವುದು ಎರಡೂ ದೇಶಗಳ ಸಾಮಾನ್ಯ ಜನರಲ್ಲಿರುವ ಇಂತಹ ಸಮಾನ ಅಂಶದ ಕಾರಣಕ್ಕೆ. ಇದನ್ನು ನಾವೆಲ್ಲ ಅರ್ಥಮಾಡಿಕೊಳ್ಳ ಬೇಕಿದೆ, ಪಾಕಿಗಳು ಕೂಡಾ!


ಸುತ್ತಿರುವ ಪ್ರೀತಿಗೆ ನಾವು ಹೆಜ್ಜೆಹೆಜ್ಜೆಗೂ ಗದ್ಗದಿತರಾಗು ದ್ದೇವೆ". ಸಾಝುದ್ ದಂಪತಿಗಳು ತಮ್ಮ ಕಾಳಜಿಯನ್ನು ಾತಿಗಷ್ಟೇ ಸೀಮಿತವಾಗಿಸಿಕೊಳ್ಳಲಿಲ್ಲ. ನೂರ್ ಫಾತಿಮಾಳ ಕಿತ್ಸೆಗೆಂದು ಭಾರತದ ಮೂಲೆಮೂಲೆಯಿಂದ ರಿದುಬಂದ ಹಣ ಅಪಾರ ಪ್ರಮಾಣದಲ್ಲಿತ್ತು. ಇತ್ತ ನಾರಾಯಣ ಹೃದಯಾಲಯ ಕೂಡಾ ನೂರ್ ಫಾತಿಮಾಳನ್ನು ಬ್ಬ ರೋಗಿಯನ್ನಾಗಷ್ಟೇ ನೋಡದೆ ಎರಡು ದೇಶಗಳ ಡುವಿನ ಶಾಂತಿ ಪ್ರೈರಿನ ಎಳೆ ಚಿಗುರೆಂಬಂತೆ ಪರಿಗಣಿಸಿ ಪರೇಷನ್‌ಗೆ ತಗುಲಿದ್ದ ಮೊತ್ತದಲ್ಲಿ ಅರ್ಧದಷ್ಟು ಹಣವನ್ನು ಾತ್ರ ಪಡೆದಿತ್ತು. ತಮ್ಮಲ್ಲಿ ಉಳಿದ ಹಣವನ್ನು ಪೇರಿಸಿ ದೋಸ್ತಿ' ಎಂಬ ಟ್ರಸ್ಟ್ ಹುಟ್ಟುಹಾಕಿದ ಫಾತಿಮಾ ಹೆತ್ತವರು ರಡೂ ದೇಶಗಳ ಬಡಮಕ್ಕಳ ಆರೋಗ್ಯದ ಉಪಯೋಗಕ್ಕೆಂದು ನಿಧಿಯನ್ನು ಮೀಸಲಿಟ್ಟಿದ್ದಾರೆ.


ಈಗ ಯೋಚಿಸಿ ನೋಡಿ. ಭಾರತಕ್ಕೆ ಹೇಗೆ ಪಾಕಿಸ್ತಾನ ಶತ್ರುರಾಷ್ಟ್ರವೋ, ಅದೇರೀತಿ ಪಾಕಿಸ್ತಾನಕ್ಕೂ ಭಾರತ ಶತ್ರು ರಾಷ್ಟ್ರ. ತನ್ನ ಶತ್ರುರಾಷ್ಟ್ರವನ್ನು ನೀವು ಹೊಗಳುತ್ತಿದ್ದೀರಿ ಅಂತ ಪಾಕಿಸ್ತಾನದ ಮುಲ್ಲಾಗಳು, ಧರ್ಮಾಂಧರು ನೂರ್ ಫಾತಿಮಾಳ ಹೆತ್ತವರ ಮೇಲೆ ಫತ್ವಾ ಹೊರಡಿಸಿದರೆ ಅದೆಷ್ಟು ಅರ್ಥಹೀನ! ಅಂತವರಿಗೆ ಮನುಷ್ಯತ್ವ ಇದೆ ಅನ್ನಲಿಕ್ಕಾಗುತ್ತದೆಯೇ? ಹಾಗಿದ್ದಮೇಲೆ ಪಾಕಿಸ್ತಾನದ ಜನರಿಂದ ತನಗೆ ಸಿಕ್ಕ ಆತಿಥ್ಯಕ್ಕೆ ಪ್ರತಿಯಾಗಿ ರಮ್ಯಾ ಆಡಿದ ಮಾತುಗಳಲ್ಲಿ 'ರಾಷ್ಟ್ರದ್ರೋಹ'ವನ್ನು ಹೇರಿಸುತ್ತಿರುವವರಿಗೆ ಏನೆನ್ನಬೇಕು?

ಇಂಥಾ ಹಳೇ ಕತೆಗಳು ಏನೇ ಇರಲಿ, ಮೋದಿಜಿ ಪ್ರಧಾನಿಯಾದ ನಂತರ ಪಾಕಿಸ್ತಾನ, ಪಾಕಿಸ್ತಾನಿಗಳು ನಮ್ಮ ಶತ್ರುಗಳು; ಅಂತವರ ಬಗ್ಗೆ ಮೆಚ್ಚುಗೆಯ ಮಾತನಾಡುವುದು ದೇಶದ್ರೋಹವೇ ಸರಿ ಅಂತ ಸೋಕಾಲ್ಡ್ ದೇಶಭಕ್ತರು ರಾಗದೆ ತೆಗೆಯುತ್ತಾರೆ ಅಂತಿಟ್ಟುಕೊಳ್ಳಿ. ಆಗಲೂ ರಮ್ಯಾ ಅಂತಹ ದ್ರೋಹಿಗಳ ಸರದಿಯಲ್ಲಿ ಮೋದಿ'ಜಿ'ಯ ನಂತರವೇ ಕಾಣಿಸಿಕೊಳ್ಳುತ್ತಾಳೆ! ಕಳೆದ ವರ್ಷದ ಡಿಸೆಂಬರ್ ಅಂತ್ಯದಲ್ಲಿ ಅಫ್ಘಾನಿಸ್ತಾನದ ಕಾಬೂಲ್‌ನಿಂದ ದೆಹಲಿಗೆ ವಾಪಾಸಾಗುವ ಮಾರ್ಗಮಧ್ಯದಲ್ಲಿ ಹಠಾತ್ತನೇ ಲಾಹೋರ್‌ನಲ್ಲಿ ಇಳಿದದ್ದು ಎಲ್ಲರಿಗೂ ಗೊತ್ತಿರುವಂತದ್ದೇ. ರಮ್ಯಾಳಂತಹ ಮಾಜಿ ಸಂಸದೆಯೊಬ್ಬಳು ಪಾಕಿಸ್ತಾನದ ಜನರ ಬಗ್ಗೆ ಮಾತನಾಡಿದ್ದಕ್ಕೆ 'ಜನಪ್ರತಿನಿಧಿಯಾಗಿದ್ದಂತಹ ಜವಾಬ್ದಾರಿಯುತ ವ್ಯಕ್ತಿಯಾಗಿದ್ದುಕೊಂಡು ಕೋಟ್ಯಂತರ ಭಾರತೀಯರ ಭಾವನೆಗಳಿಗೆ ಘಾಸಿಯಾಗುವಂತೆ ನಮ್ಮ ಶತ್ರುರಾಷ್ಟ್ರದ ಬಗ್ಗೆ ಮೆಚ್ಚುಗೆ ಮಾತನ್ನಾಡುವುದು ದೇಶದ್ರೋಹ' ಎಂಬುದಾಗಿ ಪ್ರತಿಭಟಿಸುತ್ತಿರುವವರಿಗೆ ಮಾಜಿ ಸಂಸದೆ ಸ್ಥಾನಕ್ಕಿಂತ ಹಾಲಿ ಪ್ರಧಾನಿ ಹುದ್ದೆ ಇನ್ನೂ ಜವಾಬ್ದಾರಿಯುತವಾದದ್ದು, ಅಂತಹ ಹುದ್ದೆಯಲ್ಲಿದ್ದುಕೊಂಡು ಯಾವ ಘನಂದಾರಿ ಕಾರ್ಯಕ್ರಮವೂ ಇಲ್ಲದೆ ಶತ್ರು ನೆಲಕ್ಕೆ ಭೇಟಿ ನೀಡಿ ಅಲ್ಲಿನ ಪ್ರಧಾನಿಯನ್ನು ಆಲಿಂಗಿಸಿಕೊಂಡದ್ದು ತಪ್ಪು ಅಂತ ಅವತ್ಯಾಕೆ ಅನ್ನಿಸಲಿಲ್ಲ. ಅವರ ದೇಶಪ್ರೇಮಿ ಭಾವನೆಗಳೇಕೆ ಘಾಸಿಗೊಳ್ಳಲಿಲ್ಲ.

ರಮ್ಯ ಮೊದಲಿಗಳಲ್ಲ

ಪಾಕಿಸ್ತಾನ ಜನಗಳ ಆತಿಥ್ಯವನ್ನು ಹೊಗಳಿದ್ದರಲ್ಲಿ ರಮ್ಯ ಮೊದಲಿಗಳೇನೂ ಅಲ್ಲ, ಖುದ್ದು ಪ್ರಧಾನಿ ಮೋದಿಯೇ ಪಾಕಿಸ್ತಾನ ಪ್ರಧಾನಿಯ ಆತಿಥ್ಯವನ್ನು ಬಾಯ್ತುಂಬ ಹೊಗಳಿದ್ದುಂಟು. ಇಂತಹ ಹಲವು ನಿದರ್ಶನಗಳು ಸಿಗುತ್ತವೆ. ಇತ್ತೀಚೆಗಷ್ಟೆ ಇಂಡಿಯಾ ಟುಡೇ ಸುದ್ದಿ ಸಂಸ್ಥೆ ನಡೆಸಿದ 'ಪ್ಯಾಶಿನೇಟ್ ಪಾಕಿಸ್ತಾನ್' ಎಂಬ ಕಾರ್ಯಕ್ರಮವೊಂದರಲ್ಲಿ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಸೌರವ್ ಗಂಗೂಲಿ ಮತ್ತು ಪಾಕ್ ಕ್ರಿಕೆಟ್ ಟೀಮಿನ ಮಾಜಿ ನಾಯಕ ಇಂಜಮಾಮ್ ಉಲ್ ಹಕ್‌ರನ್ನು ಮುಖಾಮುಖಿಯಾಗಿ ನಿಲ್ಲಿಸಲಾಗಿತ್ತು. ಆಗ ಸೌರವ್ ಪಾಕಿಸ್ತಾನಿಗರ ಆತಿಥ್ಯವನ್ನು ಸ್ಮರಿಸುತ್ತಾ ನುಡಿದದ್ದು ಹೀಗೆ "ನನ್ನ ಜೀವಮಾನದ ಅತ್ಯಂತ ಅವಿಸ್ಮರಣೀಯ ಪ್ರವಾಸ ಅಂತ ಹೇಳುವುದಾದರೆ 2004ರ ಪಾಕಿಸ್ತಾನ ಪ್ರವಾಸ. ಅಲ್ಲಿ ಸಿಕ್ಕಂತಹ ಆತಿಥ್ಯವನ್ನು ನಾನು ಬೇರೆಡೆ ನೋಡಿದ್ದೇ ಕಡಿಮೆ. ನಾವು ಸುಮಾರು ಎರಡೂವರೆ ತಿಂಗಳು ಅಲ್ಲಿದ್ದೆವು. ಎಲ್ಲಾ ಕಡೆ, ಹೊಟೇಲ್‌ನಲ್ಲಿ, ಅಲ್ಲಿಯ ಜನ, ಊಟ, ಉಪಚಾರ, ಫೆಸಿಲಿಟಿಗಳು ತುಂಬಾತುಂಬಾನೇ ಆತ್ಮೀಯವಾಗಿದ್ದವು. ಆನ್‌ಫೀಲ್ಡ್ ಮತ್ತು ಆಫ್‌ಫೀಲ್ಡ್ ಎರಡೂ ಕಡೆ ಜನ ನಮ್ಮ ಮೇಲೆ ಪ್ರೀತಿ ತೋರಿಸಿದ್ರು". ಇದು ಕೇವಲ ಸೌರವ್ ಮಾತು ಮಾತ್ರವಲ್ಲ, ಆ ಸರಣಿಯಲ್ಲಿ ಭಾಗವಹಿಸಿದ್ದ ಬಹುತೇಕ ಭಾರತೀಯ ಆಟಗಾರರು ಇಂತದ್ದೇ ಅಭಿಪ್ರಾಯವನ್ನು ಹಂಚಿಕೊಂಡಿದ್ದರು. (https://www.youtube.com/watchhv=G8nt-6eaX-4h)





ಇನ್ನು ಇತ್ತೀಚೆಗಷ್ಟೆ ಪಾಕಿಸ್ತಾನದಲ್ಲಿ ಆಯೋಜನೆಯಾಗಿದ್ದ ಏಷ್ಯಾ ಕಪ್ ಕಬಡ್ಡಿ ಪಂದ್ಯಾವಳಿಯಲ್ಲಿ ಭಾಗವಹಿಸಲು ತೆರಳಿದ್ದ ಭಾರತ ತಂಡ ಕಪ್ತಾನ ಅನೂಪ್ ಕುಮಾರ್ (http://video.dunyanews.tv/index.php/en/mustwatch/46867/Indian-captain-praises-Pakistan's-hospitality-during-Asia-Cup-Kabaddi?.V7viy9R95nI http://video.dunyanews.tv/index.php/en/mustwatch/46867/Indian-captain-praises-Pakistan's-hospitality-during-Asia-Cup-Kabaddih)

ಸಹ ಸೌರವ್ ಗಂಗೂಲಿಯಂತೆಯೇ ಪಾಕಿಸ್ತಾನ ಜನರ ಆತಿಥ್ಯಕ್ಕೆ ಮಾರುಹೋಗಿ ಮೆಚ್ಚುಗೆಯ ಮಾತಾಡಿದ್ದುಂಟು. ಇನ್ನು ಹಿರಿಯ ಬಾಲಿವುಡ್ ನಟ ರಝಾ ಮುರಾದ್ ಒಂದುಹೆಜ್ಜೆ ಮುಂದೆಹೋಗಿ "ಒಲಿಂಪಿಕ್ಸ್‌ನಲ್ಲಿ ಆತಿಥ್ಯಕ್ಕೆ ಅಂತ ಗೋಲ್ಡ್ ಮೆಡಲ್ ಏನಾದರು ಇದ್ದಿದ್ದರೆ ಪಾಕಿಸ್ತಾನಿ ಜನರೇ ಅದನ್ನು ಸತತವಾಗಿ ಪಡೆದುಕೊಳ್ಳುತ್ತಾ ಬರುತ್ತಿದ್ದರು" ಅಂತ (www.thenews.com.pk/print/103446-Indian-artiste-all-praise-for-hospitality-of-Pakistanis) ಹೇಳಿದ್ದರು.

ಅಷ್ಟೆಲ್ಲ ಯಾಕೆ, ಇಡೀ ಪ್ರಪಂಚವನ್ನೇ ಸುತ್ತುತ್ತಿದ್ದೀರಿ ಪಕ್ಕದ ಪಾಕಿಸ್ತಾನಕ್ಕೆ ಭೇಟಿ ನೀಡುವ ಧೈರ್ಯ ನಿಮಗಿಲ್ಲವೇ ಅಂತ ಯಾರಾದರು ಕಿಚಾಯಿಸುವ ಅಪವಾದ ತಪ್ಪಿಸಿಕೊಳ್ಳಲೋ ಎಂಬಂತೆ ಪ್ರಧಾನಿ ಮೋದಿ'ಜಿ' ಪಾಕಿಸ್ತಾನಕ್ಕೆ ದಿಢೀರ್ ಹಾರಿಳಿದು ಬಂದಾಗ ಇದೇ ಆರ್‌ಎಸ್‌ಎಸ್‌ನ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ "ಭಾರತ ಪಾಕಿಸ್ತಾನಗಳು ಒಂದೇ ದೇಹದಿಂದ ಜನ್ಮವೆತ್ತಿದ ಸೋದರ ರಾಷ್ಟ್ರಗಳು. ಒಂದು ಕುಟುಂಬದಲ್ಲಿ ಸಮಸ್ಯೆ ಬಂದಾಗ ಸಾಮರಸ್ಯ ಕಾಪಾಡಿಕೊಳ್ಳಲು ಇಬ್ಬರಲ್ಲಿ ಯಾರಾದರು ಒಬ್ಬರು ಒಂದು ಹೆಜ್ಜೆ ಮುಂದಿರಿಸಬೇಕು. ಆ ಕೆಲಸವನ್ನು ಮೋದಿಜಿ ಮಾಡಿರೋದು ಸ್ವಾಗತಾರ್ಹ" ಎಂದಿದ್ದರು. ಮೋದಿ'ಜಿ' ಹೋಗಿಬಂದಾಗ ಪಾಕಿಸ್ತಾನ ನಮ್ಮ ಸಹೋದರ ರಾಷ್ಟ್ರವಾಗಿತ್ತು. ರಮ್ಯ ಹೋಗಿಬಂದ ಕೂಡಲೇ ಅದು 70 ವರ್ಷಗಳ ಪರಮ ದುಶ್ಮನಿ ರಾಷ್ಟ್ರವಾಗಿಬಿಟ್ಟಿದೆ. ಅದಿರಲಿ, 2014ರ ತನ್ನ ಪ್ರಮಾಣವಚನ ಕಾರ್ಯಕ್ರಮಕ್ಕೆ ಅದೇ ದುಶ್ಮನಿ ನೆಲದ ಪ್ರಧಾನಿಯನ್ನು ಮೋದಿ ಆಹ್ವಾನಿಸಿದಾಗಲೂ ಪಾಕಿಸ್ತಾನ ಸೋದರ ರಾಷ್ಟ್ರವೇ ಆಗಿತ್ತು! ದ್ವಂದ್ವ ಅಂದ್ರೆ ಇದು ನೋಡಿ....

ನೆನಪಿರಲಿ, ಅವತ್ತೂ ಸಹ ಮೋದಿ ರಮ್ಯಾ ಹೊಗಳಿದಂತೆಯೇ ಪಾಕಿಸ್ತಾನಿ ಪ್ರಜೆಯ ಆತಿಥ್ಯವನ್ನು ಹೊಗಳಿ ಟ್ವೀಟಿಸಿದ್ದರು. ಅಷ್ಟಕ್ಕೂ ಆ ಪ್ರಜೆ ಬೇರಾರೂ ಅಲ್ಲ, ನಮ್ಮ ಶತ್ರುರಾಷ್ಟ್ರದ ಪ್ರಧಾನಿ! ತಮ್ಮ ಪಾಕಿಸ್ತಾನದ ದಿಢೀರ್ ಭೇಟಿ ಮುಗಿಸಿಕೊಂಡು ಬರುವಾಗ 'ನವಾಜ್ ಷರೀಫ್ ಸಾಹೇಬರ (ಪಾಕಿಸ್ತಾನ ಪ್ರಧಾನಿ) ಆತಿಥ್ಯ, ಅವರು ನನ್ನನ್ನು ಸ್ವಾಗತಿಸಿದ ಬಗೆ ಮತ್ತು ಕೊನೆಗೆ ನಾನು ಮರಳುವಾಗ ವಿಮಾನ ನಿಲ್ದಾಣದವರೆಗೆ ಬಂದು ಬೀಳ್ಕೊಟ್ಟ ಅವರ ಔದಾರ್ಯಕ್ಕೆ ನಾನು ಮನಸೋತಿದ್ದೇನೆ' ಅಂತ ನಮ್ಮ ಪ್ರಧಾನಿ ಟ್ವೀಟ್ ಮಾಡಿದ್ದರು. ನಮ್ಮ ಶತ್ರುದೇಶದ ಪ್ರಧಾನಿಯ ಆತಿಥ್ಯವನ್ನು ಮೋದಿ ಹೊಗಳುತ್ತಿರುವಾಗ ನಮ್ಮ ಭಾವನೆಗೆ ಘಾಸಿ ಮಾಡುತ್ತಿದ್ದೀರಿ ಅಂತ ಯಾರೊಬ್ಬರೂ ಪ್ರತಿಭಟಿಸಲಿಲ್ಲ. ಮೋದಿಗೊಂದು ನ್ಯಾಯ, ರಮ್ಯಾಗೊಂದು ನ್ಯಾಯ!

ಅಸಲಿಗೆ ಅವತ್ತು ಮೋದಿ ಪಾಕಿಸ್ತಾನಕ್ಕೆ ಭೇಟಿಕೊಟ್ಟು, ಪ್ರಧಾನಿ ನವಾಜ್ ಷರೀಫ್‌ಗೆ ಬರ್ತ್‌ಡೇ ವಿಶ್ ಮಾಡಿ, ರೈವಿಂಡ್‌ನ ಷರೀಫ್ ಮನೆಯಲ್ಲಿ ನಡೆಯುತ್ತಿದ್ದ ಆತನ ಮೊಮ್ಮಗಳ ಮದುವೆಗೆ ಹೋಗಿಬಂದದ್ದನ್ನು ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ 'ದಟ್ಸ್ ಲೈಕ್ ಎ ಸ್ಟೇಟ್ಸ್‌ಮನ್. ಪಡೋಸಿ ಸೆ ಐಸಿ ಹೀ ರಿಶ್ತೆ ಹೋನಾ ಚಾಹಿಯೆ... (ಮುತ್ಸದ್ದಿತನ ಅಂದ್ರೆ ಇದು. ನಮ್ಮ ನೆರೆಹೊರೆಯವರ ಜೊತೆ ಸಂಬಂಧ ಇದೇ ಥರಾ ಇರ್ಬೇಕು)' ಅಂತ ಟ್ವೀಟಿಸಿ ಕೊಂಡಾಡಿದ್ದರು. ಇವತ್ತು ಅದೇ ಸುಷ್ಮಾ ಸ್ವರಾಜ್‌ರ ಬಿಜೆಪಿ ಮಂದಿ ರಮ್ಯಾ ಪಾಕ್ ಜನತೆಯ ಆತಿಥ್ಯ ಕೊಂಡಾಡಿದ್ದನ್ನು ದೇಶದ್ರೋಹದ ಕೆಲಸದಂತೆ ಬಿಂಬಿಸಲು ಬೆವರು ಹರಿಸುತ್ತಿದ್ದಾರೆ.

ಒಂದಂತೂ ಸತ್ಯ, ರಮ್ಯಾ ಬಾಯಿಂದ ಹೊರಬಿದ್ದ ಅಷ್ಟೂ ಅಭಿಪ್ರಾಯ ಮೋದಿ'ಜಿ' ಬಾಯಿಂದಲೋ, ಸುಷ್ಮಾ ಬಾಯಿಂದಲೋ ಹರಿದುಬಂದಿದ್ದರೆ ಆಗ ಅದು ಖಂಡಿತ ಮುತ್ಸದ್ದಿತನವಾಗಿರುತ್ತಿತ್ತು. ಹೇಳಿದ್ದು ಕಾಂಗ್ರೆಸ್‌ನ ರಮ್ಯಾ ಆದ್ದರಿಂದ ಅದೀಗ ದೇಶದ್ರೋಹ!

■ ಗಿರೀಶ್ ತಾಳಿಕಟ್ಟೆ

ಒಲಿಂಪಿಕ್ಸ್‌ಗೆ ನಾಗ ಸಾಧು ಕಳಿಸಿದರೆ ಹೇಗೆ!?

ಥೂತ್ತೇರಿ

- ಯಾಹೂ


ರಿಯೋ ಒಲಿಂಪಿಕ್ಸ್‌ಗೆ ತೆರೆಬಿದ್ದಿದೆ. ಈ ಸಮಯದಲ್ಲಿ ಇಬ್ಬರು ಹೆಣ್ಣು ಮಕ್ಕಳು ಈ ದೇಶದ 130 ಕೋಟಿ ಜನರ ಮಾನ ಉಳಿಸಿದ್ದಾರೆ. ಇಷ್ಟು ಅಗಾಧ ಜನಸಂಖ್ಯೆಯ ದೇಶದಲ್ಲಿ ಕೇವಲ ಇಬ್ಬರು ಹೆಣ್ಣುಮಕ್ಕಳು ಮಾತ್ರ ಪದಕದೊಡನೆ ಬರುತ್ತಾರೆಂದರೆ ಈ ದೇಶಕ್ಕೆ ಏನೋ ಆಗಿದೆ ಎಂದರ್ಥವಲ್ಲವೆ. ಖಂಡಿತ ಯಾವುದೋ ಭೀಕರ ಕಾಯಿಲೆ ಈ ದೇಶವನ್ನ ಆವರಿಸಿದೆ. ಅದರಲ್ಲಿ ಮೊದಲನೆಯದಾಗಿ ಧಾರ್ಮಿಕ ಸಂವಿಧಾನದ ಮೂಲಕ ಮನುಷ್ಯನ ಮನಸ್ಸನ್ನ ನಾಶ ಮಾಡಲಾಗಿದೆ. ಜಾತಿಗಳನ್ನ ಸೃಷ್ಟಿಸಿ ಕೀಳರಿಮೆ ಉಂಟುಮಾಡಲಾಗಿದೆ. ಯಾವ ಸಾಧನೆಗೂ ಇಲ್ಲಿ ತರಬೇತಿಯಿಲ್ಲ. ಈ ರೋಗಗ್ರಸ್ತ ಸಮಾಜದಲ್ಲಿ ನಾವು ಪದಕ ಗೆಲ್ಲಲು ಬೇರೆಯದೆ ಸ್ಪರ್ಧೆ ಏರ್ಪಡಿಸಿದರೆ ಹೇರಳವಾಗಿ ಪದಕಗಳನ್ನು ಜಮಾಯಿಸಬಹುದಂತಲ್ಲಾ, ಥೂತ್ತೇರಿ!

* * *

ಒಲಿಂಪಿಕ್ ಚಿನ್ನವನ್ನ ಟಿ.ವಿ. ಕ್ವಾಕ್‌ಗಳು ಹೇಳುವಂತೆ ನಿಜಕ್ಕೆ ಹೊಡೆಯಬೇಕಾದರೆ ನಮ್ಮ ಸ್ಪರ್ಧೆಗಳು ಇಂತಿವೆ. ನೆಲಮಟ್ಟ ಜಡೆ ಬೆಳೆಸುವುದು, ಉಗುರು ಬೆಳೆಸುವುದು, ನೀರ ಮೇಲೆ ಅಂಗಾತ ತೇಲುವುದು, ಏಳು ಮುದ್ದೆ ನುಂಗುವುದು, ಹದಿನೇಳು ಎಳನೀರು ಕುಡಿಯುವುದು, ಒಂದು ಬುಟ್ಟಿ ಮೆಣಸಿನ ಕಾಯಿ ತಿನ್ನುವುದು, ಅತಿವೇಗದಲ್ಲಿ ಎರಡು ಡಜನ್ ಇಡ್ಲಿ ತಿನ್ನುವುದು, ಹಸಿ ಮಾಂಸ ತಿನ್ನುವುದು, ಹಲ್ಲಿ, ಹಾವು, ಚೇಳು ತಿನ್ನುವುದು, ಕೂದಲು ತಿನ್ನುವುದು... ಇದಕ್ಕಿಂತ ಜಗತ್ತಿನಲ್ಲಿ ಯಾರೂ ಗೆಲ್ಲಲಾಗದ ಪದಕದ ಸ್ಪರ್ಧೆಯೊಂದಿದೆ. ಅದು ಯಾವುದಪ್ಪಾ ಅಂದರೆ, ನಮ್ಮ ನಾಗಾ ಸನ್ಯಾಸಿಗಳದ್ದು. ಮೈಗೆಲ್ಲಾ ಬೂದಿ ಬಳಿದುಕೊಂಡು ಬರುವ ಆ ಸ್ವಾಮಿಗಳು, ತಮ್ಮ ಶಿಶ್ನಕ್ಕೆ ಹಗ್ಗ ಕಟ್ಟಿ, ಅದರ ತುದಿಗೊಂದು ಸ್ಕೂಟರು ಕಟ್ಟಿ ಅದನ್ನು ಎಳೆದು ಅಣಕಿಸುತ್ತಾ ಓಡುತ್ತಾ ಎತ್ತುವ ಈ ಶಿಶ್ನೋತ್ತಮರ ಎದುರು ಜಗತ್ತಿನ ಯಾವ ಸ್ಪರ್ಧಿಯೂ ಗೆಲ್ಲಲಾರನಂತಲ್ಲಾ, ಥೂತ್ತೇರಿ!

* * *

ದೈಹಿಕ ಸಾಮರ್ಥ್ಯದ ವಿಜೃಂಭಣೆಯ ಒಲಿಂಪಿಕ್ಸ್‌ನಲ್ಲಿ ಯಾವ ಪದಕ ಬರದಿದ್ದರೂ ನಮ್ಮ ಪುರೋಹಿತರು ಬೇಸರ ಪಟ್ಟುಕೊಳ್ಳುವುದಿಲ್ಲ. ಏಕೆಂದರೆ ಅವರು ಇತಿಹಾಸವೆಂದು ಹೇಳುವ ಪುರಾಣದಲ್ಲಿ ಶನಿ ಕಾಗೆಯ ಮೇಲೆ ಆಕಾಶಯಾನ ಮಾಡಿದ್ದ. ವಿಷ್ಣು ಗರುಡನ ಮೇಲೆ ಹಾರಿದ್ದ. ಪುಷ್ಪಕವಿಮಾನ ಸವಾರರಂತು ಏರ್ ಡೆಕ್ಕನ್‌ಗಿಂತಲೂ ವೇಗವಾಗಿ ಭೂಮಂಡಲ ಸುತ್ತುತ್ತಿದ್ದರು. ಭೀಮ ಎಪ್ಪತ್ತೇಳು ಮಣ ಉಕ್ಕಿನ ಗದೆ ಬೀಸುತ್ತಿದ್ದ. ಜೊತೆಗೆ ಹನ್ನೊಂದು ಬಂಡಿ ಅನ್ನ ನುಂಗುತ್ತಿದ್ದ. ರಾಮನ ಬಾಣ ಏಳು ಆಲದಮರ ಸೀಳಿ ಮತ್ತೆ ತನ್ನ ಬತ್ತಳಿಕೆ ಸೇರುತ್ತಿತ್ತು. ಹನುಮಂತನಂತೂ ಹೆಲಿಕಾಪ್ಟರ್ ತರ ಹಾರಿ ಲಂಕಾಕ್ಕೆ ಹೋಗುತ್ತಿದ್ದ. ಅದೇ ಸಮಯದಲ್ಲಿ ಅಮೆರಿಕದಲ್ಲಿ ಇಳಿದು ದೇವಸ್ಥಾನ ಕಟ್ಟಿ ವಾಪಸು ಬಂದ. ಸಂಜೀವಿನಿ ಪರ್ವತವನ್ನು ಬಾಲದಲ್ಲೇ ಸುತ್ತಿಕೊಂಡು ತಂದಿದ್ದ. ಅದೆಲ್ಲಾ ಬೇಡ, ನಮ್ಮ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಬ್ರಿಟಿಷರು ಸೆರೆಮನೆಗೆ ಕೊಂಡೊಯ್ಯುವಾಗ, ಹಡಗಿನಿಂದ ಜಿಗಿದ ವೀರ ಸಾವರ್‌ಕರ್ ಮತ್ತೆ ಮೇಲೆದ್ದಿದ್ದು ಭೂಮಿ ಸಿಕ್ಕಿದಾಗಲೆ. ಅವರು ಹುಟ್ಟಿದಾಗಲೇ ಒಂದು ಚೊಂಬು ಹಾಲು ಕುಡಿದಿದ್ದರು ಎಂದು ಕತೆ ಹೇಳಿಕೊಂಡು ಕೂತಿರುವ ಪುರೋಹಿತ ಶಾಹಿಗಳಿಗೆ, ದೇಶದ ಯುವಕರು ಒಲಿಂಪಿಕ್ಸ್‌ಗೆ ಹೋಗಿ, ಚಿನ್ನ ತರದಿದ್ದರೇನಂತೆ, ನಮ್ಮ ಹೆಮ್ಮೆಗೆ ನಮ್ಮ ಪುರಾಣಪುರುಷರ ಸಾಧನೆಯೇ ಸಾಕೆಂದು ಬೀಗುತ್ತಿವೆ ಯಂತಲ್ಲಾ, ಥೂತ್ತೇರಿ!!



* * *

ಕರ್ನಾಟಕದಲ್ಲಿ ಚುನಾವಣೆ ಇನ್ನೆರಡು ವರ್ಷಕ್ಕೆ ಬರಲಿದೆ. ಆದಕ್ಕಾಗಿ ಮತೀಯ ಕ್ಷೋಭೆಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಸಂಚು ಮಾಡಿದ ಕೇಶವಕೃಪಾದ ಬೆಲ್ಲುಗಳು, ತಮಗಾಗದವರ ವಿರುದ್ಧ ದೇಶದ್ರೋಹದ ಘೋಷಣೆ ಕೂಗಿದ ಆಪಾದನೆ ಹೊರಿಸಿ, ಅಹೋರಾತ್ರಿ ಧರಣಿ ಮಾಡಿ ಎಂದು ಸೂಚಿಸಿದವಂತಲ್ಲಾ. ಕೂಡಲೇ ಸ್ವಂತ ಮೆದುಳಿಲ್ಲದ ಹುಡುಗರು ಓದಲು ಇಷ್ಟವಿಲ್ಲದ ಶೂದ್ರ ಹುಡುಗರನ್ನು ಹಿಡಿದುಕೊಂಡು ಗಲಭೆ ಹಬ್ಬಿಸಿಯೇ ಬಿಟ್ಟರಂತಲ್ಲಾ.

ಇದ್ದಕ್ಕಿದ್ದಂತೆ ದೇಶಪ್ರೇಮದ ಅಮಲೇರಿಸಿಕೊಂಡು ಕೊಳ್ಳಿದೆವ್ವಗಳಂತೆ ಕುಣಿಯುತ್ತಿರುವ ಹೊಸ ಚಡ್ಡಿಗಳ ಇತಿಹಾಸ ಕೆದಕಿದರೆ ಇವರ ಸಂತತಿಯೇ ಭಾರತದ ಸ್ವಾತಂತ್ರ್ಯಕ್ಕೆ ಸೇರಿ ಹೋರಾಡಿದ ದಾಖಲೆಯಿಲ್ಲ, ದೇಶದ ಗಡಿ ಕಾಯುತ್ತಿರುವ ಉದಾಹರಣೆಯಿಲ್ಲ, ದೇಶದ ಎಸ್‌ಆರ್‌ಪಿ ಅಂದರೆ ಪ್ರಹಾರ ದಳದಲ್ಲಿಲ್ಲ, ಎಲ್ಲಾ ಪೊಲೀಸ್ ಪೇದೆಗಳೂ ಬಹು ತೇಕ ಬಡವರ ಮಕ್ಕಳು. ವಸ್ತು ಸ್ಥಿತಿ ಇಂತಿರುವಾಗ ದೇಶಪ್ರೇಮಿಗಳೆಂದು ಕೂಗುತ್ತಿರುವ ಈ ದೇಶದ್ರೋಹಿಗಳು ನಿಜಕ್ಕೂ ದೇಶದ್ರೋಹಿಗಳಾಗುತ್ತಿವೆಯಂತಲ್ಲಾ, ಥೂತ್ತೇರಿ!!! ■

ಮಂಡ್ಯ: ಕರ್ನಾಟಕ ಸಂಘ ಮತ್ತೆ ಜೆಪಿ ಪಾಲ

ಆಗಸ್ಟ್ 21ರಂದು ಮಂಡ್ಯದ ಕರ್ನಾಟಕ ಸಂಘದ ಅಧ್ಯಕ್ಷ ಹಾಗೂ ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ನಿರೀಕ್ಷೆಯಂತೆಯೇ ಆಕ್ರಮಣಶೀಲ ವ್ಯಕ್ತಿತ್ವದ ಪ್ರೊ. ಜಯಪ್ರಕಾಶ್‌ಗೌಡ ಮತ್ತು ಅವರ ಟೀಂ ಗೆದ್ದಿದೆ. ಆದರೆ ಕನ್ನಡ ನಾಡು-ನುಡಿ ಸಂರಕ್ಷಣೆಗೆ ಹುಟ್ಟಿಕೊಂಡ, 70 ವರ್ಷಗಳ ಇತಿಹಾಸವಿರುವ ಕರ್ನಾಟಕ ಸಂಘದ ಚುನಾವಣೆಯ ಅಬ್ಬರ ಕಂಡ ಮಂಡ್ಯದ ಜನ ಬಾಯಿ ಮೇಲೆ ಬೆರಳಿಟ್ಟುಕೊಂಡಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲೂ ಭುಜಬಲ, ಹಣಬಲ ಕಂಡ ಮೊದಲ ಚುನಾವಣೆ ಇದೆಂದರೆ ಅತಿಶಯೋಕ್ತಿಯೇನಲ್ಲ, ಸಾಂಸ್ಕೃತಿಕ ಲೋಕಕ್ಕೆ ಬೇಕಿತ್ತೆ ಇಂತಹ ಚುನಾವಣೆ ಎಂದು ಜನ ಮಾತನಾಡುತ್ತಿರುವುದು ಸುಳ್ಳಲ್ಲ.

ಕರ್ನಾಟಕ ಸಂಘದ ಇತಿಹಾಸ

ಇಂಡುವಾಳು ಹೊನ್ನಯ್ಯ, ಮಹಾಬಲರಾವ್, ಸಿಂಗ್ಲಾಚಾರ್‌ರವರ ಪ್ರಯತ್ನದಿಂದ 1946ರಲ್ಲಿ ಜನ್ಮತಾಳಿದ ಕರ್ನಾಟಕ ಸಂಘ ಕನ್ನಡ ನಾಡು-ನುಡಿಗೆ ಸಂಬಂಧಿಸಿದ ಚಳವಳಿಗೆ ಪ್ರೇರಕಶಕ್ತಿಯಾಗಿತ್ತು, ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಸಕ್ರಿಯವಾಗಿ ಪಾತ್ರ ವಹಿಸಿತ್ತು, 1965ರಲ್ಲಿ



ಮೀರಾ

ಆಗಿನ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ವೆಂಕಟಸುಬ್ಬಯ್ಯ, ಜಿಲ್ಲಾಧಿಕಾರಿ ನಂಜುಂಡಯ್ಯ ಮಂಡ್ಯದ ಸ್ಟೇಡಿಯಂ ಬಳಿ ಕರ್ನಾಟಕ ಸಂಘದ ಕಟ್ಟಡ ಉದ್ಘಾಟನೆ ಮಾಡಿದ್ದರು.

2006ರವರೆಗೆ ಸಾಹಿತ್ಯ ಕ್ಷೇತ್ರದ ವಿವಿಧ ಆಯಾಮಗಳಲ್ಲಿ ಭಾಗವಹಿಸಿ ಎಲೆಮರೆಕಾಯಿಯಂತಿದ್ದ ಕರ್ನಾಟಕ ಸಂಘ ಸಾಹಿತಿ ಪ್ರೊ.ಜಯಪ್ರಕಾಶ್‌ಗೌಡ ಅಧ್ಯಕ್ಷರಾಗಿ ಬಂದನಂತರ ಅದರ ಖದರ್ರೇ ಬದಲಾಯಿತು. ಒರಟು ವ್ಯಕ್ತಿತ್ವದ ಜಯಪ್ರಕಾಶ್‌ಗೌಡ ನೂರಾರು ದಾನಿಗಳಿಂದ ಚಂದಾ ಸಂಗ್ರಹಿಸಿ ಕರ್ನಾಟಕ ಸಂಘಕ್ಕೊಂದು ಮೆರುಗು ತಂದುಕೊಟ್ಟರು. ಸುಮಾರು 2 ಕೋಟಿ ವೆಚ್ಚದ ಸಂಶೋಧನಾ ಕೇಂದ್ರ ಸಂಘದ ಆವರಣದಲ್ಲಿ ತಲೆ ಎತ್ತಿ ನಿಲ್ಲಲು ಕಾರಣೀಭೂತರಾದರು. ಹಲವು ಗಣ್ಯರನ್ನು ಸಂಪರ್ಕಿಸಿ ಧತ್ತಿನಿಧಿ ಸ್ಥಾಪಿಸಿ ಸಾಹಿತ್ಯ ಸಂಘಟನೆ ಮತ್ತಿತರ ಕ್ಷೇತ್ರದಲ್ಲಿ ಸಾಧನೆ ಮಾಡಿದ ಗಣ್ಯರನ್ನು ಗುರುತಿಸಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸುವ ಮೂಲಕ ಕರ್ನಾಟಕ ಸಂಘದ ಕಾರ್ಯಚಟುವಟಿಕೆಯನ್ನು ವಿಸ್ತರಿಸಿದರು.

2006ರಲ್ಲಿ ಅಧ್ಯಕ್ಷರಾದ ನಂತರ ಮೊದಲು ಸಂಘಕ್ಕೊಂದು ಸುಸಜ್ಜಿತ ಕಟ್ಟಡ ಹಾಗೂ ಶೈಕ್ಷಣಿಕ ಕೇಂದ್ರ ಕಟ್ಟಲು ರೂಪುರೇಷೆ ಸಿದ್ಧಪಡಿಸಿದರು. ಅದಕ್ಕಾಗಿ ಗಣ್ಯರಿಂದ ಚಂದಾ, ರಾಜಕಾರಣಿಗಳಿಂದ ಅನುದಾನ ಕ್ರೂಢೀಕರಿಸಲು ಮುಂದಾದರು. ವಿಧಾನಪರಿಷತ್ ಸದಸ್ಯರಾದ ಕೆ.ಟಿ.ಶ್ರೀಕಂಠೇಗೌಡರಿಂದ ಅನುದಾನ ತಂದು ಸಂಶೋಧನಾ ಕೇಂದ್ರಕ್ಕೆ ಅಡಿಪಾಯ ಹಾಕಿದರು. ನಂತರ ಕರ್ನಾಟಕ ಸಂಘದ ಆವರಣಕ್ಕೆ ಆಗಿನ ಜೆಡಿಎಸ್ ಶಾಸಕ ಎಂ.ಶ್ರೀನಿವಾಸ್‌ರನ್ನು ಕರೆತಂದರು. ಜೆಪಿಯ ಮಾತಿಗೆ ಮನ್ನಣೆ ನೀಡಿದ ಶಾಸಕ ಎಂ.ಶ್ರೀನಿವಾಸ್ ಕಟ್ಟಡದ ಸಂಪೂರ್ಣ ಜವಾಬ್ದಾರಿ ವಹಿಸಿಕೊಂಡರು. ಶಾಸಕ ಚೆಲುವರಾಯಸ್ವಾಮಿ 6 ಲಕ್ಷ ಅನುದಾನ ನೀಡಿದರೆ, ಎಂಎಲ್‌ಸಿ ರಾಮಕೃಷ್ಣ ಕೂಡ ಸಾಕಷ್ಟು ಅನುದಾನ ನೀಡಿದರು. ಹಾಗೆಯೇ ನಿತ್ಯ ಸಚಿವ ಕೆ.ವಿ.ಶಂಕರಗೌಡರ ಶತಮಾನೋತ್ಸವ ಕಾರ್ಯಕ್ರಮದ ಭಾಗವಾಗಿ ಸಂಗ್ರಹವಾಗಿದ್ದ ಉಳಿಕೆ 21 ಲಕ್ಷ ಹಣವನ್ನು ಬಳಸಿಕೊಂಡರು. ಸುಮಾರು 2 ಕೋಟಿ ರೂ. ವೆಚ್ಚದಲ್ಲಿ 4 ಅಂತಸ್ತಿನ ಭವ್ಯ ಕಟ್ಟಡ ಕರ್ನಾಟಕ ಸಂಘದ ಆವರಣದಲ್ಲಿ ನಿರ್ಮಿಸಿದ್ದಾರೆ. ಇದಕ್ಕೆ ಕರ್ನಾಟಕ ಸಂಘದ ಪೋಷಕರಾದ ಮಾಜಿ ಶಾಸಕ ಎಂ.ಶ್ರೀನಿವಾಸ್ ಕೊಡುಗೆ ಅಪಾರ. ಕರ್ನಾಟಕ ಸಂಘದ ಅಭಿವೃದ್ಧಿಗೆ ಸಾಕಷ್ಟು ದುಡಿದಿರುವ ಎಂ.ಶ್ರೀನಿವಾಸ್ ತನ್ನ ಪಕ್ಷದ ಸದಸ್ಯರಿಗೆ ಸಾಕಷ್ಟು ಸಂಖ್ಯೆಯಲ್ಲಿ ಸದಸ್ಯತ್ವವನ್ನು ಕೊಡಿಸಿದ್ದಾರೆ.

ಜನದನಿ, ಗೆಳೆಯರ ಬಳಗ, ಕಸಾಪದಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿರುವ ಜೆಪಿ ಧೂಳು ತುಂಬಿದ್ದ ಕರ್ನಾಟಕ ಸಂಘಕ್ಕೆ ಹೊಸ ಆಯಾಮ ನೀಡಿದ್ದೇನೋ ಸರಿ. ಆದರೆ ಜೆಪಿಯದ್ದು ಸದಾ ಆಕ್ರಮಣಶೀಲ ವ್ಯಕ್ತಿತ್ವ. ಯಾರೂ ತನ್ನನ್ನು ಪ್ರಶ್ನೆ ಮಾಡಬಾರದು ಎಂಬ ಹಠಮಾರಿ ಧೋರಣೆಯ ಜೆಪಿ ಎರಡು ಬಾರಿ ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಸ್ಥಾನಕ್ಕೆ ನಿಂತು ಸೋತಿದ್ದಾರೆ. ಕಳೆದ ಹತ್ತು ವರ್ಷಗಳಿಂದ ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದಾರೆ.

"ನಿತ್ಯಸಚಿವರೆಂದೇ ಖ್ಯಾತಿಗಳಿಸಿರುವ ಕೆ.ವಿ.ಶಂಕರಗೌಡರ ಶತಮಾನೋತ್ಸವದ ಹೆಸರಿನಲ್ಲಿ ಹಣ ವಸೂಲಿ ಮಾಡಿದ್ದಾರೆ. ಸರಿಯಾದ ಲೆಕ್ಕಪತ್ರ ಇಟ್ಟಿಲ್ಲ, ಲೆಕ್ಕ ಕೇಳಿದರೆ ಸರಿಯಾದ ಉತ್ತರ ನೀಡುತ್ತಿಲ್ಲ" ಎಂದು ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ಆರೋಪಿಸಿದ ಸದಸ್ಯರಾದ ರೈತ ನಾಯಕ ಕೆ.ಬೋರಯ್ಯ, ಪ್ರೊ.ಜಿ.ಟಿ.ವೀರಪ್ಪ, ರೈತನಾಯಕಿ ಸುನಂದಜಯರಾಂ, ಯುವ ಸಾಹಿತಿ ಸತೀಶ್ ಜವರೇಗೌಡ, ಮೊದಲಾದವರು 2014ರಲ್ಲಿ ಬೈಲಾ ತಿದ್ದುಪಡಿ ಮಾಡಿ ಅಧ್ಯಕ್ಷ ಹಾಗೂ ನಿರ್ದೇಶಕರ ಸ್ಥಾನಕ್ಕೆ ಚುನಾವಣೆ ನಡೆಯುವಂತೆ ಮಾಡಿದರು. ಇವರೆಲ್ಲ ಪ್ರಶ್ನೆ ಮಾಡದಿದ್ದರೆ ಕರ್ನಾಟಕ ಸಂಘಕ್ಕೆ ಚುನಾವಣೆಯೇ ನಡೆಯುತ್ತಿರಲಿಲ್ಲ.

2014ರಲ್ಲಿ ಬೈಲಾ ತಿದ್ದುಪಡಿ ಮಾಡಿದರೂ ಚುನಾವಣೆ ನಡೆಯಲು 2 ವರ್ಷಗಳೇ ಕಾಯಬೇಕಾಯಿತು ಅಂದರೆ



ಸುನಂದ ಜಯರಾಮ್

ಕರ್ನಾಟಕ ಸಂಘದ ಅಧ್ಯಕ್ಷ ಜೆಪಿಯ ಪವರ್ ಎಂತಹದೆಂಬುದು ಗೊತ್ತಾಗುತ್ತದೆ.

ಹತ್ತಾರು ಗಣ್ಯರಿಂದ ಧನಸಹಾಯ ಪಡೆದು ಕೋಟ್ಯಾಂತರ ರೂ. ಮೌಲ್ಯದ ಕಟ್ಟಡ ಹೊಂದಿರುವ ಕರ್ನಾಟಕ ಸಂಘಕ್ಕೆ ತನ್ನನ್ನು ಪ್ರಶ್ನೆ ಮಾಡಿದ ಸದಸ್ಯರು ಅಧಿಕಾರಕ್ಕೆ ಬದಲು ಅಷ್ಟು ಸುಲಭವಾಗಿ ಬಿಟ್ಟುಕೊಡಲು ಜೆಪಿ ಸಿದ್ಧರಿರಲಿಲ್ಲ, ಯಾವಾಗ ಅಧ್ಯಕ್ಷ-ನಿರ್ದೇಶಕರ ಸ್ಥಾನಕ್ಕೆ ಚುನಾವಣೆ ನಡೆಯುವುದು ಪಕ್ಕಾ ಆಯಿತೋ ಅಂದಿನಿಂದಲೇ ಜೆಪಿ ಚುನಾವಣೆ ಗೆಲ್ಲಲು ರಣತಂತ್ರ ರೂಪಿಸಿದ್ದರು. ಅದಕ್ಕೆಂದೇ 700-800ರಷ್ಟಿದ್ದ ಸದಸ್ಯರ ಸಂಖ್ಯೆಯನ್ನು 2800ಕ್ಕೆ ಏರಿಸಿದರು. ಪ್ರಶ್ನೆ ಮಾಡಿದ ವಿರೋಧಿ ಸದಸ್ಯರಿಗೆ ಗೊತ್ತೇ ಆಗದಂತೆ ತಮ್ಮ ಬಳಗದ ಸಾವಿರಾರು ಜನರಿಗೆ ಸದಸ್ಯತ್ವ ಮಾಡಿದ ಜೆಪಿ ಚುನಾವಣೆಗೂ ಮೊದಲೇ ಗೆದ್ದಿದ್ದರು. ಜೆಪಿ ತಮ್ಮ ಬೆಂಬಲಿಗರಿಗೆ ಸದಸ್ಯತ್ವ ನೀಡಿದ ವಿಚಾರ ಜೆಪಿ ವಿರೋಧಿಗಳಿಗೆ ಅಂತಿಮ ಗಳಿಗೆಯಲ್ಲಿ ಗೊತ್ತಾಗಿ ಅವರು ಸಹಕಾರ ನಿಬಂಧಕರಿಗೆ ದೂರು ಕೊಟ್ಟ ಮೇಲೆ ಸದಸ್ಯತ್ವ ನೊಂದಣಿ ಬಂದ್ ಆಯಿತು. ಆದರೆ ಅಷ್ಟರಲ್ಲಾಗಲೇ ಜೆಪಿ ಅವರ ಬೆಂಬಲಿಗರು 1500ಕ್ಕೂ ಹೆಚ್ಚು ಹೊಸ ಸದಸ್ಯರ ನೋಂದಣಿ ಮಾಡಿ ಮುಗಿಸಿದ್ದರು.

ಚುನಾವಣೆ ಅಬ್ಬರ


ಕರ್ನಾಟಕ ಸಂಘದ ಅಧ್ಯಕ್ಷರಾಗಿ ಮತ್ತೆ ಆಯ್ಕೆಯಾಗಲು ಸರ್ವ ಸಿದ್ಧತೆ ಮಾಡಿಕೊಂಡೇ ಕಣಕ್ಕಿಳಿದ ಜೆಪಿ ತನ್ನ ವಿರೋಧಿಗಳಿಗೆ ಸಿದ್ಧತೆ ಮಾಡಿಕೊಳ್ಳಲು ಸಮಯವೇ ಸಿಗದಂತೆ ಚುನಾವಣೆ ನಡೆಯುವ 10 ದಿನ ಮುಂದೆ ದಿನಾಂಕ ಘೋಷಣೆ ಮಾಡಿದರು. ಒಂದು ಅಧ್ಯಕ್ಷ ಸ್ಥಾನ ಹಾಗೂ 14 ಮಂದಿ ನಿರ್ದೇಶಕ ಸ್ಥಾನಕ್ಕೆ ಚುನಾವಣೆ ನಡೆಯಬೇಕಿತ್ತು, ಅದರಂತೆ (ಪರಿಶಿಷ್ಟ ಜಾತಿ ಮಹಿಳೆ), ಹಿಂದುಳಿದ ವರ್ಗ (ಮಹಿಳಾ ಮೀಸಲು), ಧಾರ್ಮಿಕ ಅಲ್ಪಸಂಖ್ಯಾತ (ಮಹಿಳೆಯ ಅಥವಾ ಪುರುಷ), ಎಸ್ಸಿ ಮೀಸಲು, ಸಾಮಾನ್ಯ ಮಹಿಳೆ ಸೇರಿದಂತೆ 9 ಮಂದಿ ಸಾಮಾನ್ಯ ವರ್ಗದಿಂದ ನಿರ್ದೇಶಕ ಸ್ಥಾನಕ್ಕೆ ಆಯ್ಕೆ ನಡೆಯಬೇಕಿತ್ತು. ಕರ್ನಾಟಕ ಸಂಘದ ಚುನಾವಣೆಗೆ ಜೆಪಿ ಆಯ್ಕೆ ಮಾಡಿದವರಲ್ಲಿ ಜೆಡಿಎಸ್ ಪಕ್ಷದ ಜಿ.ಪಂ. ಮಾಜಿ ಅಧ್ಯಕ್ಷ ತಗ್ಗಹಳ್ಳಿ ವೆಂಕಟೇಶ, ನಗರಸಭಾ ಸದಸ್ಯ ಬೋರೇಗೌಡ, ಜೆಡಿಎಸ್ ಮಹಿಳಾ ಅಧ್ಯಕ್ಷೆ ಮಂಜುಳಾ ಉದಯಶಂಕರ್, ಗುತ್ತಿಗೆದಾರರ ಸೋಮಶೇಖರ್, ಬ್ಯಾಂಕ್ ಮ್ಯಾನೇಜರ್ ಚಂದ್ರಹಾಸ, ಶಿಕ್ಷಣ ಸಂಸ್ಥೆ ನಡೆಸುವ ಹರೀಶ್‌ಕುಮಾರ್ ಇದ್ದರು. ಆರ್ಥಿಕವಾಗಿ ಬಲಾಢ್ಯರಾಗಿದ್ದ ಇವರನ್ನು ನಿರ್ದೇಶಕ ಸ್ಥಾನಕ್ಕೆ ನಿಲ್ಲಿಸಿದ ಜೆಪಿ ತಾನೂ ಗೆದ್ದು ಎಲ್ಲರನ್ನು ಗೆಲ್ಲಿಸಿಕೊಂಡಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಜಯಪ್ರಕಾಶ್‌ಗೌಡ ಎದುರು ಸ್ಪರ್ಧಿಸಿದ್ದು ಕಸಾಪ ಮಾಜಿ ಅಧ್ಯಕ್ಷೆ ಮೀರಾ ಶಿವಲಿಂಗಯ್ಯ. ಕಳೆದ ಜಿಲ್ಲಾ ಕಸಾಪ ಚುನಾವಣೆಯಲ್ಲಿ ಮೀರಾ ಶಿವಲಿಂಗಯ್ಯರನ್ನು ಗೆಲ್ಲಿಸುವುದರಲ್ಲಿ ಜೆಪಿಯವರ ಪಾತ್ರವೂ ಇತ್ತು, ಕಳೆದ ಬಾರಿ ಮಹಿಳೆಗೆ ಪ್ರಾತಿನಿಧ್ಯ ನೀಡಲು ತೀರ್ಮಾನವಾಗಿತ್ತು, ಆದರೆ ಆಗ ಜಿಲ್ಲಾ ಕಸಾಪ ಅಧ್ಯಕ್ಷರಾಗಿದ್ದ ಪ್ರೊ.ಹೆಚ್.ಎಸ್.ಮುದ್ದೇಗೌಡ 2ನೇ ಅವಧಿಗೆ ಮತ್ತೆ ಸ್ಪರ್ಧಿಸಲು ಮುಂದಾದರು. ಯಾರೇ ಆಗಲಿ 2 ಬಾರಿ ಜಿಲ್ಲಾ ಕಸಾಪ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಬಾರದು. ಬೇರೆಯವರಿಗೆ ಅವಕಾಶ ನೀಡಬೇಕು ಎಂಬ ಅಲಿಖಿತ ನಿಯಮದಂತೆ ರೆಡ್‌ಕ್ರಾಸ್ ಅಧ್ಯಕ್ಷೆ ದುದ್ದಿನ ಕುಳ ಮೀರಾ ಶಿವಲಿಂಗಯ್ಯ ಹೆಸರು ಫೈನಲ್ ಆಯಿತು. ಬೇಡ ಬೇಡ ಅಂದ್ರೂ ಮುದ್ದೇಗೌಡರು ಕೇಳದೆ ಎರಡನೇ ಬಾರಿ ಅಧ್ಯಕ್ಷರಾಗಲು ಹೊರಟರು. ಆಗ ಇದೇ ಮೀರಾ ಮೇಡಂ ಬೆಂಬಲಕ್ಕೆ ನಿಂತ ಜೆಪಿ ಮತ್ತವರ ಟೀಂ ಸೇರಿ ಚುನಾವಣೆಯಲ್ಲಿ ಮೀರಾ ಶಿವಲಿಂಗಯ್ಯ ಗೆಲ್ಲುವಂತೆ ನೋಡಿಕೊಂಡರು. ಆದರೆ ಬದಲಾದ ಸನ್ನಿವೇಶದಲ್ಲಿ ಈ ಬಾರಿ ಕರ್ನಾಟಕ ಸಂಘದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಜೆಪಿಯ ಎದುರು ನಿಂತವರೇ ಮೀರಾ ಶಿವಲಿಂಗಯ್ಯ. "ಕರ್ನಾಟಕ ಸಂಘದಲ್ಲಿ ಅವ್ಯವಹಾರ ನಡೆಸಿರುವ ಸರ್ವಾಧಿಕಾರಿ ಧೋರಣೆಯ ಜಯಪ್ರಕಾಶ್‌ಗೌಡ ಎದುರು ನಿಲ್ಲಲು ಸೂಕ್ತ ವ್ಯಕ್ತಿ ನೀವೇ" ಎಂದೇಳಿದ ಜೆಪಿ ವಿರೋಧಿ ಗುಂಪಿನವರು ನಿಲ್ಲಲು ಒಲ್ಲೆ ಎಂದಿದ್ದ ಮೀರಾ ಮೇಡಂರನ್ನು ಕೊನೆಗಳಿಗೆಯಲ್ಲಿ ಒಪ್ಪಿಸಿ ಜೆಪಿ ಎದುರು ಅಖಾಡಕ್ಕೆ ಇಳಿಸೇಬಿಟ್ಟರು.

ಕರ್ನಾಟಕ ಸಂಘದ ಚುನಾವಣೆಯಲ್ಲಿ ಗೆದ್ದು ಮತ್ತೆ ಅಧ್ಯಕ್ಷಗಾದಿಯಲ್ಲಿ ಕೂರಲು ಸಕಲ ರೀತಿಯಲ್ಲೂ ಸಜ್ಜಾಗಿದ್ದ ಜೆಪಿ ಮೀರಾ ಮೇಡಂರನ್ನು ಒಂದೇ ಹೊಡೆತಕ್ಕೆ ಮಲಗಿಸಿಬಿಟ್ಟರು. ಕಳೆದ ಕಸಾಪ ಚುನಾವಣೆಯಲ್ಲಿ ತನ್ನಲ್ಲಿದ್ದ ಹಣಬಲ ಹಾಗೂ ಬೆಂಬಲಿಗರ ಪಡೆಯಿಂದಾಗಿ ಗೆದ್ದ ಮೀರಾ ಮೇಡಂ ಇಲ್ಲೂ ಹಾಗೆ ನಡೆಯುತ್ತದೆ ಎಂದುಕೊಂಡು ಹಲವೆಡೆ ಬೆಂಬಲಿಗರ ಮೂಲಕ ಮತಗಳಿಗೆ ಹಣ ಕೊಟ್ಟರು. ಹಾಗೆಯೇ "ಈ ಬಾರಿಯ ಚುನಾವಣೆ ಸಲೀಸಲ್ಲ, ಹಣ ಹಂಚದಿದ್ದರೆ ಸೋಲುವುದು ಗ್ಯಾರಂಟಿ" ಎಂದುಕೊಂಡ ಜೆಪಿ ಕೂಡ ತಮ್ಮ ಬೆಂಬಲಿಗರ ಮೂಲಕ ಭರ್ಜರಿಯಾಗೇ ಹಣ ಹಂಚಿಸಿ 1702 ಮತಗಳನ್ನು ಪಡೆದರು. ಮೀರಾ ಮೇಡಂಗೆ ದಕ್ಕಿದ್ದು ಕೇವಲ 500 ಮತಗಳು. ಅಲ್ಲಿಗೆ ಜೆಪಿ 1202ರ ಮತಗಳ ಭಾರೀ ಅಂತರದಿಂದ ಮೀರಾ ಮೇಡಂ ಎದುರು ಗೆದ್ದು ಬೀಗಿದರು. ಹಾಗೆಯೇ ಜೆಪಿ ಬಣದ 14 ಮಂದಿ ನಿರ್ದೇಶಕರಾಗಿ ಆಯ್ಕೆಯಾದರು. ಚುನಾವಣೆಗೂ ಮುನ್ನ ಜೆಪಿ ತನ್ನ 1500ಕ್ಕೂ ಹೆಚ್ಚು ಬೆಂಬಲಿಗರಿಗೆ ಸದಸ್ಯತ್ವ ನೀಡಿದ ಪರಿಣಾಮ ಆಯ್ಕೆಯಾದ ಎಲ್ಲಾ ನಿರ್ದೇಶಕರು 1500ಕ್ಕೂ ಹೆಚ್ಚು ಮತಗಳಿಸಿ ವಿಜಯಿಯಾದರು. ಇತ್ತ ಮೀರಾ ಮೇಡಂ ಹಾಗೂ 14 ಮಂದಿ ಸೋತು ಸುಣ್ಣವಾಗಿ ಹೋದರು.



ವಿಜೇತರಾದ ಜೆಪಿ ಟೀಂ



ಜಯಪ್ರಕಾಶ್ ಗೌಡ

ಬದಲಾದ ಕಾಲಘಟ್ಟದಲ್ಲಿ ಅಂದು ಮೀರಾ ... ಎದುರು ಜಿಲ್ಲಾ ಕಸಾಪ ಚುನಾವಣೆಯಲ್ಲಿ ತಾನು ಸೋ... ಕಾರಣರಾದ ಜೆಪಿ ಪಾಳೆಯದಿಂದಲೇ ... ಹೆಚ್.ಎಸ್.ಮುದ್ದೇಗೌಡ ಗೆದ್ದರೆ, ಅತ್ತ ಮೀರಾ ... ಆಶೀರ್ವಾದದಿಂದ ಜಿಲ್ಲಾ ಕಸಾಪ ಅಧ್ಯಕ್ಷನಾ... ಚಾಮಲಾಪುರ ರವಿಕುಮಾರ್ ಕೂಡ ಗುರುವಿಗೆ ತಿರ... ಹಾಕಿ ಜೆಪಿ ಪಾಳಯ ಸೇರಿಕೊಂಡು ಬಿಟ್ಟ. ಕರ... ಸಂಘದ ಚುನಾವಣೆಯಲ್ಲಿ ಜೆಪಿ ಎದುರು ಸ್ಪ... ಸುತಾರಾಂ ಒಲ್ಲೆ ಎಂದ ಮೀರಾ ಮೇಡಂರ ಮನ... ಕಣಕ್ಕಿಳಿಸಲು ಚಾಮಲಾಪುರ ರವಿಕುಮಾರ್ ಕಾರಣವಾಗಿದ್ದ. ಆದರೆ ಚುನಾವಣೆಗೆ ಎರಡು ದಿನ ... ಮೀರಾ ಮೇಡಂಗೆ ಕೈಕೊಟ್ಟು ಜೆಪಿ ಪಾಳೆಯ ... ಚಾಮಲಾಪುರ ರವಿಕುಮಾರ ನಡೆಯ ಹಿಂ... ರಹಸ್ಯವೇನು? ಎಂಬ ಪ್ರಶ್ನೆ ಮಂಡ್ಯದ ಜನರನ್ನು ಕಾ... ಹಾಗೆಯೇ ಮೀರಾ ಮೇಡಂರನ್ನು ಕಾಡುತ್ತಿದೆ. ... ಗಳಿಗೆಯಲ್ಲಿ ಗುರುವಿಗೆ ಕೈಕೊಟ್ಟ ಚಾಮಲಾಪುರ... ಜೆಪಿ ಮಾಡಿದ ಮೋಡಿಯೇನು? ಎಂಬ ಪ್ರಶ್ನೆಗೆ ... ಉತ್ತರ ನೀಡಬೇಕು.

ಸಂಘದಲ್ಲಿ ಅವ್ಯವಹಾರ?

ಕರ್ನಾಟಕ ಸಂಘದ ಅಧ್ಯಕ್ಷರಾಗಿರುವ ಜೆಪಿಯ... ನಿರಂಕುಶ ಪ್ರಭುತ್ವ. ಹಠಮಾರಿ ಧೋರಣೆಯ ಜೆಪಿ ... ವೇದವಾಕ್ಯ. ಸಂಘದಲ್ಲಿ ಅವ್ಯವಹಾರ ನ... ಸಮರ್ಪಕವಾಗಿ ಲೆಕ್ಕಪತ್ರ ಇಟ್ಟಿಲ್ಲ, ಪಾರದ... ಮಾಯವಾಗಿದೆ. ಸಂಘದ ವಿರುದ್ಧ ಪ್ರಶ್ನಿಸುವ... ತುಳಿಯಲಾಗುತ್ತಿದೆ ಎಂದೆಲ್ಲ ಆರೋಪಿಸಿದ ಸದ... ಪ್ರೊ.ಜಿ.ಟಿ.ವೀರಪ್ಪ, ಸುನಂದ ಜಯರಾಂ, ... ಶಿವಲಿಂಗಯ್ಯ, ಕೆ.ಬೋರಯ್ಯ ಸತೀಶ್ ಜವರ... ಇವರೆಲ್ಲಾ ಒಂದುಗೂಡಿ ಚುನಾವಣೆಯಲ್ಲಿ ಸ್ಪರ್ಧಿ... ಗೆಲುವು ಸಾಧಿಸಲು ಸಾಧ್ಯವಾಗಲಿಲ್ಲ, ಯುದ್ಧ ಕಾ... ಶಸ್ತ್ರಾಭ್ಯಾಸ ನಡೆಸಲು ಹೋಗಿ ಸೋತುಹೋ... ಚುನಾವಣೆ ನಡೆಸದೆ ದೀರ್ಘಕಾಲ ಅಧ್ಯಕ್ಷ... ಜೆಪಿಯವರನ್ನು ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಮಾ... ಸಾಧನೆ ಎಂಬಂತಾಗಿದೆ.

ಕರ್ನಾಟಕ ಸಂಘದಲ್ಲಿ ಭ್ರಷ್ಟಾಚಾರ ನ... ಕೆ.ವಿ.ಶಂಕರಗೌಡರ ಹೆಸರಿನಲ್ಲಿ ಹಣ ಸಂಗ್ರಹಿಸಿ... ಭ್ರಷ್ಟಾಚಾರ ಮಾಡಿದ್ದಾರೆ ಎಂದು ಹೇಳುವ ಪ್ರಗತಿಪ... ಬೋರಯ್ಯ, ಎಚ್.ಎಲ್.ಕೇಶವಮ... ಸುನಂದಜಯರಾಂ ಇವರೆಲ್ಲಾ ಸೇರಿ ಮತ್ತೊಬ್ಬ ಭ್ರ... ಜೆಪಿ ಎದುರು ನಿಲ್ಲಿಸಿದ್ದು ಎಷ್ಟು ಸರಿ? ಎನ್ನುವುದ... ಬೆಂಬಲಿಗರ ವಾದ. ಸಾಮಾನ್ಯ ವರ್ಗದಿಂದ ... ಶಿವಲಿಂಗಯ್ಯ, ಪರಿಸರ ನಿಯಂತ್ರಣ ಮ... ಅಧ್ಯಕ್ಷನಾಗುವುದಕ್ಕೂ ಮುನ್ನ ಏನೇನೂ ಇರದಿದ್ದ ... ಮೀರಾ ತಂದೆ ಎಸ್.ಟಿ. ನಾಗರಾಜು ಕೂಡ ಸಾ... ಕುಟುಂಬದಿಂದ ಬಂದವರು. ಪಿಇಎಸ್ ಕಾಲೇ... ಪ್ರೊಫೆಸರ್ ಆಗಿದ್ದ ನಾಗರಾಜು ಆದಿಚುಂಚನಗಿರಿ ಕಾ... ಸೇರಿ ಬಾಲಗಂಗಾಧರ ಸ್ವಾಮೀಜಿಗೆ ಸಾ... ಹತ್ತಿರವಾಗಿದ್ದರು. ಅವರ ಸಂಪರ್ಕ ಸಿಕ್ಕ ನಂತರ ... ಶಿವಲಿಂಗಯ್ಯನನ್ನು ರಾಜ್ಯ ಪರಿಸರ ಮಾಲಿನ್ಯ ನಿಯ... ಮಂಡಳಿ ಅಧ್ಯಕ್ಷರನ್ನಾಗಿ ಮಾಡಿಸಿದರು. ಪರಿಸರ ... ಮಂಡಳಿ ಅಧ್ಯಕ್ಷರಾಗಿದ್ದ ಅವಧಿಯಲ್ಲೇ ... ಶಿವಲಿಂಗಯ್ಯನವರ ಬ್ಯಾಂಕ್ ಬ್ಯಾಲೆನ್ಸ್ ಸಾ... ಎತ್ತರಕ್ಕೇರಿತು.

"ಸಾಮಾನ್ಯವರ್ಗದ ಶಿವಲಿಂಗಯ್ಯ ಪರಿಸರ ... ನಿಯಂತ್ರಣ ಮಂಡಳಿ ಅಧ್ಯಕ್ಷನಾದ ನಂತರ ... ಶ್ರೀಮಂತರಾದರು ಎಂಬುದು ನಮಗೂ ಗೊ... ಅಧಿಕಾರಕ್ಕಾಗಿ ಬಿಜೆಪಿಯಂತ ಕೋಮುವಾದಿ ಪಕ್ಷಕ್ಕೆ ... ಮೀರಾ ಶಿವಲಿಂಗಯ್ಯ ಕಳೆದ ಕಸಾಪ ಚುನಾವ...

ಸಿದ ದುಡ್ಡು ಎಷ್ಟೆಂಬುದು ಗೊತ್ತಿದೆ. ಕಸಾಪ ಧ್ಯಕ್ಷೆಯಾಗಿ ಅಧಿಕಾರಸ್ಥರಿಗೆ, ಬಂಡವಾಳಶಾಹಿಗಳಿಗೆ, ರಣಿನ ವ್ಯಕ್ತಿಗಳಿಗೆ ಜಿಲ್ಲಾ, ತಾಲ್ಲೂಕು, ಸಮ್ಮೇಳನಗಳಲ್ಲಿ ಹಾಕಿದ ಮೀರಾ ಶಿವಲಿಂಗಯ್ಯ ಭ್ರಷ್ಟಾಚಾರದ ಪಾಠ ಳುವುದನ್ನು ಬಿಡಲಿ. ಕರ್ನಾಟಕ ಸಂಘದಿಂದ .ಶಂಕರಗೌಡ ಶತಮಾನೋತ್ಸವ ವರ್ಷದ ಅಂಗವಾಗಿ ಗ್ರಹಿಸಿರುವ ಹಣಕ್ಕೆ ರಶೀದಿ ಇದೆ. ಖರ್ಚುವೆಚ್ಚದ ರವಿದೆ. ಶತಮಾನೋತ್ಸವದ ಸಮಿತಿಯಲ್ಲಿರುವ ೩.ವೀರಪ್ಪ ಆಗ್ಗ ಲೆಕ್ಕಾ ಕೇಳದೆ ಈಗ ಕೇಳುತ್ತಿರುವುದರ ದೆ ಯಾರಿದ್ದಾರೆ? ಜೆಪಿಯವರು ದುಡ್ಡು ಹೊಡೆದಿದ್ದರೆ ರೀತುಪಡಿಸಲಿ. ಅದು ಬಿಟ್ಟು ಆಧಾರವಿಲ್ಲದೆ ಹಣ ದುರುಪಯೋಗಮಾಡಿದ್ದಾರೆಂದು ವ್ಯಕ್ತಿಗತ ತೇಜೋವಧೆಗೆ ಯುವುದು ಎಷ್ಟು ಸರಿ. ಇದರ ಹಿಂದೆ ಜಿ.ಟಿ.ವೀರಪ್ಪ ಲಿಂಗಯ್ಯ ಇದ್ದಾರೆ" ಎನ್ನುವುದು ಜೆಪಿ ಬೆಂಬಲಿಗರ ತು.

ಗುರುತಿನ ಚೀಟಿಯೇ ಇಲ್ಲ

ಸಹಕಾರ ಸಂಘಗಳ ಬೈಲಾ ಪ್ರಕಾರ ಕರ್ನಾಟಕ ಸಂಘದ ನಾವಣೆಯಲ್ಲಿ ಮತಹಾಕುವ ಸದಸ್ಯರಿಗೆ ಭಾವಚಿತ್ರವುಳ್ಳ ರುತಿನ ಚೀಟಿ ನೀಡಬೇಕಿತ್ತು, ಆದರೆ ಆ ಕೆಲಸವನ್ನು ಪಡೆ ಮಾಡಲೇ ಇಲ್ಲ. ಸದಸ್ಯರಾಗಿರುವ ವ್ಯಕ್ತಿಯ ರ್ವಾಪರ ವಿಚಾರಿಸದೆ ಮತದಾನಕ್ಕೆ ಅವಕಾಶ ಡಲಾಗಿತ್ತು. ಈ ಬಗ್ಗೆ ಚುನಾವಣಾಧಿಕಾರಿ ಚನ್ನೇಗೌಡರಿಗೆ ಳಿದರೆ ಅವರು ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ವಚಿತ್ರವುಳ್ಳ ಗುರುತಿನ ಚೀಟಿ ನೀಡಿದ್ದರೆ ಸ್ವಲ್ಪ ಮಟ್ಟಿನ ಮವನ್ನಾದರೂ ತಡೆಯಬಹುದಿತ್ತು.

ಸುನಂದ ಜಯರಾಂ ಗೆಲ್ಲಬೇಕಿತ್ತು


ರೈತನಾಯಕಿ ಸುನಂದ ಜಯರಾಂ ಸಾಮಾನ್ಯ ಮಹಿಳೆ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ರೈತಸಂಘದ ಪ್ರಾರಂಭದ ದಿನಗಳಿಂದಲೂ ರೈತರು, ಮಹಿಳೆಯರು, ಶೋಷಿತರು, ಕಾರ್ಮಿಕರ ಪರವಾಗಿ ದನಿ ಎತ್ತುತ್ತಿರುವ ಸುನಂದ ಜಯರಾಂ ಇಂದಿಗೂ ತಮ್ಮನ್ನು ಸಂಪೂರ್ಣವಾಗಿ ಹೋರಾಟಕ್ಕೆ ಸಮರ್ಪಿಸಿಕೊಂಡಿರುವ ಮಹಿಳೆ. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಮೀರಾ ಶಿವಲಿಂಗಯ್ಯನವರಿಗೆ 500 ಮತ ಬಂದರೆ ಸುನಂದ ಜಯರಾಂನವರಿಗೆ 681 ಮತಗಳು ಬಂದಿವೆ.

ಜೆಪಿ ಹೊಸದಾಗಿ ಸದಸ್ಯತ್ವ ನೀಡಿದವರಿಗೆ ರೈತನಾಯಕಿ ಸುನಂದ ಜಯರಾಂರವರ ಹೋರಾಟದ ಬದುಕಿನ ಬಗ್ಗೆ ಗೊತ್ತಿರಲು ಸಾಧ್ಯವೇ ಇಲ್ಲ, ಗೊತ್ತಿದ್ದರೆ ಸುನಂದ ಜಯರಾಂರವರು ಸೋಲುವ ಪ್ರಶ್ನೆಯೇ ಇರಲಿಲ್ಲ, ಸುನಂದ ಜಯರಾಂ ಹಿನ್ನೆಲೆ, ಹೋರಾಟ ಗೊತ್ತಿರುವ ಕಾರಣದಿಂದಲೇ ಅವರಿಗೆ 681 ಮತ ಬಿದ್ದಿದೆ. ಒಂದು ವೇಳೆ ಚುನಾವಣೆಗೆ ಸಾಕಷ್ಟು ದಿನ ಇದ್ದಿದ್ದರೆ ಇವರೊಬ್ಬರ ಫಲಿತಾಂಶ ಬೇರೆಯಾಗುತ್ತಿತ್ತು.


ಸಂಘದಲ್ಲಿ ನಡೆಯುತ್ತಿರುವ ಅನ್ಯಾಯ, ಏಕವ್ಯಕ್ತಿ ತೀರ್ಮಾನ, ಸರ್ವಾಧಿಕಾರಿತನ ಸಾಮಾನ್ಯ ಜನರಿಗೆ ತಿಳಿಯಲಿ ಎನ್ನುವ ಉದ್ದೇಶದಿಂದ ಸುನಂದ ಜಯರಾಂ ಒತ್ತಾಯದಿಂದ ಸ್ಪರ್ಧಿಸಿದ್ದರು. ಚುನಾವಣೆಯಲ್ಲಿ ಸೋಲು-ಗೆಲುವು ಸಹಜ. ಮುಂದೆಯೂ ನಮ್ಮ ಹೋರಾಟ ನಿಲ್ಲುವುದಿಲ್ಲ ಎಂಬುದು ಪ್ರಗತಿಪರರ ಮಾತು.

ಇನ್ನು ಕೆ.ಬೋರಯ್ಯ, ಸತೀಶ್ ಜವರೇಗೌಡ, ಸ್ವಾಮಿ ಗೆದ್ದು ಬಂದಿದ್ದರೆ ಕರ್ನಾಟಕ ಸಂಘ ಮತ್ತಷ್ಟು ಕ್ರಿಯಾಶೀಲವಾಗಿ ಕೆಲಸ ಮಾಡಲು ಸಾಧ್ಯವಿತ್ತು, ಆದರೆ ಜೆಡಿಎಸ್ ಪಕ್ಷದ ಮಾಜಿ ಶಾಸಕ ಎಂ.ಶ್ರೀನಿವಾಸ್ ಅವರೇ ಚುನಾವಣೆಯ ಉಸ್ತುವಾರಿ ವಹಿಸಿಕೊಂಡು ಚುನಾವಣೆ ನಡೆಸಿದ್ದರಿಂದ ಅವರ ಪಕ್ಷದ ಮೂವರು ಕಾರ್ಯಕರ್ತರು, ಗುತ್ತಿಗೆದಾರ, ಶಿಕ್ಷಣೋದ್ಯಮಿ, ಬ್ಯಾಂಕ್ ಮ್ಯಾನೇಜರ್ ಗೆದ್ದು ಬಂದಿದ್ದು ನಿರೀಕ್ಷಿತವೇ ಆಗಿತ್ತು.

ಹಾಗೆಯೇ ಜೆಪಿಯವರು ಮಾಡಿರುವ ಅಭಿವೃದ್ಧಿ ಕೆಲಸಗಳ ಬಗ್ಗೆ ಗೌರವವಿದೆ. ಆದರೆ ಕೆ.ವಿ.ಶಂಕರಗೌಡರ ಹೆಸರಿನಲ್ಲಿ ಸಂಗ್ರಹಿಸಿರುವ ಹಣಕಾಸಿನ ಲೆಕ್ಕಕೊಡಬೇಕು. ಸಂಶೋಧನಾ ಕೇಂದ್ರಕ್ಕೆ ಎತ್ತಿರುವ ಹಣದ ವಿವರ ಕೊಡಬೇಕು ಎಂಬುದು ಜೆಪಿ ವಿರೋಧಿ ಸದಸ್ಯರ ಗುಂಪಿನ ವಾದ. ಅವರು ಕೇಳುತ್ತಿರುವುದು ಸರಿಯಾಗೇ ಇದೆ. ಕರ್ನಾಟಕ ಸಂಘ ಕೇವಲ ಜೆಪಿಯವರ ಮನೆ ಸ್ವತ್ತಲ್ಲ, ಅವರು ಕೇಳಿರುವ ಪ್ರಶ್ನೆಗೆ ಉತ್ತರ ಕೊಡಿ ಎನ್ನುವುದು ಮಂಡ್ಯದ ಜನರ ಒತ್ತಾಸೆ. ಇನ್ನಾದರೂ ಜೆಪಿಯವರು ತಮ್ಮ ಹಠಮಾರಿ ಧೋರಣೆ, ಆಕ್ರಮಣಶೀಲ ವ್ಯಕ್ತಿತ್ವ ಬಿಟ್ಟು ಈಗ ಎತ್ತಿರುವ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡಬೇಕಿದೆ. ■


ಕರ್ನಾಟಕ ಸಂಘದ ಸಂಶೋಧನ ಕೇಂದ್ರ ಕಟ್ಟಡ

ಮಲಬಾರ್ ಗೋಲ್ಡ್ ಸುತ್ತ ಪ್ರತಾಪನ ಸುಳ್ಳು ಪ್ರಲಾಪ



ಪ್ರತಾಪ ಸಿಂಹ ಸಂಸದನೋ, ಅಂಕಣಕಾರನೋ, ವಿಷಕಾರುವ ಸರ್ಪವೋ ತವ ಕೋಮು ಗಲಭೆಯನ್ನು ಪ್ರಚೋದಿಸುವ ವ್ಯಕ್ತಿಯೋ ಎಂಬುದು ಗ ಪ್ರಚಲಿತದಲ್ಲಿ ಇರುವ ವಿಚಾರವಾಗಿದೆ. ಸಂಸದನಾಗುವ ಮುನ್ನ ಈತ ಕಣಕಾರನಾಗಿ ಸಾಕಷ್ಟು ಕೆರೆದು, ಬರೆದು ಕೋಮುವಾದ ಪ್ರಚೋದಿಸುವ ರ್ಯದಲ್ಲಿ ತೊಡಗಿಕೊಂಡಿರುತ್ತಿದ್ದರು.

ಸಂಸದನಾದ ನಂತರ, ಅದೂ ಆಡಳಿತ ಪಕ್ಷದ ಭಾಗವಾದ ನಂತರ, ವಾಬ್ದಾರಿಯುತವಾಗಿ ಪ್ರತಾಪ ಸಿಂಹ ವರ್ತಿಸುತ್ತಾರೆ ಎಂದು ಭಾವಿಸಿದವರಿಗೆ ಗ ನಿರಾಶೆಯಾಗಿದೆ. ಯಾಕೆಂದರೆ ಆತ ಜವಾಬ್ದಾರಿಯುತವಾಗಿ ವರ್ತಿಸುವ ಲು ಅತ್ಯಂತ ಬೇಜವಾಬ್ದಾರಿಯಿಂದ ವಿಷಕಾರಕ ಲೇಖನಗಳನ್ನು ಬರೆದು, ವಶ್ಯಕವಾಗಿ ಕೋಮುಗಲಭೆಗಳನ್ನು ಪ್ರಚೋದಿಸುವ ಕಾರ್ಯವನ್ನು ಡುತ್ತಿದ್ದಾರೆ.

ಆಗಸ್ಟ್ 20ರ 'ಮೈಸೂರು ಮಿತ್ರ' ಸಂಚಿಕೆಯಲ್ಲಿ 'ಮಲಬಾರ್ ಗೋಲ್ಡ್‌ನ ಶದ್ರೋಹ' ಎಂಬ ಲೇಖನವನ್ನು 'ಪ್ರಸ್ತುತಿ' ಎನ್ನುವ ಅಂಕಣದಲ್ಲಿ ಬರೆದಿದ್ದರು. ರಲ್ಲಿ "ಮಲಬಾರ್ ಗೋಲ್ಡ್ ಸಂಸ್ಥೆಯವರು ಪಾಕಿಸ್ತಾನದ ಸ್ವಾತಂತ್ರ್ಯ ಾಚರಣೆಯನ್ನು ಆಚರಿಸಿದ್ದಾರೆ. ಅಂದು ಕ್ವಿಜ್ ಕಾಂಪಿಟೇಷನ್‌ಗಳನ್ನು ನಡೆಸಿದ್ದಾರೆ. ್ಮ ದೇಶದ ಕಂಪನಿ ಪಾಕಿಸ್ತಾನದ ಸ್ವಾತಂತ್ರ್ಯ ದಿನಾಚರಣೆಯನ್ನು ಕ್ವಿಜ್ ಪಿಟೇಷನ್ ಹಾಗೂ ಆಕರ್ಷಕ ಉಡುಗೊರೆಯ ಮೂಲಕ ಆಚರಿಸುತ್ತದೆ. ೇನು ವಿಚಿತ್ರ? ಸಾಂಸ್ಕೃತಿಕ, ಸಾಮಾಜಿಕ ಮಹತ್ವದ ಮಲಬಾರ್ ಎಂಬ ರಿಟ್ಟುಕೊಂಡ, ಮಲಬಾರ್ ಎಂದರೆ ಶುದ್ಧತೆಯ ಪ್ರತೀಕ ಎಂಬ ಜಂಬ ಚ್ಚುಕೊಂಡ ಕಂಪನಿ ನಮ್ಮ ಶತ್ರುದೇಶದ ಹುಟ್ಟುಹಬ್ಬವನ್ನು ಆಚರಿಸಿಕೊಂಡಿತ್ತು! ೇ ದೇಶದ ಗ್ರಾಹಕರನ್ನು ನಂಬಿ ಆರಂಭಿಸಿದ, ಇಲ್ಲಿನ ಬೆವರ ಹನಿಗಳ ವನ್ನು ಬಂಡವಾಳ ಮಾಡಿಕೊಂಡ, ಇದೇ ದೇಶದ ಋಣವನ್ನು ಹೊತ್ತ ನಿಗೆ ಭಾರತದ ಸ್ವಾತಂತ್ರ್ಯೋತ್ಸವದಂದು ನೆನಪಾಗಿದ್ದು ಪಾಕಿಸ್ತಾನದ ತಂತ್ರ್ಯೋತ್ಸವ! ಅಂದರೆ ಈ ಕಂಪನಿ ಯಾವ ನೆಲದಲ್ಲಿ ನಿಂತು ಬೆಳೆಯಿತೋ, ವ ಜನ ಅದನ್ನು ಬೆಳೆಸಿದ್ದರೋ ಆ ನೆಲವನ್ನು ತುಂಡರಿಸಿ ಹೋದ, ್ದ ಜನರ ಪ್ರಾಣವನ್ನು ಬಲಿಕೊಟ್ಟ ಪಾಕಿಸ್ತಾನದ ಮೇಲೆ ಪ್ರೀತಿ ತೋರುವ ್ಧಿ. ಮಲಬಾರ್ ಗೋಲ್ಡ್‌ಗೆ ಅತೀ ಶೀಘ್ರದ ಅತ್ಯಂತ ದೊಡ್ಡದಾಗಿ ಬೆಳೆದ ದ ಕಂಪನಿ ಎಂಬ ಹೆಗ್ಗಳಿಕೆಯಿದೆ. ಅದನ್ನು ದೊಡ್ಡದಾಗಿ ಬೆಳೆಸಿದ್ದು ರು? ಭಾರತೀಯರೋ? ಪಾಕಿಸ್ತಾನಿಗಳೋ? ಪಾಕಿಸ್ತಾನದಲ್ಲಿ ಒಂದೇ ದು ಶೋ ರೂಮ್ ಇಲ್ಲದಿದ್ದರೂ ಮಲಬಾರ್ ಚಿನ್ನದಂಗಡಿಗೆ ಅದೇನು ಕಿಸ್ತಾನದ ಮೇಲೆ ಅಷ್ಟೊಂದು ವ್ಯಾಮೋಹ? ತಮ್ಮ ಅಂಗಡಿಯಲ್ಲಿ ಕುಳಿತು ಕತ್ತರಿಸಿ ಬಾಯಿ ಸಿಹಿ ಮಾಡಿಕೊಂಡರೆ, ಆಗ ತಮ್ಮ ದೇಶ, ತಮ್ಮ ಹಕರು ಇವರಿಗೆ ಒಮ್ಮೆಯೂ ನೆನಪಾಗಲಿಲ್ಲವೇ? ದೇಶದ್ರೋಹದ ಕೆಲಸ ದಿದ್ದರೂ ಮಲಬಾರ್ ಗೋಲ್ಡ್ ಎಂಥ ನಿರ್ಲಜ್ಜ ಸ್ಪಷ್ಟೀಕರಣವನ್ನು ್ಟಿತೆಂದರೆ 'ತಮಗೆ ನಮ್ಮ ದೇಶದ ಮೇಲೆ ಅಪಾರ ಗೌರವ ಇದ್ದು, ಲ್ಫ ದೇಶಗಳಲ್ಲಿ ನಮ್ಮ ಮಳಿಗೆಗಳಿವೆ. ಅಲ್ಲಿನ ಗ್ರಾಹಕರನ್ನು ನದಲ್ಲಿರಿಸಿಕೊಂಡು ಆಯಾ ರಾಷ್ಟ್ರಗಳ ಹಬ್ಬಗಳನ್ನು ಆಚರಿಸುವ ್ರದಾಯವನ್ನು ನಾವು ಹೊಂದಿದ್ದೇವೆ!' ಗಲ್ಫ್ ದೇಶಗಳಲ್ಲಿ ಮಲಬಾರ್ ಗೋಲ್ಡ್ ಜನಪ್ರಿಯ ಮಳಿಗೆಯಾಗಿರಬಹುದು. ಆದರೆ ಆ ರಾಷ್ಟ್ರಗಳಲ್ಲೂ ಭಾರತೀಯ ಗ್ರಾಹಕರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ: ಅದೇಕೆ ನೆನಪಾಗಲಿಲ್ಲ? ಮಲಬಾರ್ ಗೋಲ್ಡ್ ಕಂಪನಿಗೆ ಪಾಕಿಸ್ತಾನಿ ಗ್ರಾಹಕರನ್ನು ಓಲೈಸಬೇಕು ಅಂತಿದ್ದರೆ ನಮ್ಮ ಬೆಂಗಳೂರು, ಮಂಗಳೂರು, ಮೈಸೂರುಗಳ ಮಳಿಗೆಗಳನ್ನು ಮುಚ್ಚಿ ಪೇಶಾವರದಲ್ಲೋ, ಅಬೋಟಾಬಾದಿನಲ್ಲೋ ತೆರೆಯಬಾರದೇಕೆ?" ಎಂದು ಬರೆದಿದ್ದಾರೆ.

ಮುಂದುವರೆದು "ಕೆಲವು ಕೊಲ್ಲಿ ದೇಶಗಳ ಕಂಪನಿಗಳು ಭಯೋತ್ಪಾದಕರಿಗೆ ಇಂತಿಷ್ಟು ದೇಣಿಗೆಯನ್ನು ನೀಡುತ್ತವೆ ಎಂಬುದು ಇಂದು ಗುಟ್ಟಾಗಿ ಉಳಿದಿಲ್ಲ. ಪಾಕಿಸ್ತಾನ ಪ್ರಿಯ ಈ ಕಂಪನಿಯೂ ಆ ಪಟ್ಟಿಯಲ್ಲಿದೆಯೋ ಎಂದು ಸಂಶಯಬಾರದೇ? ಪಾಕಿಸ್ತಾನಕ್ಕಾಗಿ ಕೇಕ್ ಕತ್ತರಿಸಿದವರು ಪ್ರತ್ಯೇಕತಾವಾದಿಗಳಿಗೆ ಬೆಂಬಲ ಕೊಡಲಾರರೇ? ಫಿನಿಶಿಂಗ್ ಚೆನ್ನಾಗಿರುತ್ತದೆ, ಮೋಹನ್ ಲಾಲ್ ಅಂಬಾಸಿಡರ್ ಆಗಿದ್ದಾನೆ ಎಂದು ಮಲಬಾರ್ ಗೋಲ್ಡ್‌ನಲ್ಲಿ ವಜ್ರ, ಚಿನ್ನ ಖರೀದಿಗೆ ಹೋಗುವವರೊಮ್ಮೆ ಯೋಚಿಸಿ. ನೀವು ಕೊಳ್ಳುವ ಒಂದು ನೆಕ್ಲೇಸ್‌ನ ಲಾಭ ಭಯೋತ್ಪಾದಕರ ಕೋವಿಗೆ ಹೋಗಬಹುದು. ಆ ಕೋವಿ ನಮ್ಮ ದೇಶ ಕಾಯುವವನ ಎದೆಯನ್ನು ಸೀಳಬಹುದು. ನೀವು ನಿಂತ ನೆಲವನ್ನೇ ಅದು ಕಿತ್ತುಕೊಳ್ಳಬಹುದು. ಮಲಬಾರ್ ಗೋಲ್ಡ್‌ನಲ್ಲಿ ನೀವು ಮಾಡುವ ಖರೀದಿಯಿಂದ ಚಿನ್ನ ವೃದ್ಧಿಯಾಗುವುದಿಲ್ಲ, ಭಯೋತ್ಪಾದನೆ ಹೆಚ್ಚಳವಾಗುತ್ತದೆ ಎಂಬುದನ್ನು ನೆನಪಿಡಿ!" ಎಂದೂ ಪ್ರತಾಪ್ ಸಿಂಹ ಎಚ್ಚರಿಸಿದ್ದ.

ಪ್ರತಾಪ ಸಿಂಹ ಎಷ್ಟೊಂದು ಬೇಜವಾಬ್ದಾರಿತನದಿಂದ ಲೇಖನವನ್ನು ಬರೆದಿದ್ದಾರೆ ಎಂದರೆ, ಮಲಬಾರ್ ಗೋಲ್ಡ್ ಮತ್ತು ಡೈಮಂಡ್ ಸಂಸ್ಥೆಯವರು ಪಾಕಿಸ್ತಾನ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿಕೊಂಡರು ಎಂದು ಫೇಸ್‌ಬುಕ್‌ಗಳಲ್ಲಿ ಮತ್ತು ವಾಟ್ಸಪ್‌ಗಳಲ್ಲಿ ಹರಿದಾಡಿದಂತಹ ಸುದ್ದಿಯ ಹಿನ್ನೆಲೆಯಲ್ಲಿ ದುಬೈ ಪೊಲೀಸರು ತ್ರಿಶೂರ್ ಮೂಲದ ದಿನೇಶ್ ಎಂಬ ವ್ಯಕ್ತಿಯನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ಈತ ಈ ಹಿಂದೆ ಇದೇ ಸಂಸ್ಥೆಯಲ್ಲಿ ಕೆಲಸದಲ್ಲಿ ಇದ್ದ ವ್ಯಕ್ತಿ, ಇತ್ತೀಚೆಗೆ ಆತ ಶಾರ್ಜಾದ ಫ್ರೀ ಜೋನ್‌ನಲ್ಲಿ ಇರುವ ಮೆರಾಯಿನ್ ಕಂಪನಿಯ ಉದ್ಯೋಗಿಯಾಗಿದ್ದಾರೆ. ಮಲಬಾರ್ ಗೋಲ್ಡ್ ಮತ್ತು ಡೈಮಂಡ್ ಸಂಸ್ಥೆಯ ವಿರುದ್ಧ ವ್ಯವಸ್ಥಿತವಾದ ಅಪಪ್ರಚಾರಗಳು ನಡೆಯುತ್ತಿದ್ದು, ಅವರ ವಹಿವಾಟನ್ನು ತಗ್ಗಿಸುವ ಉದ್ದೇಶದಿಂದ ಇಂತಹ ಚಟುವಟಿಕೆಗಳು ನಡೆಯುತ್ತಿದೆ.

ವಾಸ್ತವವಾಗಿ ಈ ಕಾರ್ಯಕ್ರಮ ಭಾರತದಲ್ಲಿ ನಡೆದದ್ದೇ ಅಲ್ಲ. ಯು.ಎ.ಇ.ಯಲ್ಲಿ ನಡೆದ ಕಾರ್ಯಕ್ರಮ. ಅದು ಕೂಡ ಪಾಕಿಸ್ತಾನ ಸ್ವಾತಂತ್ರ್ಯ ದಿನಾಚರಣೆಯ ಆಚರಣೆ ಆಗಿರಲಿಲ್ಲ, ಪಾಕಿಸ್ತಾನ ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟಂತೆ ಡಿಜಿಟಲ್ ಮಾರ್ಕೆಟಿಂಗ್ ಸಂಸ್ಥೆಯವರು ನಡೆಸಿದ ಒಂದು ಕ್ವಿಜ್ ಕಾರ್ಯಕ್ರಮ ಅದಾಗಿತ್ತು, ಯು.ಎ.ಇ.ಯಲ್ಲಿ ಸುಮಾರು 200 ರಾಷ್ಟ್ರಗಳ ಜನರು ವಾಸಿಸುತ್ತಿದ್ದು ಎಲ್ಲಾ ಸಂಸ್ಥೆಗಳು ಗ್ರಾಹಕರನ್ನು ಆಕರ್ಷಿಸುವ ಉದ್ದೇಶದಿಂದ ಇಂತಹ ಕಾರ್ಯಕ್ರಮಗಳನ್ನು ನಡೆಸುತ್ತಲೇ ಇರುತ್ತವೆ. ಒಂದೊಂದು ದೇಶದ ಕಾರ್ಯಕ್ರಮಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಆಯಾ ದೇಶದವರನ್ನು ಆಹ್ವಾನಿಸಿ ಇಟ್ಟುಕೊಳ್ಳುತ್ತಾರೆ. ಅದರಂತೆ ಇಲ್ಲಿಯೂ ಈ ಕಾರ್ಯಕ್ರಮ ನಡೆದಿತ್ತು.


ಆದರೆ ಪಾಕಿಸ್ತಾನ ಸ್ವಾತಂತ್ರ್ಯ ದಿನಾಚರಣೆಯನ್ನು ಅವರು ಆಚರಿಸಿರಲಿಲ್ಲ. ಬೇರೆಲ್ಲೋ ಯಾವುದೋ ಸಂಸ್ಥೆಯವರು ಆಚರಿಸಿದ ಕಾರ್ಯಕ್ರಮದ ಫೋಟೋಗಳನ್ನು ದಿನೇಶ್ ತನ್ನ ಹಗೆತನವನ್ನು ತೀರಿಸಿಕೊಳ್ಳಲು ಸಾಮಾಜಿಕ ತಾಣದಲ್ಲಿ ಅಪ್‌ಲೋಡ್ ಮಾಡಿದ್ದ. ಈ ಬಗ್ಗೆ ಭಾರತವೂ ಸೇರಿದಂತೆ ಹಲವು ಭಾಗಗಳಿಂದ ಪ್ರತಿಕ್ರಿಯೆಗಳು ಬಂದಾಗ, ಮಲಬಾರ್ ಗೋಲ್ಡ್‌ನವರು ಅಲ್ಲಿಯ ಪೊಲೀಸರಿಗೆ ದೂರು ನೀಡಿದ್ದರು. ಆ ಪೊಲೀಸರು ತನಿಖೆಯನ್ನು ನಡೆಸಿ, ಇದರ ಮೂಲವನ್ನು ಬೇಧಿಸಿ, ದಿನೇಶ್‌ನನ್ನು ವಶಕ್ಕೆ ತೆಗೆದುಕೊಂಡಿದ್ದಾರೆ.

ಸಂಸದನಂತಹ ಜವಾಬ್ದಾರಿಯುತ ಸ್ಥಾನದಲ್ಲಿರುವ ಪ್ರತಾಪ ಸಿಂಹ ಇಂತಹ ಬೇಜವಾಬ್ದಾರಿ ಲೇಖನಗಳನ್ನು ಬರೆಯುತ್ತಾನೆಂದರೆ ಏನರ್ಥ? ಆತನ ಕೋಮು ಬುದ್ಧಿಯನ್ನು ಸರಿಮಾಡುವವರು ಯಾರು? ಆತ ಇಂತಹ ಕೋಮು ವಿಷವನ್ನು ಎಲ್ಲರಿಗೂ ಅಂಟಿಸುವ ಮುನ್ನ ಮೈಸೂರು ಮತ್ತು ಕೊಡಗಿನ ಮತದಾರರು ಎಚ್ಚೆತ್ತುಕೊಳ್ಳುವುದು ಅತ್ಯಗತ್ಯ.

■ ಬಿ.ಎನ್. ಮನುಶೆಣೈ

ಹಿಂದು ಹುಡುಗನನ್ನೇ ಕೊಂದ ಕೌಬ್ರಿಗೇಡ್ ಕ್ರೌರ್ಯಕಾಂಡ!







ಹಸಿಬಿಸಿ ಬುದ್ಧಿಯ ಹುಂಬ ಹುಡುಗರ ಭಾವೋನ್ಮಾದ ಬಂಡವಾಳ ಮಾಡಿಕೊಂಡು ಕೌಬ್ರಿಗೇಡ್ ಕಟ್ಟುತ್ತಿರುವ ಜಗದೀಶ ಕಾರಂತನ ಹಿಡನ್ ಉದ್ದೇಶವೇ ಶೂದ್ರರನ್ನು ನಿಧಾನವಾಗಿ ನಿರ್ನಾಮ ಮಾಡೋದು. ದುರಂತವೆಂದರೆ, ಜಗದೀಶ್ ಕಾರಂತ, ಕಲ್ಲಡ್ಕ ಭಟ್ಟರಂಥ ಮನುಷ್ಯ ವಿರೋಧಿ ಪಾಪಿಗಳ ಪ್ರಚೋದಕ ಮಾತಿನ ಮರ್ಮ ಶೂದ್ರ ಹುಡುಗರಿಗೆ ಅರ್ಥವೇ ಆಗದೇ ಬಲಿ ಬೀಳುತ್ತಿದ್ದಾರೆ. ದಕ್ಷಿಣ ಕರಾವಳಿಯಲ್ಲಿ ಶೂದ್ರ ವರ್ಗದ ಬಿಲ್ಲವರೇ ಬಹು ಸಂಖ್ಯಾತರು. ಈ ಜಾತಿಯ ಯುವಕ-ಯುವತಿಯರನ್ನು ಸಂಘಿ ಸೈತಾನರು ಯೋಜನಾಬದ್ಧವಾಗಿ ಹಾದಿ ತಪ್ಪಿಸುತ್ತಿದ್ದಾರೆ. ಹರಾಮಿ ಹಿಂದೂ ಹರಿಕಾರರ ಧರ್ಮೋನ್ಮಾದದ ಮಾತುಗಾರಿಕೆಗೆ ಈ ಬಿಲ್ಲವ ಯುವಕರು ಅದ್ಯಾವ ಪರಿ ಮರುಳಾಗುತ್ತಿದ್ದಾರೆಂದರೆ ಬಿಜೆಪಿ-ಭಜರಂಗಿ-ಹಿಂಜಾವೇ- ಆರ್‌ಎಸ್‌ಎಸ್‌ನ ಬೆನ್ನುಬೆನ್ನಿಗೆ ಹೆಜ್ಜೆ ಹಾಕುತ್ತಿದ್ದಾರೆ. ಈ ಧರ್ಮಾಂಧತೆ ಅಮಲಿನಲ್ಲಿ ಬ್ರೈನ್ ವಾಶ್ ಆಗಿರುವ ಬಿಲ್ಲವ ಹುಡುಗರೇ ಸಂಘಿ ಸಂಚುಕೋರರ 'ಜನಿವಾರ ಯುದ್ಧ'ದ ಕಾಲಾಳುಗಳಾಗಿದ್ದಾರೆ. ಬಿಜೆಪಿ-ಭಜರಂಗಿ-ಆರ್‌ಎಸ್‌ಎಸ್ ಪ್ರಣೀತ ಅನೇಕಾನೇಕ ಪಾತಕದಲ್ಲಿ ಸಿಕ್ಕಿಬಿದ್ದವರು ಅಥವಾ ಪ್ರಾಣ ತೆತ್ತವರು ಇದೇ ಬಿಲ್ಲವ ಸಮುದಾಯದ ಹುಡುಗರು. ಇದು ಕರಾವಳಿ ಕೋಮುಕಲಹದ ಇತಿಹಾಸದ ಪ್ರತಿ ಪುಟದಲ್ಲೂ ದಾಖಲಾಗಿರುವ ವಾಸ್ತವ!

ಅವಿಭಜಿತದ ದಕ್ಷಿಣ ಕನ್ನಡ ಸಂಘ ಪರಿವಾರದ ಪಿಶಾಚಿಗಳ ಗೋ-ಗಲಾಟೆಗೆ ಕಂಗಾಲಾಗಿ ಹೋಗಿದೆ! ಗೋ ರಕ್ಷಣೆಯ ಹುಸಿ ನೆಪದಲ್ಲಿ ಕರಾವಳಿಯ ದಶದಿಕ್ಕಿನಲ್ಲಿ ಹಾವಳಿ ಎಬ್ಬಿಸುತ್ತಿರುವ ಗೋ ಗುದುಮುರಿಗೆ ಪಡೆಯ ಪುಂಡರಿಗೆ ಜಾನುವಾರು ಸಾಗಾಟಗಾರರ ಅಡ್ಡ ಹಾಕುವುದೇ ದೊಡ್ಡ ಲಾಭದಾಯಕ ದರೋಡೆ ದಂಧೆಯಂತಾಗಿದೆ. ಹಫ್ತಾ ಕೊಡದ ಜಾನುವಾರು ಸಾಗಾಟಗಾರರ ರುಂಡ ಚೆಂಡಾಡುವ ಸ್ವಯಂಘೋಷಿತ ಗೋ ರಕ್ಷಕರು ಈಗ ಹಿಂದೂಗಳನ್ನೂ ಕೊಂದು ತಿನ್ನುವ ಭೀಭತ್ಸ ಮಟ್ಟ ಮುಟ್ಟಿದ್ದಾರೆ. ಧರ್ಮಕಾರಣ ಮುಂದಿಟ್ಟುಕೊಂಡು ಶೂದ್ರರನ್ನು ಶೂದ್ರರಿಂದಲೇ ಸಾಯಿಸಿ ಜನಿವಾರ ಸಾಮ್ರಾಜ್ಯ ಸ್ಥಾಪಿಸುವ ಸಂಘಿ ಸಂಚು ಕರಾವಳಿಯಲ್ಲಿ ಅಲ್ಲೋಲಕಲ್ಲೋಲವನ್ನೇ ಸೃಷ್ಟಿಸಿಬಿಟ್ಟಿದೆ!!

ಗೋ ದಂಧೆದಾರರು

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಹಳ್ಳಿ-ಹಳ್ಳಿಗಳಲ್ಲಿ ಕೌಬ್ರಿಗೇಡ್ ಕಟ್ಟುವ ಕರಾಮತ್ತೊಂದು ತುಂಬ ವ್ಯವಸ್ಥಿತವಾಗಿ ನಡೆಯುತ್ತಿದೆ. ಸಂಘ ಪರಿವಾರದ ಹಿಂದೂ ಜಾಗರಣಾ ವೇದಿಕೆ ಈ ಕೌಬ್ರಿಗೇಡನ್ನು ಮುತುವರ್ಜಿಯಿಂದ ಪೋಷಿಸುತ್ತಿದೆ. ಊರೂರಿಗೆ ಕಿಚ್ಚು ಹಚ್ಚುವ ಕುಕಲಾ ಪಾರಂಗತ ಜಗದೀಶ ಕಾರಂತನೆಂಬ ಬೆಂಕಿ ನವಾಬನೇ ಕೌಬ್ರಿಗ್ರೇಡ್‌ನ ಡಾನ್! 18 ರಿಂದ 25 ವರ್ಷದೊಳಗಿನ ಹಸಿಬಿಸಿ ಬುದ್ಧಿಯ ಹುಂಬ ಹುಡುಗರ ಭಾವೋನ್ಮಾದ ಬಂಡವಾಳ ಮಾಡಿಕೊಂಡು ಕೌಬ್ರಿಗೇಡ್ ಕಟ್ಟುತ್ತಿರುವ ಜಗದೀಶ ಕಾರಂತನ ಹಿಡನ್ ಉದ್ದೇಶವೇ ಶೂದ್ರರನ್ನು ನಿಧಾನವಾಗಿ ನಿರ್ನಾಮ ಮಾಡೋದು.

ದುರಂತವೆಂದರೆ, ಜಗದೀಶ್ ಕಾರಂತ, ಕಲ್ಲಡ್ಕ ಭಟ್ಟರಂಥ ಮನುಷ್ಯ ವಿರೋಧಿ ಪಾಪಿಗಳ ಪ್ರಚೋದಕ ಮಾತಿನ ಮರ್ಮ ಶೂದ್ರ ಹುಡುಗರಿಗೆ ಅರ್ಥವೇ ಆಗದೇ ಬಲಿ ಬೀಳುತ್ತಿದ್ದಾರೆ. ದಕ್ಷಿಣ ಕರಾವಳಿಯಲ್ಲಿ ಶೂದ್ರ ವರ್ಗದ ಬಿಲ್ಲವರೇ ಬಹುಸಂಖ್ಯಾತರು. ಈ ಜಾತಿಯ ಯುವಕ-ಯುವತಿಯರನ್ನು ಸಂಘಿ ಸೈತಾನರು ಯೋಜನಾಬದ್ಧವಾಗಿ ಹಾದಿ ತಪ್ಪಿಸುತ್ತಿದ್ದಾರೆ. ಹರಾಮಿ ಹಿಂದೂ ಹರಿಕಾರರ ಧರ್ಮೋನ್ಮಾದದ ಮಾತುಗಾರಿಕೆಗೆ ಈ ಬಿಲ್ಲವ ಯುವಕರು ಅದ್ಯಾವ ಪರಿ ಮರುಳಾಗುತ್ತಿದ್ದಾರೆಂದರೆ ಬಿಜೆಪಿ-ಭಜರಂಗಿ-ಹಿಂಜಾವೇ- ಆರ್‌ಎಸ್‌ಎಸ್‌ನ ಬೆನ್ನುಬೆನ್ನಿಗೆ ಹೆಜ್ಜೆ ಹಾಕುತ್ತಿದ್ದಾರೆ. ಈ ಧರ್ಮಾಂಧತೆ ಅಮಲಿನಲ್ಲಿ ಬ್ರೈನ್ ವಾಶ್ ಆಗಿರುವ ಬಿಲ್ಲವ ಹುಡುಗರೇ ಸಂಘಿ ಸಂಚುಕೋರರ 'ಜನಿವಾರ ಯುದ್ಧ'ದ ಕಾಲಾಳುಗಳಾಗಿದ್ದಾರೆ. ಬಿಜೆಪಿ-ಭಜರಂಗಿ-ಆರ್‌ಎಸ್‌ಎಸ್ ಪ್ರಣೀತ ಅನೇಕಾನೇಕ ಪಾತಕದಲ್ಲಿ ಸಿಕ್ಕಿಬಿದ್ದವರು ಅಥವಾ ಪ್ರಾಣ ತೆತ್ತವರು ಇದೇ ಬಿಲ್ಲವ ಸಮುದಾಯದ ಹುಡುಗರು. ಇದು ಕರಾವಳಿಯ ಕೋಮುಕಲಹದ ಇತಿಹಾಸದ ಪ್ರತಿ ಪುಟದಲ್ಲೂ ದಾಖಲಾಗಿರುವ ವಾಸ್ತವ!

ಹಿಂದುಳಿದವರೇ ಹವಿಸ್ಸು

ಕಳೆದ ಡಿಸೆಂಬರ್‌ನಿಂದ ನೋಡುನೋಡುತ್ತಿದ್ದಂತೆಯೇ ಮೂವರು ಪಾಪದ ಬಿಲ್ಲವ ಯುವಕರು ಹಿಂದೂತ್ವದ ಪಾಪಕರ್ಮಕ್ಕೆ ಆಹುತಿಯಾಗಿ ಹೋಗಿದ್ದಾರೆ. ಬಂಟ್ವಾಳದ ಹರೀಶ ಪೂಜಾರಿ, ಮೂಡಬಿದರೆಯ ಪ್ರಶಾಂತ್ ಪೂಜಾರಿ, ಮೊನ್ನೆಮೊನ್ನೆ ಕೌಬ್ರಿಗೇಡ್‌ನಿಂದ ಹತನಾದ ಕೊಕ್ಕರ್ಣೆ (ಬ್ರಹ್ಮಾವರ)ಯ ಪ್ರವೀಣ ಪೂಜಾರಿ ಹಿಂದುಳಿದ ವರ್ಗದ ಬಿಲ್ಲವ ಜಾತಿಯ ಬಾಳಿ ಬದುಕಬೇಕಾಗಿದ್ದ ಎಳೇಪ್ರಾಯದ ತರುಣರು. ಕುಟುಂಬಕ್ಕೆ ಆಧಾರವಾಗಿದ್ದ ಹುಡುಗರು. ಸಂಘಿಗಳ ಓಟ್‌ಬ್ಯಾಂಕ್ ರಾಜಕಾರಣದ ತೆವಲಿಗೆ ಜೀವತೆತ್ತ ಹಿಂದುಳಿದ ವರ್ಗದ ಹುಡುಗರ ದುರಂತ ಕತೆ ಒಂದು ರೀತಿಯಾದರೆ, ಧರ್ಮಾಂಧತೆಯ ಕುಮ್ಮಕ್ಕಿನಿಂದ ಕೋಮುಗಲಭೆ, ಕೊಲೆ, ಸುಲಿಗೆಗೆ ಹೋಗಿ ಜೈಲು ಪಾಲಾದ, ಕ್ರಿಮಿನಲ್ ಕೇಸು ತಲೆ ಮೇಲೆ ಎಳೆದುಕೊಂಡು ಕೋರ್ಟು-ಕಚೇರಿ ಅಲೆಯುತ್ತ ಬದುಕು ಬರ್ಬಾದ್ ಮಾಡಿಕೊಂಡ ಶೂದ್ರ ಪೋರರ ಹಿಂದೂತ್ವ 'ಬಲಿದಾನ' ಪುರಾಣದ ಕರುಣಾಜನಕತೆ ಮತ್ತೊಂದು ತೆರನಾದದ್ದು!

ಹುಸಿ ಹಿಂದೂತ್ವದ ಭಾವೋನ್ಮಾದದ ಸಂಘರ್ಷಕ್ಕೆ ಶೂದ್ರ ಸಮುದಾಯದ ಯುವಕರನ್ನು ಜನಿವಾರಿಗಳು ದಬ್ಬುತ್ತಾರೆಯೇ ಹೊರತು ತಾವೆಂದಿಗೂ ಮುಂದೆ ನಿಲ್ಲುವುದೇ ಇಲ್ಲ! ಈ ಕಟುವಾಸ್ತವ ಈಗೀಗ ಶೂದ್ರ ಹಿರಿಯರಿಗೆ ಬಾಧಿಸತೊಡಗಿದೆ; ಯಾಕೆ ತಮ್ಮ ಕುಲದ ಅಮಾಯಕ ಹುಡುಗರಷ್ಟೇ ಹಿಂದೂತ್ವದ ಹೋಮಕ್ಕೆ ಹವಿಸ್ಸಾಗುತ್ತಿದ್ದಾರೆಂಬ ಆತಂಕ ಬಿಲ್ಲವ ಮುಂದಾಳುಗಳನ್ನು ಮತ್ತು ಎಳೆಯ ಪ್ರಾಯದ ಎಡವಟ್ಟು ಹುಡುಗರ ತಾಯ್ತಂದೆಯರನ್ನೂ ಚಿಂತೆಗೀಡುಮಾಡುತ್ತಿದೆ. ಕಳೆದ ವಾರ ಕೌಬ್ರಿಗೇಡ್ ಪಾತಕಿಗಳಿಂದ ಬರ್ಬರವಾಗಿ ಹತ್ಯೆಯಾದ ಬ್ರಹ್ಮಾವರದ 'ಪ್ರವೀಣ ಪೂಜಾರಿಯ ಬಲಿ' ಬಿಲ್ಲವರಲ್ಲಿ ತಲ್ಲಣ ಮೂಡಿಸಿದೆ; ಬಿಜೆಪಿ-ಭಜರಂಗಿ ಸಂಘಿ ಸೈತಾನರ ಕೋಮು ರಾಜಕಾರಣದ ಒಳಉದ್ದೇಶಗಳು ಈಗ ತಂತಾನೆ ಬಿಚ್ಚಿಕೊಳ್ಳಲಾರಂಭಿಸಿದೆ.

ಬಿಜೆಪಿ ಬಾಯ್ ಬಲಿ

ಕೌಬ್ರಿಗೇಡ್‌ನ ಮೂಲ ಪುರುಷರು ಹದಿಹರೆಯದ ನಿರುದ್ಯೋಗಿ ಹುಡುಗರಿಗೆ ರೋಡ್ ರಾಬರಿಯಿಂದ ಹಣ ಮಾಡುವ ಮತ್ತು ರಾಜಕೀಯ ಸ್ಥಾನಮಾನದ ಗ್ರಾಮ ಪಂಚಾಯ್ತಿ-ಜಿಲ್ಲಾ ಪಂಚಾಯ್ತಿ ಸದಸ್ಯ-ಅಧ್ಯಕ್ಷ-ಉಪಾಧ್ಯಕ್ಷತೆಯ ಆಸೆ-ಆಮಿಷ-ಆಕರ್ಷಣೆ ತೋರಿಸಿ ಅಡ್ಡದಾರಿಗೆ ಇಳಿಸುತ್ತಿದ್ದಾರೆ. ಕೌಬ್ರಿಗೇಡ್‌ಗೆ ಗೋ ಸಾಗಾಟಗಾರರ ಹಣ-ಚಿನ್ನ-ವಾಚು, ವಾಹನದ ಬೆಲೆಬಾಳುವ ಬಿಡಿಭಾಗಗಳ ದರೋಡೆಯೇ ಕಸುಬಾಗಿದೆ. ಈ ಕೌಬ್ರಿಗೇಡ್‌ಗೆ ಯಾವ ಧರ್ಮ-ನಿಯತ್ತು-ನಿಷ್ಠೆ ಎಂಬುದೇ ಇಲ್ಲ. ಇವರ



ಡಾನ್‌ಗಳಾದ ಜಗದೀಶ್ ಕಾರಂತ-ಕಲ್ಲಡ್ಕ ಭಟ್ಟನಂ... ದಗಲುಬಾಜಿಗಳಿಗೇ ಬದ್ಧತೆ ಎಂಬುದು ಇಲ್ಲದಿರುವಾ... ಅವರ ಶಿಷ್ಯರಿಗೆ ಅದೆಲ್ಲಿಂದ ಬಂದೀತು? ಈ ಕೌಬ್ರಿಗೇಡ... ದನ ಸಾಗಿಸುವ ಮುಸ್ಲಿಂ-ಕ್ರಿಶ್ಚಿಯನ್-ಹಿಂದೂಗಳ ಜ... ಹಫ್ತಾ ಫಿಕ್ಸ್ ಮಾಡಿಕೊಳ್ಳುತ್ತಾರೆ. ಯಾರು ಹಫ್ತಾ... ಕೊಡುತ್ತಾರೋ ಅವರಿಗೊಂದು ಗೋ ಸಾಗಾಣೆಯ... 'ಪರ್ಮಿಟ್' ಕೊಡುತ್ತಾರೆ. ಪರ್ಮಿಟ್ ಇಲ್ಲದವ... ಬಡಿಯುತ್ತಾರೆ, ಸುಲಿಯುತ್ತಾರೆ ನಂತರ ಕೊಂದೇ ಹಾಕುತ್ತಾ...

ಕೊಕ್ಕರ್ಣೆಯಲ್ಲಿ ನಡೆದ ಪ್ರವೀಣ ಪೂಜಾರಿ ಶ್ರದ್ಧಾಂಜ... ಸಮಾವೇಶದಲ್ಲಿ ದೊಡ್ಡ ಸಂಖ್ಯೆಯಲ್ಲಿ ಶೂದ್ರ ಸಮುದಾಯ... ಸೇರಿತ್ತು. ಇದೊಂದರ್ಥದಲ್ಲಿ ಹಿಂದುಳಿದ ವರ್ಗ... ಹುಡುಗರನ್ನು ಬಾವಿಗೆ ದೂಡಿ ಆಳ ನೋಡುವ ಸಂ... ಪರಿವಾರದ ಸಂಚುಕೋರರ ವಿರುದ್ಧದ ಪ್ರತಿಭಟನೆಯ... ಆಗಿತ್ತು. ಈಗ ಕರಾವಳಿಯ ಬಿಲ್ಲವರ ಮುಖಂಡರು ಸ್ವ... ಸಮುದಾಯದ ಹುಡುಗರನ್ನು ಹಿಂದೂತ್ವದ ವಿಷವ್ಯೂಹದಿಂದ ಹೊರತರುವ ಬಗ್ಗೆ ಚಿಂತೆಗೀಡಾಗಿದ್ದಾ...

ಮೊನ್ನೆ 17.08.2016ರಂದು ಕೊಕ್ಕರ್ಣೆಯ... ಬಿಜೆಪಿಯ ನಿಷ್ಠಾವಂತ ಕಾರ್ಯಕರ್ತ ಪ್ರವೀಣ... ಪೂಜಾರಿಯನ್ನು ಕೌಬ್ರಿಗೇಡ್ ಹೊಡೆದು ಹೊಡೆದೇ ಕಗ್ಗೊ... ಮಾಡಿದ್ದೂ ಹಫ್ತಾ ಸಿಗಲಿಲ್ಲ ಎಂಬ ಕಾರಣಕ್ಕೆ. ಅಂದು ರಾತ್ರಿ 9.30ರ ಸುಮಾರಿಗೆ ನಾಲ್ಕು ಜಾನುವಾರುಗಳನ್ನು ತನ್ನ ಮೂರು ಚಕ್ರದ ಗೂಡ್ಸ್ ರಿಕ್ಷಾದಲ್ಲಿ ತುಂಬಿಕೊಂಡು ಮುದ್ದೂರಿಂದ ತೀರ್ಥಹಳ್ಳಿಯ ಮೇಗರವಳ್ಳಿಗೆ ಹೊರಟಿದ್ದ... ಆತನ ಮೇಲೆ ಕಣ್ಣಿಟ್ಟಿದ್ದ ಕಳ್ತೂರು-ಸಂತೆಕಟ್ಟೆಯಲ್ಲಿ 'ಲೀಸ್' ಪೆಟ್ರೋಲ್ ಬಂಕ್ ನಡೆಸುತ್ತಿದ್ದ ಕೊಕ್ಕರ್ಣೆ ಹಿಂದೂ ಜಾಗರಣಾ ವೇದಿಕೆ ಸಂಸ್ಥಾಪಕ ಅರವಿಂದ ಗಾಣಿಗ ತ... ರೌಡಿ ಪಡೆಯನ್ನು ಛೂಬಿಟ್ಟಿದ್ದಾನೆ. ಪ್ರವೀಣ ಮುಖ್ಯರಸ್ತೆಯ... ನಾಲ್ಕೂರು ಕಜ್ಕೆ ಎಂಬಲ್ಲಿಗೆ ಬಂದಾಗ ಆತನ ರಿಕ್ಷಾವನ್ನು 25-30 ಗೂಂಡಾಗಳು ಅಡ್ಡಗಟ್ಟಿದರು.

ಪ್ರವೀಣ ಪೂಜಾರಿ, ಜತೆಗಿದ್ದ ಅಕ್ಷಯ ದೇವಾಡಿ... ಮತ್ತು ಜಾನುವಾರು ಕೊಂಡಿದ್ದ ರಮೇಶ್‌ರನ್ನು ಹೊರಗೆಳೆದು ಹಲ್ಲೆ ಮಾಡಿದ್ದಾರೆ. ಈ ಕೊಲೆಗಡುಕರ ಟಾರ್ಗೆಟ್ ಪ್ರವೀಣ... ಆಗಿತ್ತು. ಹಾಗಾಗಿ ಅಕ್ಷಯ್‌ಗೆ ಹೆಚ್ಚು ಹೊಡೆಯಲಿಲ್ಲ... ರಮೇಶ್‌ಗೆ ಓಡಿಹೋಗಲು ಅವಕಾಶ ಮಾಡಿದ್ದಾರೆ. ಎಲ್ಲರೂ ಸೇರಿ ಹಾಕಿ ಬ್ಯಾಟಿನಂಥ ಕಬ್ಬಿಣದ ಆಯುಧ, ಕಟ್ಟಿಗೆಯ... ರೀಪು ಮತ್ತು ಕಬ್ಬಿಣದ ರಾಡ್‌ನಿಂದ ಪ್ರವೀಣನ ಬೆನ್ನು... ಹೊಟ್ಟೆಗೆ ಒಂದಿಂಚು ಜಾಗವೂ ಬಿಡದೆ ಥಳಿಸಿದ್ದಾರೆ... ಆತನ ಹೃದಯ ಮತ್ತು ಕಿಡ್ನಿಗೆ ಮಾರಣಾಂತಿಕ ಏಟು... ಬೀಳುವಂತೆ ಯೋಜನಾಬದ್ಧವಾಗಿ ಹೆಣೆದಿದ್ದಾರೆ.

ಆತ ಹೈರಾಣಾಗಿದ್ದಾನೆ. "ನಾನು ಬಿಜೆಪಿ ಕಾರ್ಯಕರ್ತ... ಕಳೆದೆಲ್ಲಾ ಎಲೆಕ್ಷನ್‌ನಲ್ಲಿ ಬಿಜೆಪಿ ಪರ ನಿಷ್ಠೆಯಿಂದ ಕೆಲ... ಮಾಡಿದ್ದೇನೆ... ಪ್ಲೀಸ್ ನನ್ನ ಬಿಟ್ಟುಬಿಡಿ..." ಎಂದು ಈ... ಬಿಜೆಪಿಯ ಸ್ಥಳೀಯ ಗ್ರಾಮೀಣ ಘಟಕದ ಅಧ್ಯಕ್ಷ ಸಂಘ... ಪರಿವಾರದ ಹಿಂದೂ ಹುಡುಗರಲ್ಲಿ ಜೀವಭಿಕ್ಷೆ ಬೇಡಿದ್ದಾನೆ... ಹೊಡೆದು ಜೀವ ತೆಗೆದವರೆಲ್ಲರೂ ಪ್ರವೀಣನ... ಪರಿಚಯದವರೇ. ಆದರೆ ದನ ಸಾಗಾಟದ ಹಫ್ತಾ ಆತ... ಕೊಟ್ಟು ತಮ್ಮ ಹಿಂದೂ ಜಾಗರಣಾ ವೇದಿಕೆಯ ಅನುಮತಿ... ಪಡೆದುಕೊಳ್ಳದೇ ಧಿಕ್ಕರಿಸಿದ್ದನೆಂಬ ಸಿಟ್ಟು ಈ ಗ್ಯಾಂಗಿಗಿತ್ತು...

ಪ್ರವೀಣನ ಮೇಲೆ ಈ ಕೌಬ್ರಿಗೇಡ್ ರಾಕ್ಷಸರಿಗೆ ಅದೆಷ್ಟು... ದ್ವೇಷವಿತ್ತೆಂದರೆ ಆತ ಸಾಯುವ ಹಂತದಲ್ಲಿ ಕುಡಿಯಲು ನೀರು ಕೊಡಿ ಎಂದು ಅಂಗಲಾಚಿದರೂ ಕೊಡಲಿಲ್ಲ... "ನಿನಗಿದೋ ಕೊನೆಯ ನೀರು" ಎಂಬು ಬೀಳುತ್ತಿದ್ದ... ಮಳೆ ನೀರನ್ನೇ ಕುಡಿವಂತೆ ಹಿಂದೂ ಜಾಗರಣಾ ವೇದಿಕೆಯ... ಪಿಶಾಚಿಗಳು ಪ್ರವೀಣನನ್ನು ಅಣಕಿಸಿ-ಸತಾಯಿಸಿ ಕೊಂದು... ಕೇಕೆ ಹಾಕಿದ್ದಾರೆ. ಪ್ರವೀಣ ಸತ್ತುಹೋಗಿದ್ದು ಖಾತ್ರಿಯಾದಾಗ... ಹೆಣವನ್ನು ಆತನದೇ ರಿಕ್ಷಾದಲ್ಲಿ ದನಗಳ ಕಾಲುಬುಡದಲ್ಲಿ... ಹಾಕಿಕೊಂಡು ಕೆಂಜೂರು ಕಡೆ ಹೊರಟರು. ರೌಡಿಗಳು... ಆ ರಿಕ್ಷಾದ ಹಿಂದೆ ಬೈಕ್-ಕಾರುಗಳಲ್ಲಿ ಮೆರವಣಿಗೆ...

ರು. ಹೆಣವನ್ನು ಕೆಂಜೂರಿನ
ಂದರ ಬಳಿ ಎಸೆದು ಹೋಗಿದ್ದಾರೆ.

...ನಾರ ಅರವಿಂದ ಗಾಣಿಗ

...ವೀಣನನ್ನು ಕರಾರುವಾಕ್ಕಾದ
...ರ ಹಾಕಿಯೇ ಕೊಲೆ ಮಾಡಿಸಿದ
...ದ ಗಾಣಿಗ ಪ್ರತಿಕ್ಷಣವೂ
...ಡ್‌ಗೆ ಫೋನಲ್ಲಿ ನಿರ್ದೇಶನ
...ಲೇ ಇದ್ದ. ಆಗಾತ ಕುಂದಾಪುರದ
... ಶಯ್ಯಾಗೃಹದಲ್ಲಿದ್ದ ಪ್ರವೀಣ ಸತ್ತು
...ನ್ನು ಪಕ್ಕಾ ಆದಾಕ್ಷಣ ಕೌಬ್ರಿಗೇಡ್
... ಬಾಸ್ ಅರವಿಂದನಿಗೆ "ಮರ್ಡರ್
...ಸ್ ಸಕ್ಸಸ್" ಎಂದು ಹೇಳಿದ್ದಾರೆ.
...ಹೆಣವನ್ನು ಆದಷ್ಟು ಬ್ರಹ್ಮಾವರ
... ಲಿಮಿಟ್‌ನಲ್ಲಿ ತಂದುಹಾಕುವಂತೆ
... ಹೆಬ್ರಿ ಪೊಲೀಸ್ ಸ್ಟೇಷನ್‌ನಲ್ಲಿ
...ಲ್ಲೇ ಈತ ಗೋ ಗಲಾಟೆ ಮಾಡಿ
ಪೊಲೀಸರ ವಿರೋಧ ಕಟ್ಟಿಕೊಂಡಿದ್ದ. ಬ್ರಹ್ಮಾವರ
...ಲ್ಲಿ ತನ್ನ ಮಾತು ಕೇಳುವ ಪೊಲೀಸರಿದ್ದಾರೆಂದು
... ದನ ಸಾಗಾಟಗಾರನೊಬ್ಬನನ್ನು ಹಿಡಿದಿದ್ದೇವೆಂದು
...ರ ಪೊಲೀಸರಿಗೆ ಫೋನಾಯಿಸಲು ಹಿಂಜಾವೇಯ
...ಂಗಡಿಗರಿಗೆ ಆದೇಶ ಮಾಡಿದ.

...ರೆ ಅರವಿಂದ ಅಂದು ಕೊಂಡಂತೇನೂ
...ರದ ಪೊಲೀಸರು ಕೌಬ್ರಿಗೇಡ್ ಪರ ವಹಿಸಿಲ್ಲ.
...ನನ್ನು ಕೊಲೆ ಸಂಚುಗಾರನೆಂದು ಕೇಸಲ್ಲಿ ಫಿಕ್ಸ್
...ರು. ಈ ಅರವಿಂದ್ ಗಾಣಿಗ ಅನಾಹುತಕಾರಿ
... ಈತನ ಮೂಲ ಕುಂದಾಪುರದ ಕೋಟೇಶ್ವರ.
... ಜಿಲ್ಲಾ ಹಿಂದೂ ಜಾಗರಣಾ ವೇದಿಕೆಯ
...ಈತ. ಹಿಂಸಾವಾದಿ ಜಗದೀಶ್ ಕಾರಂತನನ್ನು
...ಗಿ ದೀಕ್ಷೆ ಪಡೆದಿರುವ ಅರವಿಂದ ಅನಾಹುತ
... ಹೀರೋ ಆಗುವ ತೆವಲಲ್ಲಿ ಸದಾ
...ತ್ತಿರುತ್ತಾನೆ. ಕೊಕ್ಕರ್ಣೆ ಬಳಿಯ ಕಳ್ತೂರು-ಸಂತೆಕಟ್ಟೆ
... ಈತ ಕೆಲವು ಕಾಲದಿಂದ ಅಕ್ರಮ ಪೆಟ್ರೋಲ್
...ಡೆಸುತ್ತಿದ್ದ. ಕೊಂಕಣಿಯೊಬ್ಬರ ಹೆಸರಲ್ಲಿರುವ ಈ
... ಕಾನೂನುಬಾಹಿರಾಗಿ ಸಬ್‌ಲೀಸ್ ಪಡೆದು ಈತ
...ಧೆ ನಡೆಸುತ್ತಿದ್ದಾನೆ.

... ತಿಂಗಳ ಆರಂಭದಲ್ಲಿ ಅಮಾನುಷ ಬುದ್ಧಿಯ
...ಸ್ ಕೊಕ್ಕರ್ಣೆಯಲ್ಲಿ ಹಿಂದೂ ಜಾಗರಣಾ ವೇದಿಕೆ
...ಸಿದ್ದ. ಬೋಗಸ್ ಮಾತುಗಾರ ಸೂಲಿಬೆಲೆ
...ಯ ಶೈಲಿಯಲ್ಲಿ ಹಿಕಮತ್ತಿನ ಮಾತಾಡುವ ಕುಕಲೆ
...ಕೊಂಡಿರುವ ಅರವಿಂದನಿಗೆ ರೌಡಿಪಡೆ ಛೂಬಿಟ್ಟು
...ಂಧೆ" ನಡೆಸುವುದೇ ನಿತ್ಯಕರ್ಮವಾಗಿದೆ.
...ಪುರದಿಂದ ಬ್ರಹ್ಮಾವರ ಅಲ್ಲಿಂದ ಕೊಕ್ಕರ್ಣೆ,
...ರೆ ಹೆಬ್ರಿ ಮತ್ತು ಉಡುಪಿವರೆಗೆ ಗೋ ಬ್ರಿಗೇಡ್
...ರ್ ರೆಡಿ ಮಾಡಿಕೊಂಡಿರುವ ಅರವಿಂದ ಹಫ್ತಾ
...ದರ ಮಟಾಶ್ ಮಾಡಲು ಸಹಚರರಿಗೆ ಸ್ಕೆಚ್
...ಕೊಡುತ್ತಾನೆ. ಕೊಕ್ಕರ್ಣೆಯನ್ನು ಕೇಂದ್ರವಾಗಿಟ್ಟು
... ಕೊಲೆಗಡುಕ-ಹಫ್ತಾ ಕಾರ್ಯಾಚರಣೆ ನಡೆಸುತ್ತಿರುವ
...ನಿಗೆ ಸ್ಥಳೀಯವಾಗಿ ಜನಾನುರಾಗಿಯಾಗಿದ್ದ ಬಿಲ್ಲವರ
... ಪ್ರವೀಣ ಪೂಜಾರಿ ಕಂಡರೆ ಒಳಗೊಳಗೆ ಅಸೂಯೆ
... ಭುಗಿಲೇಳುತ್ತಿತ್ತು.

ದ್ವೇಷದ ಹಕೀಕತ್ತು!

...ಕ್ಕರ್ಣೆ ಬಿಜೆಪಿಯ ಗ್ರಾಮೀಣ ಅಧ್ಯಕ್ಷನೂ, ಸ್ಥಳೀಯ
...ಸಂಘದ ಜತೆ ಕಾರ್ಯದರ್ಶಿಯೂ ಆಗಿದ್ದ ಪ್ರವೀಣ
...ಯ ಜನಪ್ರಿಯತೆ ಅರವಿಂದ ಗಾಣಿಗನಲ್ಲಿ
...ಕಿಚ್ಚು ಮೂಡಿಸಿತ್ತು. ಬಿಜೆಪಿಯ ಪ್ರಬಲ
...ಡನಾಗಿ ಅವತರಿಸಿದ್ದ ಪ್ರವೀಣ ಹಿಂಜಾವೇಯ
...ನೆಂಬ ಗತ್ತಿನ ಅರವಿಂದನಿಗೆ ಸೊಪ್ಪು ಹಾಕುತ್ತಿರಲಿಲ್ಲ.
...ೋ ಬ್ರಿಗೇಡನ್ನೂ ಸೇರಿರಲಿಲ್ಲ. ಗೋಸಾಗಾಟದ
...ಕೊಡುತ್ತಿರಲಿಲ್ಲ. ಕೊಕ್ಕರ್ಣೆ ಭಾಗದ ಎಲ್ಲ ಜಾತಿ,
...ಯದ ಜನರ ಕಷ್ಟ-ಸುಖಕ್ಕೆ ಸ್ಪಂದಿಸುತ್ತಿದ್ದ ಪ್ರವೀಣನ
... ಎದುರು ಅರವಿಂದ ಅದೆಷ್ಟೇ ತಿಪ್ಪರಲಾಗ



ಕೇಸರಿ ಕೌಕಾರ್ಡ್!!

ಉಡುಪಿ ಜಿಲ್ಲೆಯ ಕೌಬ್ರಿಗೇಡ್‌ನ ಡಾನ್ ಕುಂದಾಪುರದ ಅರವಿಂದ ಗಾಣಿಗ. ಈತ ಹಿಂಜಾವೇ ಜಗದೀಶ ಕಾರಂತನ ಕಮ್ಯುನಲ್ ಗರಡಿಯಲ್ಲಿ ಪಳಗಿದ ಪಾಪಿ. ಎಂಥ ಪೈಶಾಚಿಕ ಪಾತಕಕ್ಕೂ ಹೇಸದ ಈತ ಸುಲಿಗೆಗೆಂದೇ ಕೌಬ್ರಿಗೇಡ್ ಕಟ್ಟಿಕೊಂಡಿದ್ದಾನೆ. ಸುಳ್ಳು-ಧರ್ಮಾಂಧ ದಗಲುಬಾಜಿತನವನ್ನು ಕಲಾತ್ಮಕವಾಗಿ ಹೇಳುವ ಹಿಕಮತ್ತಿನ ಗಾಣಿಗನ ಗಂಡಾಂತರಕಾರಿ ಗುಣ ಕಂಡೇ ಜಗದೀಶ ಕಾರಂತ ಆತನನ್ನು ಉಡುಪಿ ಜಿಲ್ಲಾ ಹಿಂಜಾವೇ ಸರದಾರ ಮಾಡಿದ್ದಾನೆ.


ಕೌಬ್ರಿಗೇಡ್‌ಗೆ ಈ ಅರವಿಂದ ಗಾಣಿಗ ಹಾಕಿ ಬ್ಯಾಟ್‌ನ ವಿನ್ಯಾಸದ ಕಬ್ಬಿಣದ ಆಯುಧ ಪೂರೈಸಿದ್ದಾನೆ. ಇದಕ್ಕೆ ಫಳಫಳ ಹೊಳೆವ ಸ್ಟೀಲ್ ಗ್ಲೇಜ್ ಕೊಡಲಾಗಿದೆ. ಹಫ್ತಾ ಕೊಡದ ಗೋ ಸಾಗಾಟಗಾರರನ್ನು ಈ ಆಯುಧದಿಂದ ಹೊಡೆದು ಪಳಗಿಸುವುದು ಕೌಬ್ರಿಗೇಡ್‌ನ ಕಾನೂನು! ಗೋಸಾಗಾಟ ಮಾಡುವವರು ಅರವಿಂದನ ದನ ಕಾಯೋರ ತಂಡದ ಪರವಾನಗಿ ಕಡ್ಡಾಯವಾಗಿ ಪಡೆಯಲೇಬೇಕು. ಒಂದು ಜಾನುವಾರು ಸಾಗಾಟಕ್ಕೆ 3000-5000 ರೂ. ಕೌಬ್ರಿಗೇಡ್‌ಗೆ ಕೊಡಬೇಕು. ಅಂಥವರಿಗೆ ಅರವಿಂದನ ಗ್ಯಾಂಗು "ಕೇಸರಿ ಬಣ್ಣದ ಪರ್ಮಿಟ್" ಕೊಡುತ್ತದೆ. ಈ ಪರ್ಮಿಟ್ ತೋರಿಸಿದರೆ ಜಿಲ್ಲೆಯ ಯಾವ ಮೂಲೆಯಲ್ಲೂ ಕೌಬ್ರಿಗೇಡ್ ತೊಂದರೆ ಕೊಡಲಾರದು.

ಇಂಥ 'ಕೇಸರಿ ಕಾರ್ಡ್' ಇಲ್ಲದವರಿಗೆ ಗ್ರಹಚಾರ ತಪ್ಪಿದ್ದಲ್ಲ. ಕೇಸರಿ ಕಾರ್ಡ್ ವಿತರಣೆಯಲ್ಲಿ ಹಿಂದೂತ್ವದ ತಾರತಮ್ಯ ಇಲ್ಲ. ಹಣ ಕೊಟ್ಟು ಮುಸ್ಲಿಮ್, ಕ್ರಿಶ್ಚಿಯನ್, ಹಿಂದೂ... ಹೀಗೆ ಯಾವ ಧರ್ಮದವರು ಬೇಕಿದ್ದರೂ ಕೇಸರಿ ಕಾರ್ಡ್ ಪಡೆಯಬಹುದು. ಜಾನುವಾರು ಸಾಗಾಟಕ್ಕೆ ಪಶುವೈದ್ಯರ ಪರವಾನಗಿಯೂ ಅವಶ್ಯ. ಹೀಗಾಗಿ ಸಂಘಪರಿವಾರದ ನಂಟಿನ ಪಶುವೈದ್ಯ ಹೆಬ್ಬಾರ್ ಎಂಬಾತ ಸಾವಿರಾರು ನಕಲಿ ಪರವಾನಗಿ ಕೌಬ್ರಿಗೇಡ್‌ಗೆ ಕೊಟ್ಟಿದ್ದಾನೆ. ಪೇತ್ರಿ ಎಂಬಲ್ಲಿದ್ದ ಈ ಡಾ. ಹೆಬ್ಬಾರ್ ಖೋಟ ಪರವಾನಗಿ ಪತ್ರದ ಪ್ರಕರಣದಲ್ಲಿ ಪನಿಶ್‌ಮೆಂಟ್ ವರ್ಗಾವಣೆಗೆ ಒಳಗಾಗಿದ್ದ. ಆದರೆ ಆತ ಕೊಟ್ಟ ನಕಲಿ ಪರವಾನಗಿ ಪತ್ರ ಮಾತ್ರ ಇವತ್ತಿಗೂ ಅರವಿಂದ ಗಾಣಿಗ ಬಳಸುತ್ತಿದ್ದಾನೆ.

ಇದು ಹಿಂದೂ ಹರಿಕಾರ ಜಗದೀಶ ಕಾರಂತನ ಕೌಬ್ರಿಗೇಡ್‌ನ ಹಿಂದೂತ್ವ!!



ಕೊಕ್ಕರ್ಣೆಯಲ್ಲಿ ಶ್ರದ್ಧಾಂಜಲಿ ಸಭೆ




ಹಾಕಿದರೂ ಮಂಕಾಗಿಯೇ ಇದ್ದ.

ಇದೆಲ್ಲ ಅರವಿಂದನಲ್ಲಿ ಪ್ರವೀಣನ ತಲೆ ತೆಗೆಯುವ ತಂತ್ರಗಾರಿಕೆ ತಂದಿದೆ. ಹತ್ತಿರದ ಮೊಗವೀರ ಪೇಟೆ ಕಳ್ತೂರು, ಸಂತೆಕಟ್ಟೆ ಭಾಗದ ಗೋಬ್ರಿಗೇಡನ್ನು ಪ್ರವೀಣನ ಮುಗಿಸಲು ಈತ ಸಿದ್ಧ ಮಾಡಿಕೊಂಡಿದ್ದ. ಅಂದು ಬುಧವಾರ ರಾತ್ರಿ ಗೋ ಸಾಗಾಟಕ್ಕೆಂದು ಅರವಿಂದನ ಗ್ಯಾಂಗೇ ಉಪಾಯವಾಗಿ ಪ್ರವೀಣ್ ಕರೆಸಿಕೊಂಡಿದೆ. ಜಾನುವಾರು ಹೇರಿಕೊಂಡ ಪ್ರವೀಣನ ರಿಕ್ಷಾ ಮೂರ್ನಾಲ್ಕು ಕಿ.ಮೀ. ಬರುವಷ್ಟರಲ್ಲೇ ಮುಗಿಬಿದ್ದು ಹೊಡೆದು ಕೊಂದಿದೆ. ಜತೆಗಿದ್ದ ರಮೇಶ್ ಮತ್ತು ಅಕ್ಷಯ್‌ಗೆ ನೆಪಕ್ಕಷ್ಟೇ ಚಚ್ಚಿರುವ ಹಂತಕ ಪಡೆ ಪ್ರವೀಣ್ ಪ್ರಾಣ ತೆಗೆವ ಹಟದಿಂದಲೇ ದಾಳಿ ಮಾಡಿದೆ.

ಅನಾಥವಾದ ಕುಟುಂಬ

ಕೇವಲ 33 ವರ್ಷದ ಪ್ರವೀಣ ಪೂಜಾರಿ ಚಟುವಟಿಕೆ ಕ್ರಿಯಾಶೀಲ ಹುಡುಗನಾಗಿದ್ದ. ಶ್ರಮಜೀವಿಯಾಗಿದ್ದ. ಕೆಂಜೂರಿನ ಮನೆ ಬಳಿಯೇ ಒಂದು ಮಾಂಸದ ಕೋಳಿ ಅಂಗಡಿ, ಒಂದು ಪುಟ್ಟ ದಿನಸಿ ಅಂಗಡಿ ನಡೆಸುತ್ತಿದ್ದ. ಜತೆಗೆ ಮೂರು ಚಕ್ರದ ಗೂಡ್ಸ್ ರಿಕ್ಷಾ ಓಡಿಸಿ ಸಂಪಾದಿಸುತ್ತಿದ್ದ ತಮ್ಮನಿಗೊಂದು ಕ್ಯಾಂಟೀನು ಹಾಕಿಕೊಟ್ಟಿದ್ದ. ಕಟ್ಟಾ ಬಿಜೆಪಿ ಬೆಂಬಲಿಗನಾದರೂ ಎಂದೂ ಹರಾಮಿ ಹಿಂದೂತ್ವ ಮಾಡಿದವನಲ್ಲ. ಎಲೆಕ್ಷನ್ ಬಂದಾಗಷ್ಟೇ ರಾಜಕಾರಣ ಮಾಡುತ್ತಿದ್ದ ಪ್ರವೀಣ ಯಾರೊಂದಿಗೂ ಮುನಿಸು-ಸಿಟ್ಟು ಮಾಡಿಕೊಳ್ಳದ ಸ್ವಭಾವದವನಾಗಿದ್ದ.

ಸ್ಥಳೀಯ ಬಿಲ್ಲವ ಸಂಘದಲ್ಲೂ ಚಟುವಟಿಕೆಯಿಂದಿದ್ದ ಪ್ರವೀಣ ಸಾಮಾಜಿಕ ಕಾರ್ಯದಲ್ಲಿ ಮನಃಪೂರ್ವಕ ತೊಡಗಿಸಿಕೊಂಡಿದ್ದ. ಉಡುಪಿ ಜಿಲ್ಲೆಯ ಘಟಾನುಘಟಿ ಬಿಜೆಪಿ ಲೀಡರ್‌ಗಳಿಗೆಲ್ಲ ಹತ್ತಿರದವನಾಗಿದ್ದ ಪ್ರವೀಣ. ಆದರೆ ಈ ಪಾಪಿ ಪುಢಾರಿಗಳ್ಯಾರೂ ಪ್ರವೀಣನ ಕೊಲೆ ಬಗ್ಗೆ ನಿಷ್ಠೂರವಾಗಿ ಮಾತಾಡುತ್ತಿಲ್ಲ. ಆತನ ಕುಟುಂಬಕ್ಕೊಂದು ನ್ಯಾಯ ಕೊಡಿಸಬೇಕು, ತಮ್ಮ ಪಾರ್ಟಿಗೆ ಆತ ಮಾಡಿದ ಸೇವೆ-ಉಪಕಾರದ ಋಣ ತೀರಿಸಬೇಕೆಂಬ ಸಣ್ಣ ಕೃತಜ್ಞತಾ ಭಾವನೆಯೂ ಈ ಚೆಡ್ಡಿ ಲೀಡರ್‌ಗಳಲ್ಲಿಲ್ಲ. ಮಾಜಿ ಶಾಸಕ-ರಸಿಕ ರಘುಪತಿ ಭಟ್ಟನ ಪತ್ತೆಯೇ ಇಲ್ಲ. ಇವರಿಗೆಲ್ಲಾ ಹರಾಮಿ ಹಿಂದೂತ್ವವೇ ಪ್ರಾಮಾಣಿಕ-ನಿಷ್ಠಾವಂತ ಪ್ರವೀಣನಿಗಿಂತ ದೊಡ್ಡದಾಗಿದೆ. ಇದು ಚೆಡ್ಡಿ-ಬಿಜೆಪಿಗಳ ಕರ್ಮ!



ಪ್ರವೀಣ ಆತನ ಇಡೀ ಕುಟುಂಬಕ್ಕೆ ಆಧಾರಸ್ತಂಭವಾಗಿದೆ. ತಂದೆ-ತಾಯಿ-ತಂಗಿ-ತಮ್ಮಂದಿರ ಆ ಸಂಸಾರ ಪ್ರವೀಣನ ದುಡಿಮೆ ಮೇಲೆಯೇ ಅವಲಂಬಿತ ವಾಗಿತ್ತು. ಬಡತನದ ಆ ಸಂಸಾರದ ಗೋಳು ಹೇಳತೀರದು. ಹಿಂದೂತ್ವ ಹಿಂದೂ ಕುಟುಂಬವೊಂದನ್ನು ನುಚ್ಚುನೂರು ಮಾಡಿರುವುದು ಘೋರ ಘಾತುಕವೇ ಸರಿ! ಬೂಟಾಟಿಕೆಯ ಹಿಂದೂತ್ವ ಒಂದೆಡೆ ಬಡ ಹಿಂದುಳಿದ ವರ್ಗದ ಪ್ರವೀಣನ ಕುಟುಂಬವನ್ನು ಕಣ್ಣೀರಲ್ಲಿ ಮುಳುಗಿಸಿದರೆ ಇನ್ನೊಂದೆಡೆ ಕೊಲೆ ಕೇಸು ಮಾಡಿಕೊಂಡಿರುವದೂ ತೀರಾ ಹಿಂದುಳಿದ ವರ್ಗದ ಹುಡುಗರೇ. ಇವರಲ್ಲಿ ಕೆಲವರು ನೌಕರಿಗೆ ಹೋಗುವ ಸಿದ್ಧತೆಯಲ್ಲಿದ್ದರು. ಇವರೆಲ್ಲ ಈಗ ಕ್ರಿಮಿನಲ್ ಪಾತಕಿಗಳಾಗಿ ಬದುಕು ಹಾಳುಮಾಡಿಕೊಂಡಿದ್ದಾರೆ.


ಕಾರಂತನ ಕಡೆಯವರಲ್ಲವಂತೆ!!

ಬ್ರಹ್ಮಾವರದ ಪೊಲೀಸರು ಈಗ ಬರೋಬ್ಬರಿ 18 ಮಂದಿ ಮೇಲೆ ಪ್ರವೀಣ ಪೂಜಾರಿ ಮರ್ಡರ್ ಕೇಸ್ ಹಾಕಿದ್ದಾರೆ. ಇವರೆಲ್ಲರೂ ಕೊಕ್ಕರ್ಣೆ ಸುತ್ತಲಿನ ಹಿಂದೂ ಜಾಗರಣಾ ವೇದಿಕೆಯ ಕುಖ್ಯಾತ ಕಾರ್ಯಕರ್ತರು. ಎಲ್ಲರೂ 25 ವರ್ಷದೊಳಗಿನ ಅಧಿಕ ಪ್ರಸಂಗಿ ಉಂಡಾಡಿಪುಂಡರು. ಕೌಬ್ರಿಗೇಡ್‌ನ ಪುಕ್ಕಟೆ ಕಾಸು, ಪ್ರಸಿದ್ಧಿ, ರಾಜಕೀಯ-ಸಾಮಾಜಿಕ ದೊಡ್ಡಸ್ತಿಕೆಯ ಮೋಹಕ್ಕೆ ಬಿದ್ದ ಹಳಿ ತಪ್ಪಿದ ಹುಡುಗರು. ಇವರಿಗೆಲ್ಲ ಗುರು ಜಿಲ್ಲಾ ಹಿಂದೂ ಜಾಗರಣಾ ವೇದಿಕೆಯ ಅಧ್ಯಕ್ಷ ಕುಂದಾಪುರದ ಕ್ರಿಮಿನಲ್ ಅರವಿಂದ ಗಾಣಿಗ!

ಈ ಅರವಿಂದ ಗಾಣಿಗನಿಗೆ ದೀಕ್ಷೆ ಕೊಟ್ಟಾತ ಕುಪ್ರಸಿದ್ಧ ಹಿಂದೂ ಹಿಂಸಾವಾದಿ ಜಗದೀಶ ಕಾರಂತ. ಇದು ಇಡೀ ಜಗತ್ತಿಗೇ ಗೊತ್ತಿರುವ ಹಿಂದೂ ಜಾಗರಣಾ ವೇದಿಕೆಯ ಸಂಘಟನೆಯ ಜಾತಕ. ಮಜಾ ಎಂದರೆ ವಂಚಕ ಬುದ್ಧಿಯ ಕಾರಂತ ಕೊಲೆ ಕೇಸಿನವರ್ಯಾರೂ ನಮ್ಮ ಹಿಂಜಾವೇಯವರಲ್ಲ ಅಂತಿದ್ದಾನೆ. ನಮ್ಮ ಜಿಲ್ಲಾಧ್ಯಕ್ಷ ಅರವಿಂದ ಗಾಣಿಗ ಅಮಾಯಕ. ಅವನ ಮೇಲೆ ಸುಳ್ಳು-ಸುಳ್ಳೇ ಕೇಸು ಹಾಕಿದ್ದಾರೆ ಅಂತಿದ್ದಾನೆ. ಗೋ ಗುದುಮುರಿಗೆ ಗುಂಪು, ಹಿಂಜಾವೇ, ಭಜರಂಗ ದಳ ಎಂಬೆಲ್ಲ ತರಹೇವಾರಿ ಕೇಸರಿ ಕರಾಮತ್ತುಗಾರರ ತಂಡ ಕಟ್ಟಿ ಹಿಂದೂತ್ವದ ಹಿಂಸಾಚಾರಕ್ಕೆ ಛೂಬಿಡುವ ಜಗದೀಶ್ ಕಾರಂತ, ಕಲ್ಲಡ್ಕ ಭಟ್ಟರಂಥ ಹಿಂದೂ ಡಾನ್‌ಗಳು ಈ ಹಿಂದುಳಿದ ವರ್ಗದ ಹುಡುಗರು ಸಿಕ್ಕಿಬಿದ್ದಾಗ ಕೈಕೊಟ್ಟು ಓಡಿದ್ದೇ ಹೆಚ್ಚು! ಈಗಲೂ ಅಷ್ಟೇ. ಬಿಜೆಪಿ ಮತ್ತು ಸಂಘಪರಿವಾರದ ಹಿಂದೂ ಮುಖಂಡರೆಲ್ಲ ಕೊಲೆಗಡುಕರಿಗೂ ಹಿಂದೂ ಸಂಘಟನೆಗೂ ಸಂಬಂಧ ಇಲ್ಲ ಅನ್ನುತ್ತಿದ್ದಾರೆ. ಏಕೆಂದರೆ ಪಾತಕಿಗಳೆಲ್ಲ ಹಿಂದೂ ಸಂಘಟನೆಯವರೇ.

ಹಾಗಂತ ಈ ಕಾರಂತ-ಭಟ್ಟ ವಗ್ಯೆರೆಗಳು ತಮ್ಮ ಜನಿವಾರ ಸಂಕುಲದ ಮಾಣಿಗಳನ್ನು ಹಿಂದೂತ್ವದ ಸಂಘರ್ಷಕ್ಕೆ ಹಚ್ಚದೇ ಅವರಿಗೆ ಎಮ್ಮೆಲ್ಲೆ, ಎಂಪಿ, ಜಿಪಂ-ತಾಪಂ ಸದಸ್ಯತ್ವ, ಸುರಕ್ಷಿತ ಸ್ಥಾನ-ಮಾನ ಕೊಟ್ಟು ಕಾಪಾಡುತ್ತ ಬಂದಿದ್ದಾರೆ. ಹಿಂದೂತ್ವದ ಮುಖವಾಡದಲ್ಲಿ ಹಿಂದುಳಿದವರನ್ನು ಆಪೋಷನ ಪಡೆಯುವ ಕಾರಂತ-ಭಟ್ಟ-ಹೆಗಡೆ-ಜೋಷಿ ವಗ್ಯೆರೆ ಜನಿವಾರಿಗಳ ಹಿಕಮತ್ತು ಶೂದ್ರ ಸಂಕುಲಕ್ಕೆ ಅರ್ಥವಾಗೋದು ಯಾವಾಗ?!

■ ಶುದ್ಧೋದನ





ಹನುಮಕ್ಕನವರ್-ಚಾಣಕ್ಯ ತಂತ್ರದ ಶೂದ್ರ ಮುಖವಾಣಿ

ನಾವು ಶಾಲೆಗೆ ಹೋಗುತ್ತಿದ್ದಾಗ ಪ್ರತಿ ಶನಿವಾರ ಬಾಲ ಸಭೆ ಅಂತಿರುತ್ತಿತ್ತು. ಅದರಲ್ಲಿ ಭಾಷಣ ಹಾಡು ನೃತ್ಯ ಎಲ್ಲವೂ ಇರುತ್ತಿತ್ತು. ಭಾಷಣದಲ್ಲಿ ಕೊಡಲಾಗುತ್ತಿದ್ದ ವಿಷಯಗಳಲ್ಲಿ 'ಶಕ್ತಿ ಮೇಲೋ.. ಯುಕ್ತಿ ಮೇಲೋ..' ಎಂಬುವುದೂ ಒಂದು ಪ್ರಮುಖ ವಿಷಯವಾಗಿ ಬರುತ್ತಿತ್ತು. ಹೆಚ್ಚಾಗಿ ವಿದ್ಯಾರ್ಥಿಗಳು ಯುಕ್ತಿಯನ್ನೇ ಆರಿಸಿಕೊಂಡು ಮಾತನಾಡುತ್ತಿದ್ದರು. ಅದು ಒಂದು ರೀತಿಯಲ್ಲಿ ಒಪ್ಪುವಂತಾದ್ದೇ ಆಗಿತ್ತು ಕೂಡ. ಆದರೆ ಈ ಯುಕ್ತಿಯಲ್ಲೂ ಹಲವಾರು ಬಗೆಗಳಿದ್ದರೂ ಮುಖ್ಯವಾಗಿ ಸಹಜ ಜಾಣ್ಮೆ ಮತ್ತು ಕುಯುಕ್ತಿ ಎಂಬ ಎರಡು ಸಂಗತಿಗಳೇ ಹೆಚ್ಚು ಈಗ ಚಾಲ್ತಿಯಲ್ಲಿವೆ.

ಅಲ್ಪಸಂಖ್ಯೆಯಲ್ಲಿರುವ ಮನುವಾದಿಗಳು ಸಾವಿರಾರು ವರ್ಷಗಳಿಂದ ಬೇಳೆ ಬೇಯಿಸಿಕೊಳ್ಳಲು ಈತನಕ ಜೋತು ಬಿದ್ದಿರುವುದೂ ಇದೇ ಕುಯುಕ್ತಿಯ ಆಧಾರದಲ್ಲೇ ತಾನೇ? ಕುಟಿಲ ಎನ್ನುವ ಪದಕ್ಕೆ ಸಮನಾರ್ಥಕವಾದ ಕೌಟಿಲ್ಯ ಅಥವ ಚಾಣಕ್ಯ ತಂತ್ರಗಳೇ ಇದಕ್ಕೆ ದೊಡ್ಡ ಸಾಕ್ಷಿ. ಇವರ ತಂತ್ರಗಳು ಹೇಗಿರುತ್ತವೆಯೆಂದರೆ ದೊಡ್ಡ ದೊಡ್ಡ ರಕ್ತಪಾತಗಳೇ ಘಟಿಸಿದ್ದರೂ ಅವರ ಬಿಳಿ ಬಟ್ಟೆಗೆ ಮಾತ್ರ ಸಣ್ಣ ಧೂಳೂ ಕೂದ ಸೋಕದಂತೆ ಶುಭ್ರವಾಗಿಟ್ಟು ತಮ್ಮ ಕಾರ್ಯವನ್ನು ನಯನಾಜೂಕಿನಿಂದ ಅವರು ಸಾಧಿಸಿಕೊಂಡಿರುತ್ತಾರೆ. ಎಲ್ಲೂ ಕೂಡ ಅಪರಾಧ ಅನ್ಯಾಯದ ಮೂಲವನ್ನವರು ಪ್ರದರ್ಶಿಸಿಕೊಳ್ಳುವುದೇ ಇಲ್ಲ. ಯಾರದೋ ಮೂಲಕ ಯಾವುದೋ ಒಳಸುತ್ತಿನ ತಂತ್ರಗಳ ಮೂಲಕ ಪರೋಕ್ಷವಾಗಿ ತಮ್ಮ ಕಾರ್ಯಸಾಧನೆಯನ್ನು ಮಾಡಿ ಮುಗಿಸಿರುತ್ತಾರೆ.

ನೀವೇ ಗಮನಿಸಿ, ಯಾವುದೋ ಒರಟ ರಾಜನೋ ಅಧಿಕಾರಿಯೋ ಇದ್ದಿದ್ದರೆ ಆತ ಎಲ್ಲರಿಗೂ ಢಾಳಾಗಿ ಕಾಣುವಂತೆ ಬಲವಂತದ ಹೇರಿಕೆಗಳನ್ನು ನೇರಾ ನೇರ ಮಾಡಹೋದರೆ ಚಾಣಕ್ಯವಾದಿಗಳು ಬಳಸುವ ದಾರಿಯೇ ಬೇರೆ. ಮಕ್ಕಳನ್ನು ಎಳವೆಯಲ್ಲೇ ಪಳಗಿಸುವ ವಿದ್ಯೆಯ ಕೇಸರೀಕರಣವಾಗಲೀ, ಮಾಧ್ಯಮಗಳಲ್ಲಿ ತಮ್ಮವರ ಹಿಡಿತ ಸ್ಥಾಪನೆಯಾಗಲೀ, ಧರ್ಮ ದೇವರು ಎಂಬ ಬಿಡಲಾಗದ ಭಾವನಾತ್ಮಕ ವಿಚಾರಗಳನ್ನೆತ್ತಿ ಮುಗ್ಧರನ್ನು ಉನ್ಮಾದಕ್ಕೊಳಗಾಗಿಸಿ ಗೋವು ಮತಾಂತರ ಇತ್ಯಾದಿಗಳ ಹೆಸರಲ್ಲಿ ಭೇದಭಾವ ಕೃತಕವಾಗಿ ಹುಟ್ಟುಹಾಕಿ ಮುಗ್ಧರನ್ನು ಬಳಸಿಕೊಳ್ಳುವುದೆಲ್ಲವೂ ಅವರ ತಣ್ಣನೆಯ ಕುಯುಕ್ತಿಯ ಭಾಗಗಳೇ ಆಗಿವೆ. ಇವುಗಳ ಕಾರ್ಯವೇಗ ನಿಧಾನವಿದ್ದರೂ ಅದರ ಪರಿಣಾಮ ಮಾತ್ರ ಶಾಶ್ವತ. ಅಂದರೆ ಒಮ್ಮೆ ಬ್ರೈನ್ ವಾಷ್ ಮಾಡಲ್ಪಟ್ಟವನನ್ನು ತಿರುಗಿ 'ಮನುಷ್ಯ'ನನ್ನಾಗಿ ಮಾಡುವುದು ಸುಲಭದ ಮಾತಲ್ಲ. ಏನೇ ಸಾಕ್ಷಿಗಳನ್ನು ಅಂತವನೆದುರಿಟ್ಟರೂ ಅವನದ್ದೇ ಮೊಂಡು ಸಮರ್ಥನೆಯಲ್ಲೇ ಆತ ಮುಳುಗಿರುತ್ತಾನೆ. ಸುರೇಶ್ ಭಟ್ ರವರ ಮುಖಕ್ಕೆ ಮಸಿ ಬಳಿದ ಶೆಟ್ಟಿಯಾಗಲೀ, ಮೊನ್ನೆ ಪೂಜಾರಿಯೊಬ್ಬನನ್ನು ಕೊಂದ ಶೂದ್ರನಿಗಾಗಲಿ, ತಮ್ಮ ದುಷ್ಕಾರ್ಯ ತಪ್ಪಂತ ಎಣಿಸದಿರುವುದಕ್ಕೆ ಇದೇ ಕಾರಣ.

ಕನ್ನಡ ಪತ್ರಿಕೋದ್ಯಮದ ದೆಸೆ ದಿಕ್ಕನ್ನೇ ಬದಲಿಸಿದಂತವ ತಾನೆಂದು ಬೀಗುತಿದ್ದ ವಿಷ ಭಟ್ಟನ ಅಸಲೀಯತ್ತು ಇದೀಗ ಬಯಲಾಗಿದೆ. ಇತಿಹಾಸ ಮರುಕಳಿಸುತ್ತದೆಂದು ಹೇಳಿ ಆರಂಭಿಸಿದ ಆತನ ವಿಷವಾಣಿಗೆ ಎಂಥಾ ಗಿಮಿಕ್‌ಗಳನ್ನು ಮಾಡಿದರೂ ಓದುಗರೇ ಜಮೆಯಾಗದೇ ನಂಜುಂಡಿ ತನ್ನ ನಂಜನ್ನು ವಿಷಭಟ್ಟನ ಮುಖಕ್ಕೆ ಕಾರುವ ಪರಿಸ್ಥಿತಿ ಈಗ ಎದುರಾಗಿದೆ. ಇಂತ ವಿಷಭಟ್ಟ ಯಾರಿಗೂ ಅರಿವಾಗದ ರೀತಿ ಇದೇ ನಾಜೂಕು ಚಾಣಕ್ಯತಂತ್ರವನ್ನು ಬಳಸಿ ಒಂದು ಸದಾಶಯದ ಸಮುದಾಯವನ್ನೇ ಕೆಟ್ಟವರನ್ನಾಗಿ ಜನಮಾನಸದಲ್ಲಿ ಅಚ್ಚೊತ್ತುವಂತೆ ಚಿತ್ರಿಸಿದ್ದನ್ನು ಮರೆಯಲಾದೀತೇ? ಸಂಕೇಶ್ವರರ ಕಾರಣ ಹೆಚ್ಚು ಪ್ರಸಾರದಲ್ಲಿದ್ದ ತನ್ನ ಸಂಪಾದಕೀಯದ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಪ್ರಗತಿಪರ, ಬುದ್ಧಿಜೀವಿಗಳನ್ನು ಬೇಕಂತಲೇ ಕೀಳುಮಟ್ಟದಲ್ಲಿ ಲೇವಡಿ ಮಾಡುವುದನ್ನೇ ಪ್ರತಿನಿತ್ಯ ಕಾಯಕ ಮಾಡಿಕೊಂಡು ಅವರನ್ನು ದಾರಿಹೋಕನೂ ಕೀಳಾಗಿ ಕಡೆಗಣಿಸಿ ನೋಡುವಂತೆ ಮಾಡಿದಾತ ಇದೇ ವಿಷ ಭಟ್ಟ. ಈತನ ತಂತ್ರಗಾರಿಕೆ ಮೇಲ್ನೋಟಕ್ಕೆ ಸಣ್ಣದಾಗಿ ತೋರಿದರೂ ಸಮಾಜದಲ್ಲಿ ಸಂಭವಿಸಿದ ಅದರ ದುಷ್ಪರಿಣಾಮ ಮಾತ್ರ ಅಗಾಧವಾದದ್ದೆಂಬುದನ್ನು ಯಾರೂ ಮರೆಯಲಾಗದು. ಅನಂತಮೂರ್ತಿಯಂತಹ ಮಹನೀಯರೂ ಸಾಮಾನ್ಯ ಜನರಿಂದ ಛೀ ಥೂ ಎಂದು ವಿನಾಕಾರಣ ಉಗಿಸಿಕೊಂಡಿದ್ದೂ ಕೂಡ ಇದರ ಪರಿಣಾಮವೇ ತಾನೇ.

ಇದೇ ಪರೋಕ್ಷ ತಂತ್ರವನ್ನು ಮೊನ್ನೆ ಹನುಮಕ್ಕನೆಂಬಾತ ಟೀವಿ ಮಾಧ್ಯಮದಲ್ಲಿ ಮಾಡ ಹೋಗಿ ಜನರಿಂದ ಉಗಿಸಿಕೊಂಡಿದ್ದಾನೆ. ತೀವ್ರ ಟೀಕೆಗಳು ವ್ಯಕ್ತವಾಗುತ್ತಿರುವುದನ್ನು ಗಮನಿಸಿದ ಆ ಖಾಸಗಿ ಛಾನೆಲ್‌ನ ಅಧಿಕಾರಿವರ್ಗ ಬಳಿಕ ಅದೇ ಚರ್ಚೆಯನ್ನು ಹಿಂದೆ ಪೂರ್ವಾಗ್ರಹಪೀಡಿತವಾಗಿ ಕತ್ತರಿಹಾಕಿದ್ದನ್ನೆಲ್ಲವನ್ನೂ ಪುನಃ ಚಾಚೂತಪ್ಪದೆ ತೋರಿಸುವಂತೆ ರವಿವಾರ ಮರುಪ್ರಸಾರ ಮಾಡಿ ಮುಖವುಳಿಸಿಕೊಂಡಿದೆ.

ಒಬ್ಬ ಪರಮ ನಾಸ್ತಿಕ ವಾಸ್ತವವಾದಿಯಾದವನಿಗೆ ಅತೀ ಸಹಜವಾಗಿ ಕಾಡಲೇಬೇಕಾದ ವಿಚಾರವೆಂದರೆ, "ಅರೇ ಮಾರಾಯ ಹೇಗಿದ್ದೀಯೋ ಹಾಗೆ ಸಹಜವಾಗಿ ಬದುಕು. ಯಾವ ಯಾವುದೋ ಭ್ರಮೆಗೆ ಬದ್ದು ನಿನ್ನನ್ನೇ ನೀನು



ಹಿಂಸಿಸಿಕೊಳ್ಳದಿರು" ಎಂಬ ಭಾವವಷ್ಟೇ. ಕೋ...
ಪರದಾಡುತ್ತಿದ್ದ ಹಾಗು ಘನೆಯಲ್ಲಿ ಅನೇಕ ಸದಸ್ಯರು...
ದೇವರಿಗಾಗಿ ತನ್ನ ಕಣ್ಣನ್ನೇ ಕಿತ್ತು ಅರ್ಪಿಸಿದ್ದ ...
ಏಳೆಂಟು ವರ್ಷಗಳ ಹಿಂದೆ ಜರುಗಿತ್ತು. ಇಂ...
ಮೂರ್ಖರನ್ನು ನೋಡಿದರೆ ವಾಸ್ತವವಾದಿಗ...
ಏನನ್ನಿಸಬಹುದು? ಭಕ್ತಿಯ ಹೆಸರಲ್ಲಿ ಹಿಂಸಿಸಿಕೊಳ್ಳು...
ವ್ಯಾವಹಾರಿಕವಾಗಿ ದೇವರೊಂದಿಗೆ ಹರಕೆ ಇತ್ಯಾ...
ಮೂಲಕ ನಾಟಕೀಯವಾಗಿ ನಡೆದುಕೊಳ್ಳುವುದು ...
ಎನಿಸದಿರದೇ? ಇಂಥವರನ್ನು ಕುರಿತು ಚಾರ್ವಾಕ ...
ಮೂಢರೇ ಹೇಗಿದ್ದೀರೋ ಹಾಗೇ ಸಹಜವಾಗಿ ಬ...
ಬಾಳಿ. ಅದನ್ನು ಬಿಟ್ಟು ಏನೇನೋ ಭ್ರಮೆಗಳಿಗೆ ...
ಹಾಳಾಗದಿರಿ.." ಎನ್ನುವುದನ್ನೇ ಆತ ತನ್ನ ಮಾತಿಗೆ ...
ಕೊಡಲು (ತಂದೆಯೊಬ್ಬ ತನ್ನ ಮಕ್ಕಳಿಗೆ ಎಲ್ಲೋ ಹ...
ಹಾಳಾಗಿ.. ಎಂದರೆ ಇಲ್ಲಿ ಪದಗಳ ಅರ್ಥವ...
ತೆಗೆದುಕೊಳ್ಳಲು ಸಾಧ್ಯವೇ ಈ ರೀತಿಯಾಗಿ) ಸೇ...
"ಋಣಂ ಕೃತ್ವಾ ಘೃತಂ ಪಿಬೇತ್.." ಅನ್ನೇ ಗಟ್ಟಿಯ...
ಹಿಡಕೊಂಡು ಚಾರ್ವಾಕನನ್ನೇ ಕಳ್ಳತನ ವಂ...
ಪ್ರಚೋದಿಸಿದಾತ ಎಂದು ಆತನ ಸಂದೇಶದ ...
ಆತನ ಮಹೋನ್ನತೆಯನ್ನೂ ವೈದಿಕರು ವ್ಯವಸ್ಥಿತ...
ಕುಂದಿಸಲಿಲ್ಲವೇ. ಇವೆಲ್ಲವೂ ಐತಿಹಾಸಿಕ...
ದಾಖಲಾದಂತಹ ಸತ್ಯಗಳು.

ದೆಹಲಿಯ ಜೆಎನ್‌ಯುನಲ್ಲಿನ ಕನ್ನಯ್ಯ ಕು...
ಪ್ರಕರಣ ಸಾಕಷ್ಟು ಚರ್ಚೆಗೆ ಗುರಿಯಾದಂತಹ ವಿ...
ಸುದ್ದಿ ಮಾಧ್ಯಮದಲ್ಲಿಯೇ ಇರುವ ಅಜಿತ್ ಹನು...
ಇದು ತಿಳಿದಿಲ್ಲವೆಂದೇನಿಲ್ಲ, ಕನ್ನಯ್ಯ ಕುರಿತ ಪರ ವಿರೋ...
ಚರ್ಚೆಗಳೇನೇ ಇರಲಿ, ಸ್ವಾತಂತ್ರ್ಯ ಸಮಾರಂಭದ ಹೆ...
ಈ ವಿಚಾರವನ್ನು ಬುದ್ಧಿವಂತಿಕೆಯಿಂದ ಎಳೆತಂದು, ಕ...
ಪರ ಸಹಮತ ಇರುವವರಲ್ಲಿ ಚರ್ಚೆಯ ನೈಜ ವಿಚಾರ...
ಉದ್ದೇಶಪೂರ್ವಕವಾಗಿ ಮರೆಮಾಚಿ, ಯಾವುದೋ ...
ಬಾಯಿಬಡುಕರನ್ನು ಅವರೆದುರು ವಿಜೃಂಭಿಸುವು...
ಬೇಕಿತ್ತೇ? ಅಂದರೆ, ಒಂದೇ ಹೊಡೆತಕ್ಕೆ ಎರಡು ...
ಪರಿಣಾಮಗಳನ್ನು (ಬಾಯಿಬಡುಕರನ್ನು ಮತ್ತಷ್ಟು ಬೆ...
ಅವರೆದುರು ಖೆಡ್ಡಕ್ಕೆ ಬಿದ್ದ ಎದುರಾಳಿ ಕನ್ನ...
ಒಲವಿನವರನ್ನು ಏಕಕಾಲದಲ್ಲಿ ದುಷ್ಟರನ್ನಾಗಿಸ...
ಹೊಂದಿಸುವ ಕಲೆಗಾರಿಕೆಗೂ ಕೂಡ ಇದೇ ಚಾ...
ತಂತ್ರವಲ್ಲದೇ ಮತ್ತೇನು? ಅಸಲಿಗೆ ಜಗತ್ತಿನ ಅತಿ ವಿಸ...

ಕೃಷ್ಣಾವತಾರ ನಿಜರೂಪವೇನು?

ಕ್ಷತ್ರಿಯನಾದ ವಸುದೇವನು ತನ್ನ ಮಗನನ್ನು ಕಂಸನಿಂದಾಗುವ ಹತ್ಯೆಯಿಂದ ತಪ್ಪಿಸಲು ತನ್ನ ಗೆಳೆಯನಾದ ನಂದಗೋಪನ ಗೊಲ್ಲರ ಹಟ್ಟಿಯಲ್ಲಿ ಕದ್ದು ಪೋಷಿಸುತ್ತಾನೆ. ತನ್ನ ಬಾಲ್ಯವನ್ನು ಶೂದ್ರರಾದ ಗೊಲ್ಲರ ಹಟ್ಟಿಯಲ್ಲಿ ಕಳೆದ ಕ್ಷತ್ರಿಯ ಕೃಷ್ಣನು ಅಲ್ಲಿ ಬಾಲ್ಯದಲ್ಲಿ ಚೆನ್ನಾಗಿ ತಿಂದುಂಡು ತಾನು ವೈದಿಕ ಧರ್ಮದ ವಿರೋಧಿಯಂತೆ ನಾಟಕವಾಡುತ್ತಾನೆ. ವೈದಿಕ ದೇವತೆಗಳನ್ನು ವಿರೋಧಿಸಿ ಪ್ರಕೃತಿ ಪೂಜೆ ಮಾಡಲು ಕರೆಕೊಡುತ್ತಾನೆ. ಗೋವುಗಳನ್ನು ಪೂಜಿಸುವ ನಾಟಕವಾಡುತ್ತಾನೆ. ಆ ಮೂಲಕ ಶೂದ್ರ ಯಾದವರ ಸ್ನೇಹ ಸಂಪಾದಿಸುತ್ತಾನೆ. ಅವರ ಸಹಾಯದಿಂದಲೇ ಕಂಸನನ್ನು ಕೊಲ್ಲುತ್ತಾನೆ. ತದನಂತರವೇ ಕೃಷ್ಣನ ನಿಜರೂಪದ ದರ್ಶನವಾಗುವುದು.




ಯಾವಾಗ ತನ್ನ ಕಾರ್ಯವನ್ನು ಕೃಷ್ಣನು ಜಯಶಾಲಿಯಾಗಿ ಪೂರ್ಣಗೊಳಿಸಿದನೋ ಅಲ್ಲಿಂದ ಶೂದ್ರರನ್ನು ತುಳಿಯುತ್ತಾ ವೈದಿಕ ಧರ್ಮದ ವಿರೋಧಿ ರಾಜರನ್ನು ಕೊಲ್ಲುತ್ತಾ ಹೋಗುತ್ತಾನೆ. ತನ್ನ ಗೀತೆಯಲ್ಲಿ ಶೂದ್ರರನ್ನು ಪಾಪ ಯೋನಿಯಲ್ಲಿ ಜನಿಸಿದ ಪಾಪಿಗಳು ಎಂದು ನಿಂದಿಸುತ್ತಾನೆ. ಗೀತೆಯಲ್ಲಿ ಬ್ರಾಹ್ಮಣ ಶ್ರೇಷ್ಠತೆಯನ್ನು ಎತ್ತಿ ಹಿಡಿದು ಚಾತುರ್ವರ್ಣದ ನಿಯಮವನ್ನು ಪ್ರತಿಪಾದಿಸುತ್ತಾನೆ. ತನ್ನ ಆರ್ಯ ಕ್ಷತ್ರಿಯ ಗೆಳೆಯರಾದ ಪಾಂಡವರಿಗೆ ಅವರ ದಾಯಾದಿಗಳು ರಾಜ್ಯ ನೀಡಿಲ್ಲವೆಂದು ಅವರ ಭೂಮಿಯ ಹಕ್ಕಿಗಾಗಿ ಅವರ ಜೊತೆ ನಿಂತು ಹೋರಾಡುತ್ತಾನೆ. ಅವರಿಗೆ ರಾಜ್ಯ ಸಿಕ್ಕ ನಂತರ ಅವರಿಂದ ಅನೇಕ ಯಜ್ಞ ಯಾಗಾದಿಗಳನ್ನು ಮಾಡಿಸಿ ಬ್ರಾಹ್ಮಣರಿಗೆ ಸಾಕಷ್ಟು ಭೂಮಿಯನ್ನು, ಚಿನ್ನದ ವರಹಗಳನ್ನು ದಾನ ದಕ್ಷಿಣೆಯಾಗಿ ಕೊಡಿಸುತ್ತಾನೆ. ಸ್ವತಃ ತಾನು ಬ್ರಾಹ್ಮಣರ ಜೊತೆಗೂಡಿ ಗೋಮಾಂಸವನ್ನು ಭಕ್ಷಿಸುತ್ತಾನೆ. ಆ ಮೂಲಕ ವೈದಿಕ ಧರ್ಮದ ಮಹಾಪೋಷಕನಾಗುತ್ತಾನೆ.

ಶೂದ್ರರ ಕೇರಿಯಲ್ಲಿ ತಿಂದುಂಡು ಬಾಲ್ಯವನ್ನು ಕಳೆದ ಕ್ಷತ್ರಿಯ ಕೃಷ್ಣನು ಈ ಮೂಲಕ ಶೂದ್ರರನ್ನು ಆರ್ಯರ ಗುಲಾಮರನ್ನಾಗಿಸಿ ಅವರ ಸ್ವಾಭಿಮಾನದ ಬದುಕನ್ನೇ ನಾಶಮಾಡುತ್ತಾನೆ. ಭಾಗವತ ಪುರಾಣದಲ್ಲಿ ಬರುವ ಈ ಕಥೆಯ ನೀತಿಯೇನೆಂದರೆ ಆಪತ್ಕಾಲದಲ್ಲಿ ಶೂದ್ರರಿಂದ ಸಹಾಯ ಸಹಕಾರಗಳನ್ನು ಪಡೆದರೂ ಅವರ ಹಕ್ಕು ಅಧಿಕಾರಗಳನ್ನು ದಮನಿಸಿ ಅವರು ಯಾವತ್ತೂ ಪರಾವಲಂಬಿಗಳಾಗಿ ಬದುಕುವಂತೆ ಮಾಡಬೇಕು ಎಂಬುವುದಾಗಿದೆ.

ಈ ಕಥೆಯ ಮುಂದುವರೆದ ಭಾಗವೆಂಬಂತೆ ಅದೇ ದಾರಿಯಲ್ಲಿ ಸಾಗುತ್ತಿರುವ ಕುತಂತ್ರಿ ಮನುವಾದಿಗಳು ಶೂದ್ರ ದಲಿತರ ಸಹಕಾರದಿಂದಲೇ ಮನುಶಾಸನದ ವೈದಿಕ ಹಿಂದೂ ರಾಷ್ಟ್ರವನ್ನು ಸ್ಥಾಪಿಸಿ ಶೂದ್ರ ದಲಿತರಿಗೆ ಸಂವಿಧಾನದಿಂದ ದೊರೆತ ಹಕ್ಕು ಅಧಿಕಾರಗಳನ್ನು ನಾಶಪಡಿಸುವ ಯೋಜನೆಯಲ್ಲಿದ್ದಾರೆ. ಈ ಬಗ್ಗೆ ಇನ್ನಾದರೂ ಶೋಷಿತ ಬಹುಜನರು ಎಚ್ಚೆತ್ತುಕೊಳ್ಳಲಿ. ಸಂವಿಧಾನವನ್ನು ರಕ್ಷಿಸಿದ್ದಲ್ಲಿ ಸಂವಿಧಾನವು ಬಹುಜನರನ್ನು ರಕ್ಷಿಸುತ್ತದೆ. ಜೈ ಭೀಮ್.

- ದೇವಪ್ಪ ಕಾರೆಕ್ಕಾಡು, ಪುತ್ತೂರು

ಹೋಮಕುಂಡ ಕೊಲೆ 'ಕಾಮ ಕುಂಡ'ವಾಯಿತು





ಹೋಮಕುಂಡ ಕೊಲೆಯೆಂದು ಹೆಸರು ಗಳಿಸಿದ್ದ ಉಡುಪಿಯ ಭಾಸ್ಕರ್ ಶೆಟ್ಟಿ ಕೊಲೆ ಈಗ 'ಕಾಮ ಕುಂಡ' ಕೊಲೆಯೆಂದು ಹೆಸರು ಗಳಿಸಿದೆ. ಕಾರಣ ಈ ಕೊಲೆಯಲ್ಲಿ ಕೇವಲ ತಾಯಿ-ಮಗ-ಭಟ್ಟ ಈ ಮೂವರೇ ಒಳಗೊಂಡಿರಲಿಲ್ಲ, ಇಬ್ಬರು ಪೊಲೀಸ್ ಅಧಿಕಾರಿಗಳು ಒಬ್ಬ ಸೀನಿಯರ್ ಕ್ರಿಮಿನಲ್ ಲಾಯರ್ ಹಾಗೂ ಒಬ್ಬ ಉದ್ಯಮಿ ಕೊಲೆ ಪುನ್ನಾರಿನಲ್ಲಿ ಸೇರಿದ್ದು ಇವರಿಗೆ ಡ್ರಮ್ ಮಾಸ್ಟರ್ ಎಂಬ ಖ್ಯಾತಿಯ ಉಡುಪಿ ಸ್ವಾಮೀಜಿಯ ಆಶೀರ್ವಾದವಿತ್ತು, ಹಾಗಾಗಿ ಸಿಐಡಿ ತನಿಖೆ ಬಿಡಿ ಸಿಬಿಐ ತನಿಖೆ ಆದರೂ ಸಾಕ್ಷ್ಯಗಳು ಸಿಗದೇ ಕೋರ್ಟಿನಲ್ಲಿ ಬಿದ್ದು ಹೋಗುವಂತಹ ಮಾಸ್ಟರ್ ಪ್ಲಾನ್ ಎರಡು ಪೊಲೀಸರು ಹಾಗೂ ಬಿಜೆಪಿ ಪಕ್ಷಕ್ಕೆ ಸೇರಿದ ಒಬ್ಬ ಸೀನಿಯರ್ ವಕೀಲ ತಮ್ಮ ಸಂಪೂರ್ಣ ಅನುಭವ ಹಾಗೂ ಕಾನೂನು ಜ್ಞಾನವನ್ನು ಧಾರೆ ಎರೆದು ಯೋಜನೆ ತಯಾರಿಸಿರುವರು. ಹಾಗಾಗಿ ಹೋಮಕುಂಡದಲ್ಲಿ ಶವ ಸುಡದೇ ಬೇರೆಲ್ಲಿಯೂ ಶವವನ್ನು ವಿಲೇವಾರಿ ಮಾಡಿ ತನಿಖೆಯ ಹಾದಿ ತಪ್ಪಿಸಲು ಹೋಮಕುಂಡದಲ್ಲಿ ಹೆಣ ಸುಟ್ಟಿದ್ದು ಎಂದು ಆರೋಪಿಗಳು ತಮ್ಮ ಬಾಯಿಂದಲೇ ಹೇಳುವ ಪ್ಲಾನ್ ಮೊದಲೇ ತಯಾರಾಗಿತ್ತು ಎನ್ನಲಾಗುತ್ತಿದೆ. ಮೃತನ ಒಂದೂ ಎಲುಬು ಸಿಗದಿದ್ದರೆ ಈ ಕೇಸು ಸುಲಭವಾಗಿ ಬಿದ್ದು ಹೋಗುತ್ತದೆ ಎಂಬುದು ಕೇವಲ ಪೊಲೀಸರಿಗೆ ಹಾಗೂ ವಕೀಲರಿಗೆ ಮಾತ್ರ ಗೊತ್ತಿರುವ ಸತ್ಯ.

ಇದಕ್ಕೆ ಕಾಮ-ಕುಂಡ ಕೊಲೆಯೆಂಬ ಹೊಸ ಹೆಸರು ಬರಲು ಕಾರಣ ಒಂಟಿ ಆಗರ್ಭ ಶ್ರೀಮಂತ ಸುಂದರ ಹೆಣ್ಣು ಸಿಕ್ಕಾಗ ಅದರಲ್ಲೂ ಮಂತ್ರ-ತಂತ್ರಗಳಲ್ಲಿ ನಂಬಿಕೆ ಇರುವ ಮೌಢ್ಯ ತುಂಬಿದ ಹೆಂಗುಸು ಸಿಕ್ಕಾಗ ಸಮಯಸಾಧಕ ಗಂಡಸರು ರಣಹದ್ದುಗಳಂತೆ ಎರಗುತ್ತಾರೆ ಎಂಬ ವ್ಯಾಖ್ಯೆ ರಾಜೇಶ್ವರಿಯ ವಿಷಯದಲ್ಲಿ ನಿಜವಾಗಿದೆ. ಇಬ್ಬರು ಪೊಲೀಸ್ ಅಧಿಕಾರಿಗಳು, ಒಬ್ಬ ಕ್ರಿಮಿನಲ್ ಲಾಯರ್, ಒಬ್ಬ ಅ...
ಪ್ರಭಾವಿ ಕಾವಿಧಾರಿ, ಜತೆಗೆ ರಸಿಕ ವಾಮಾಚಾರಿ ನಿರ...
ಅಸ್ಟಣ್ಣ ಇಷ್ಟು ಗಂಡಸರು ಸೀಳುನಾಯಿಗಳಂತೆ ಆ ...
ಸುಂದರಿಯನ್ನು ಅನುಭವಿಸಿ ನಂತರ ಕೊಲೆ ...
ತಯಾರಿಸಿರುವುರಿಂದ ಇದು ಕಾಮಕುಂಡ ಕೊಲೆಯ...
ಹೆಸರು ಪಡೆದಿದೆ.

ಮೊದಲೆಲ್ಲಾ ಉಡುಪಿಯ ಬಂಟ ಸಮುದಾಯದ...
ಈ ಕೊಲೆಗಾರ ತಾಯಿ ಮಗನಿಗೆ ಬಂಟ ಸಮುದಾ...







ಸುವರ್ಣ ನ್ಯೂಸ್ 24X7

...ಶಗಳಲ್ಲೊಂದಾದ ನಮ್ಮ ದೇಶದ ಸ್ವಾತಂತ್ರವನ್ನು ಕೇವಲ ...ಶ್ಮೀರ ಸಂಗತಿಯೊಂದಿಗಷ್ಟೇ ಸಮೀಕರಿಸಿ ವಿಶ್ಲೇಷಿಸಿದ್ದೇ ...ಡ್ಡ ಮೂರ್ಖತನ. ಬಳಿಕ ಸೈನಿಕರ ಕಷ್ಟ ಗಡಿಯಲ್ಲಲ್ಲದೇ ...ವರ ಊರಲ್ಲೂ ಅವರಿಗೆ ಸೌಲಭ್ಯಗಳಿಲ್ಲ ಹಾಗು ದೇಶದ ...ತ್ತ ಹಲವು ಜ್ವಲಂತ ಸಮಸ್ಯೆಗಳಿಗೆಲ್ಲ ನೂರ್ ಶ್ರೀಧರ್ ...ಗು ಚೇತನಾರವರೇ ಉತ್ತರದಾಯಿ ಎಂಬಂತೆ ಬಿಂಬಿಸಿ ...ಸಲಾದ ಚರ್ಚೆಯೇ ಹಾಸ್ಯಾಸ್ಪದವಾದದ್ದು. ಇಲ್ಲಿ ನೂರ್ ...ಗು ಚೇತನಾರಷ್ಟೆ ಹೊಣೆಗಾರಿಕೆ ತಗಡು ಸೂಲಿಬೆಲೆಗೂ ...ದೆ. ಇನ್ನೊಬ್ಬ ತೇಜಸ್ವಿ ಎಂಬುವನಂತೂ ಚರ್ಚೆಯಲ್ಲಿ ...ರವಾಗಿಯೇ ತಾವು ತಯಾರಾಗಿ ಬಂದಿದ್ದರ ಹಿಡನ್ ...ಜೆಂಡ ಹಾಗು ಸಂಘಪರಿವಾರದ 'ಸ್ವಾತಂತ್ರ್ಯದ ಓಟ'ಕ್ಕೆ ...ಸವಾದ ತಡೆ ಏನೆಂಬುವುದನ್ನು ತನಗರಿವಿಲ್ಲದಂತೆಯೇ ...ಯಿಬಿಟ್ಟಿದ್ದ. ಆತ ಹೇಳುವಂತೆ "ಜೈಭೀಮ್ ಹಾಗು ...ಲ್ ಸಲಾಮ್ ಒಂದಾಗುವುದಕ್ಕೆ ಮತ್ತು ಜೈ ಭೀಮ್ ...ತ್ತು ಟಿಪ್ಪು ಸುಲ್ತಾನ್ ಒಂದಾಗುವುದಕ್ಕೆ ನಮ್ಮ ...ರೋಧವಿದೆ." (ಹೀಗಾದರೆ ತಮ್ಮ ಬುರುಡೆಗೆ ಬಿಸಿ ...ರೆಂಬ ಸತ್ಯ ಈ ಕಳ್ಳರಿಗೆ ಗೊತ್ತು, ಅದನ್ನವರು ಅಪೇಕ್ಷಿಸರು. ...ದಕ್ಕೇ ಈ ಎಲ್ಲ ಹಾರಾಟ ಚೀರಾಟಗಳು) ಆ ಮೂಲಕ ... ತನ್ನ ಕಂತ್ರಿ ವೈದಿಕ ಬುದ್ಧಿಯನ್ನು ಜಾಹೀರುಗೊಳಿಸಿ ...ವಾದಿ ಘೋಷಣೆಯ ವಿರೋಧಿಸುತ್ತಿರುವ ಮೂಲ ...ರಣವನ್ನು ಹೊರಗೆಡವಿದ.

...ಬೊಂಬ್ದಿರಾಯ ಸೂಲಿಬೆಲೆಯ ಲೇವಡಿಯ ಪೊಳ್ಳು ...ತುಗಾರಿಕೆ, ಅಂಬೇಡ್ಕರ್ ಅಂದಿನ ಸಂದರ್ಭಕ್ಕೆ ತಕ್ಕಂತೆ ...ದ ಕಮ್ಯುನಿಸ್ಟ್ ವಿರೋಧಿ ಮಾತುಗಳು (ಪೆರಿಯಾರರೂ ...ತಹ ಮಾತನ್ನಾಡಿದ್ದಾರೆ. ಇಂದು ಅವರಿದ್ದರೆ ಆಡುವ ...ತೆ ಬೇರೆ) ಇವನ್ನೇ ಹಿಡಿದು ಅಂಬೇಡ್ಕರರ ನಿಜ ...ಯ ಹಾಗು ಚಿಂತನೆಯನ್ನು ಮರೆಸಲು ಚರ್ಚೆಯ ...ರಿತಪ್ಪಿಸಿ ವೀಕ್ಷಕರನ್ನು ಗೊಂದಲಪಡಿಸಲು ನೋಡುವ ... ವಕೀಲ (ಈತ ಚರ್ಚೆಯ ಕೊನೆಗೆ ಆಡಿದಂತಹ ...ತಿಪುರರ ಕುರಿತಾದ ಲೇವಡಿ ಮಾತು ಈತನ ವ್ಯಕ್ತಿತ್ವವನ್ನು ...ೇರಿಸುವಂತಿದೆ) ಇವರಿಬ್ಬರ ಜುಗಲ್ ಬಂದಿಗೆ ...ಖವಾಣಿಯಾಗಿದ್ದಾತ ಹನುಮಕ್ಕನವರ್.

ಕೊನೆಗೆ ನೂರ್ ಶ್ರೀಧರ್ ಹಾಗು ಚೇತನಾ ...ರ್ಥಹಳ್ಳಿಯವರು ಆಡಿದಂತಹ ಅರ್ಥಗರ್ಭಿತ ಪ್ರಬುದ್ಧ ...ತುಗಳಿಗೆ ಆಗಸ್ಟ್ ಹದಿನೈದರಂದು ಕತ್ತರಿ ಹಾಕಿದ್ದರೂ ...ದಂತಹ ವಿರೋಧದ ಕಾರಣ ರವಿವಾರ ಯಾವುದಕ್ಕೂ ...ಹಾಕದೇ ಮರುಪ್ರಸಾರ ಮಾಡಿದದ್ದು ಪುನಃ ಪುನಃ ...ಸಿಕೊಳ್ಳುವಂತಿತ್ತು.

- ಅವಿನಾಶ್ ಎಮ್.ಎಸ್. ನೆಲ್ಲಿಕಾರ್

...ವುದೇ ವಕೀಲರು ಸಹಾಯ ಮಾಡಬಾರದು ಎಂದು ...ಧ ಹೇರಿದ್ದರು. ಆದರೆ ಈ ಪ್ರಕರಣದಲ್ಲಿ ಇನ್ನೂ ...ವರು ಇದ್ದಾರೆ ಎಂದು ಗೊತ್ತಾದ ಮೇಲೆ ಬಂಟ ...ದಾಯದ ಮುಖಂಡರು ಈಗ ತೆಪ್ಪಗಾಗಿದ್ದಾರೆ. ...ಂಬೈಯ ತುಳು-ಕನ್ನಡಿಗರಲ್ಲಿ ಈ ಕೊಲೆ ಹೆಚ್ಚು ...ನ ಸೆಳೆಯಲಿಲ್ಲ, ಕಾರಣ ಮುಂಬಯಿಯ ಬಂಟ ...ದಾಯದಲ್ಲಿ ಹಣಕ್ಕಾಗಿ ಇಂತಹ ಕೊಲೆ ಮೋಸಗಳು ...ಮಾನ್ಯವಾಗಿ ಹೋಗಿವೆ. ಮುಂಬೈಯಲ್ಲಿಯ ...ಪಾರ-ಉದ್ಯಮ ವಲಯದಲ್ಲಿ ಇರುವ ಮಾತೆಂದರೆ: ...ಧಿಗಳನ್ನು ನಾಲ್ಕು ಹೆಜ್ಜೆಯಾದರೂ ನಂಬಬಹುದು. ...ರೆ ಮಂಗ್ಳೂರ್ ಶೆಟ್ಟಿಗಳನ್ನು ಒಂದು ಹೆಜ್ಜೆಗೆ ...ಬುವುದೂ ಅಪಾಯ."

ಕೆಲವು ವರ್ಷಗಳ ಹಿಂದೆ ನಾನು ಮುಂಬೈಗೆ ...ದ್ಯೋಗ ನಿಮಿತ್ತ ವರ್ಗವಾಗಿ ಬಂದಿದ್ದಾಗ ನನ್ನ ...ರನಾಮ ಕೇಳಿ ಜನರು ಮನೆ ಬಾಡಿಗೆಗೆ ಕೊಡಲು ...ಕರಿಸುತ್ತಿದ್ದರು. ಕೆಲವು ಕಹಿ ಸತ್ಯಗಳೊಂದಿಗೆ ಮತ್ತು ...ಮಾಜದಲ್ಲಿ ನಮ್ಮ ವಿರುದ್ಧವಿರುವ ಜಾತಿ ...ರ್ಗಗಳೊಂದಿಗೆ ಮಾನಸಿಕವಾಗಿ ಹೊಂದಿಕೊಂಡು ... ಹೊರನಾಡಿನ ನಗರಗಳಲ್ಲಿ ಜೀವಿಸಬೇಕಾಗುತ್ತದೆ. ...ಹಿನ್ನೆಲೆಯಲ್ಲಿ ಮುಸ್ಲಿಮರ ವಿರುದ್ಧ ನಮ್ಮ ...ಜದೊಳಗಿನ ಪೂರ್ವಾಗ್ರಹಗಳನ್ನು ನೋಡಿದಾಗ ಅವರ ...ವಾಗಿ ಬಹಳ ಬೇಸರ ಹುಟ್ಟುತ್ತದೆ.

-ಗಿರೀಶ್ ಟಿ ಶೆಟ್ಟಿ, ಮುಂಬೈ

ಯತೀಂದ್ರನ ಎಂಟ್ರಿ

ಕಳೆದ ಒಂದು ವಾರದಿಂದ ಮೈಸೂರಿನ ತೋಣಚಿಕೊಪ್ಪಲು ಬಡಾವಣೆಯಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸದ ರಸ್ತೆಯಲ್ಲಿ ಮೈಸೂರಿನ ಸುತ್ತಮುತ್ತಲ ಗ್ರಾಮಗಳ, ತಾಲ್ಲೂಕಿನ ರೈತರು, ರೈತ ಕಾರ್ಮಿಕರು, ಜನಪ್ರತಿನಿಧಿಗಳು ತಮ್ಮ ಹೆಜ್ಜೆ ಗುರುತು ಮೂಡಿಸುತ್ತಿದ್ದಾರೆ. ಸಿಎಂ ಮನೆ ಎದುರು ಬೆನ್ನೊತ್ತು ನಿಲ್ಲುತ್ತಾರೆ. ಹೊಂಗೆ ಮರದಡಿಯಲ್ಲಿ ಕುಳಿತು ಹರಟುತ್ತಾರೆ. ದಿಲ್ಲಿಯಿಂದಿಡಿದು ಹಳ್ಳಿಯತನಕ ಹರಿಸುವ ರಾಜಕೀಯದ ಹೊಳೆಯಲ್ಲಿ ತಮ್ಮ ನೆಚ್ಚಿನ ನಾಯಕರನ್ನು ತೇಲಿಸುತ್ತಾರೆ. ನಡುನಡುವೆ ತಮ್ಮತಮ್ಮ ಊರಿನ ರಾಜಕೀಯ ಕುಶಲೋಪರಿ ವಿಚಾರಿಸುತ್ತಾರೆ. ಬ್ಯಾರಿಕೇಡ್‌ಗೆ ಮೈಒರಗಿಸಿ ಸಿಎಂ ಮನೆಬಾಗಿಲಿನತ್ತ ಬಿಡುಗಣ್ಣಾಗುತ್ತಾರೆ. ವರುಣಾ, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಭವಿಷ್ಯದ ದಿನಗಳ ಬಗ್ಗೆ ಕನಸು ಬಿತ್ತುತ್ತಿದ್ದಾರೆ.

ಮೈಸೂರಿನ ಸುತ್ತಮುತ್ತಲಿನ ಶ್ರೀಸಾಮಾನ್ಯರಿಗೆ ಉಂಟಾದ ಈ ಚೇತರಿಕೆಯ ಹಿಂದಿನ ಮದ್ದು ಡಾಕ್ಟರ್ ಯತೀಂದ್ರ. ಇದೇನಿದು ಡಾಕ್ಟರ್‌ಗೂ, ಸಿದ್ದರಾಮಯ್ಯ ಅವರ ಮನೆಗೂ, ರಾಜಕೀಯ ಚಲನವಲನಗಳಿಗೂ ಎತ್ತಣಿಂದೆತ್ತ ಸಂಬಂಧ ಎಂದು ಭಾವಿಸಿದ್ದರೆ ಒಮ್ಮೆ ಸಿದ್ದರಾಮಯ್ಯ ಅವರ ಕುಟುಂಬದತ್ತ ಕಣ್ಣು ಹಾಯಿಸಿಬಿಡಿ.

ಸಿದ್ದರಾಮಯ್ಯ ಅವರಿಗೆ ಇಬ್ಬರು ಮಕ್ಕಳು ಎಂದು ಕರ್ನಾಟಕದ ಜನತೆಗೆ ಗೊತ್ತಿರುವ ವಿಷಯವೇ. ಆ ಇಬ್ಬರು ಮಕ್ಕಳಲ್ಲಿ ಒಬ್ಬ ಮಗ ರಾಕೇಶ್ ಸಿದ್ದರಾಮಯ್ಯ ಎಂಬ ಹೆಸರೇನೋ ಬಹಳ ಚಿರಪರಿಚಿತವಾಗಿತ್ತು. ಆದರೆ ಇನ್ನೊಬ್ಬ ಮಗ ಯಾರು, ಅವರ ಹೆಸರೇನು, ಅವರು ಏನು ಮಾಡುತ್ತಿದ್ದಾರೆ. ಈಗ ಎಲ್ಲಿದ್ದಾರೆ, ನೋಡಲು ಹೇಗಿದ್ದಾರೆ. ಮದುವೆಯಾಗಿದೆಯಾ- ಹೀಗೆ ಹಲವಾರು ಪ್ರಶ್ನೆಗಳು ಅಸಂಖ್ಯಾತ ಜನರ ಮನಸ್ಸಿನಲ್ಲಿ ಗಿರಕಿ ಹೊಡೆಯುತ್ತಲೇ ಇದ್ದವು. ಅದಕ್ಕೆಲ್ಲ ಕಾಲ ಉತ್ತರ ನೀಡಿದೆ ಎಂದುಕೊಳ್ಳಬಹುದು.



ಕಳೆದ ತಿಂಗಳು ಬ್ರೆಜಿಲ್‌ನಲ್ಲಿ ಸಿದ್ದರಾಮಯ್ಯ ಅವರ ಹಿರಿಯ ಮಗ ರಾಕೇಶ್ ಸಿದ್ದರಾಮಯ್ಯ ಅವರ ಅನಿರೀಕ್ಷಿತ ಸಾವು ಸಿದ್ದರಾಮಯ್ಯ ಮತ್ತು ಅವರ ಕುಟುಂಬಕ್ಕೆ ಭರಿಸಲಾಗದಷ್ಟು ದುಃಖ ನೀಡಿತ್ತು. ಎದೆಮಟ್ಟಕ್ಕೆ ಬೆಳೆದ ಮಗ, ತಂದೆಯ ದಾರಿಯಲ್ಲೇ ಮಗನ ರಾಜಕೀಯ ನಡೆ, ಶ್ರೀಸಾಮಾನ್ಯರ ಕಷ್ಟಗಳಿಗೆ ಸ್ಪಂದಿಸುತ್ತಾ ತಂದೆಯ ಕೆಲಸಕಾರ್ಯಗಳಲ್ಲಿ ಒತ್ತಾಸೆಯಾಗಿ ನಿಲ್ಲುತ್ತಿದ್ದ ಮಗ ದಿಢೀರನೆ ಇಲ್ಲವಾದರೆ ಯಾವ ತಂದೆಗಾದರೂ ಆ ದುಃಖ ತಡೆದುಕೊಳ್ಳಲು ಸಾಧ್ಯ. ಅದರಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಕೇಶ್ ಅವರನ್ನು ತನ್ನ ರಾಜಕೀಯ ಉತ್ತರಾಧಿಕಾರಿ ಎಂದು ಭಾವಿಸಿದ್ದರು. ಬೆಟ್ಟದಷ್ಟು ಆಶಾಭಾವನೆ ಹೊಂದಿದ್ದರು. ಸಿದ್ದರಾಮಯ್ಯ ಅವರು ಮಗನ ಮೇಲೆ ಎಂತಹ ಪ್ರೀತಿ ಇಟ್ಟಿದ್ದರು ಎಂಬುದು ಜನತೆಗೆ ತಿಳಿದಿತ್ತು.

ಇಂತಹ ಮಗನನ್ನು ಕಳೆದುಕೊಂಡ ನಂತರದ ದಿನಗಳಲ್ಲಿ ಸಿದ್ದರಾಮಯ್ಯ ಅವರಿಗಿಂತ ಹೆಚ್ಚಾಗಿ ರಾಜ್ಯದ ಜನತೆಗೆ ಸಿದ್ದರಾಮಯ್ಯ ಅವರ ರಾಜಕೀಯ ಉತ್ತರಾಧಿಕಾರಿಯ ಬಗ್ಗೆ ಕುತೂಹಲ, ಚಿಂತೆ ಗಾಢವಾಗಿ ಹಬ್ಬಿತ್ತು. ಅದಕ್ಕೆಲ್ಲ ಉತ್ತರ ಎಂಬಂತೆ ಸಿದ್ದರಾಮಯ್ಯ ಅವರ ಎರಡನೆಯ ಪುತ್ರ, ಡಾ.ಯತೀಂದ್ರ ಅವರು ಮೈಸೂರಿನ ತೋಣಚಿಕೊಪ್ಪಲಿನ ಮನೆಯಲ್ಲಿ ಕಾಣಿಸಿಕೊಂಡಿದ್ದಾರೆ.

ಯತೀಂದ್ರ ಸಿದ್ದರಾಮಯ್ಯ



ರಾಕೇಶ್ ಸಿದ್ದರಾಮಯ್ಯ ಅವರು ನಿಧನರಾದಾಗ ಮೈಸೂರು ತಾಲ್ಲೂಕಿನ ಟಿ.ಕಾಟೂರಿನ ಅವರ ಕನಸಿನ ತೋಟದಲ್ಲಿ ಅಂತ್ಯಕ್ರಿಯೆಗೆ ಸಿದ್ಧತೆ ನಡೆಯುತ್ತಿತ್ತು. ಆದರೆ ಸಿದ್ದರಾಮಯ್ಯ ಅವರ ಹುಟ್ಟೂರಿನಲ್ಲಿ ವಾತಾವರಣ ಹೇಗಿದೆ ಎಂದು ನೋಡುವ ಕುತೂಹಲ ಕೆಲವರಲ್ಲಿ ಉಂಟಾಗಿತ್ತು. ಅವರು ಊರಿಗೆ ಕಾಲಿಟ್ಟರೆ ಇಡೀ ಊರು ಚಲನೆ ಕಳೆದುಕೊಂಡ ನಿರ್ಜೀವ ವಸ್ತುವಿನಂತೆ ಕಂಡಿತ್ತು. ಸುಮ್ಮನೆ ಊರಿನ ಓರ್ವ ಹಿರಿಯಜ್ಜನನ್ನು ಮಾತಾಡಿಸಿದರೆ "ಯ್ಯಾನ್ಯೋಳದಪ್ಪ ತಂದ್‌ಗ್ ತಲ್ಮಗ, ಅಪ್ಪ ಯವಾರನ್ನೆಲ್ಲ ನೋಡ್ತಿದ್ದ, ಇನ್ನು ಆ ಹುಟ್ಗ್ ಯಾರ್ ದಿಕ್ಕು? ಇನ್ಯಾನ ರಾಜ್ಕೀಯ? ಸಿದ್ರಾಮಯ್ನ ತಲ್ಗೇ ಮುಗ್ದೋಯ್ತು. ಇಲ್ಲಿ ಇನ್ಯಾರಿದ್ದರು ಅಂತ ಗಂಡು" ಎಂದು ನಿಟ್ಟುಸಿರುಬಿಟ್ಟರು. ಆ ಹಿರಿಯಜ್ಜ ಆಡಿದ ಮಾತು ವಾರಗಟ್ಟಲೇ ಕಿವಿಯಲ್ಲಿ ಗುಂಯ್‌ಗುಡುತ್ತಿತ್ತು. ಈ ಮಾತು ಬರೀ ಆ ಹಿರಿಯಜ್ಜನ ಮಾತಾಗಿರಲಿಲ್ಲ, ಕರ್ನಾಟಕದ ಬಹಳಷ್ಟು ಜನರ ಮಾತಾಗಿತ್ತು.

ರಾಕೇಶ್ ಸಿದ್ದರಾಮಯ್ಯ ಅವರು ನಿಧನರಾದ ಸಂದರ್ಭದಲ್ಲಿ ಅವರ ಅಭಿಮಾನಿಗಳು, ಬೆಂಬಲಿಗರು, ಕಾರ್ಯಕರ್ತರು, ಹಿರಿಕಿರಿ ರಾಜಕಾರಣಿಗಳಲ್ಲಿ ಒಂದು ರೀತಿಯ ಶೂನ್ಯತೆಯ ಭಾವ ಸೃಷ್ಟಿಯಾಗಿತ್ತು. ಯಾಕೆಂದರೆ ರಾಕೇಶ್ ಅವರು ಜಿಲ್ಲೆಯ ರಾಜಕಾರಣದಲ್ಲಿ ತಮ್ಮ ಛಾಪು ಮೂಡಿಸಿದ್ದರು. ವರುಣಾ, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜನತೆಯೊಂದಿಗೆ ಅಪಾರ ಒಡನಾಟ ಹೊಂದಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಲು ಹೋದವರಿಗೆ, ಕಷ್ಟಸುಖ ಹೇಳಿಕೊಳ್ಳಬೇಕೆಂದವರಿಗೆ ರಾಕೇಶ್ ಸುಲಭವಾಗಿ ಸಿಗುತ್ತಿದ್ದರು. ಸ್ಪಂದಿಸುತ್ತಿದ್ದರು. ಇದರಿಂದ ಜನತೆಗೆ ರಾಕೇಶ್ ಬಗ್ಗೆ ಬಹಳ ಪ್ರೀತಿಯಿತ್ತು. ಹಾಗಾಗಿ ರಾಕೇಶ್ ನಿಧನದ ನಂತರ ಕಾರ್ಯಕರ್ತರು, ಸಾಮಾನ್ಯ ಜನತೆ ದಿಕ್ಕು ಕಾಣದಂತೆ ಕುಳಿತಿದ್ದರು.

ಆದರೆ ಒಂದು ವಾರದಿಂದ ತೋಣಚಿಕೊಪ್ಪಲಿನ ನಿವಾಸದಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಕಾಂಗ್ರೆಸ್ ಕಾರ್ಯಕರ್ತರು ಮತ್ತು ಸಿದ್ದರಾಮಯ್ಯ ಅವರ ಕ್ಷೇತ್ರದ ಜನತೆಯಲ್ಲಿ ಹೊಸ ಹುರುಪು ಮೂಡಿಸುತ್ತಿರುವುದಂತೂ ಸತ್ಯ. ಸಿದ್ದರಾಮಯ್ಯ ಅವರ ಎರಡನೆಯ ಪುತ್ರ ಡಾ.ಯತೀಂದ್ರ ಅವರು ತಾಯಿ ಪಾರ್ವತಿಯಂತೆಯೇ ಎಲೆಮರೆಯಾಗಿ ಇದ್ದವರು. ಹಿಂದೆಂದೂ ಸಾರ್ವಜನಿಕವಾಗಿ ಕಾಣಿಸಿಕೊಂಡವರಲ್ಲ, ಸಿದ್ದರಾಮಯ್ಯ ಅವರ ರಾಜಕೀಯ ಕಾರ್ಯಸ್ಥಾನ ಎಂದೇ ಬಿಂಬಿತವಾಗಿರುವ ತೋಣಚಿಕೊಪ್ಪಲಿನ ನಿವಾಸದಲ್ಲೂ ಕಾಣಿಸಿಕೊಂಡಿರಲಿಲ್ಲ. ಆದರೆ ಈಗ ಚಿತ್ರಣ ಬದಲಾಗಿದೆ. ಅಣ್ಣನ ಸಾವಿನ ನೋವಿನಿಂದ ತಹಬದಿಯಾಗಿ ಹೊರಬರುತ್ತಿರುವ ಡಾ.ಯತೀಂದ್ರ ಅವರು ಅಣ್ಣನ ಜಾಗದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಅಣ್ಣನಂತೆಯೇ ಮನೆಗೆ ಬಂದ ಸಾರ್ವಜನಿಕರೊಡನೆ ಮಾತನಾಡುತ್ತಿದ್ದಾರೆ.

ಇದಕ್ಕೆ ಕಾರಣವೂ ಇದೆ. ರಾಕೇಶ್ ಸಾವಿನ ಸಂದರ್ಭದಲ್ಲಿ ಎಂದೆಂದೂ ಕಂಡುಕೇಳರಿಯದ ರೀತಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೋವಿಗೆ ರಾಜ್ಯವೇ ಮಿಡಿದಿತ್ತು. ಅತ್ಯುನ್ನತ ಅಧಿಕಾರದಲ್ಲಿರದ, ಮಂತ್ರಿಮಹೋದಯರೆನಿಸಿಕೊಳ್ಳದ ವ್ಯಕ್ತಿಯೊಬ್ಬನ ಸಾವಿಗೆ ಜನತೆ ಆ ರೀತಿ ಮರುಗಿದ್ದು ನೋಡಿದರೆ ಜನತೆಗೆ ರಾಜಕೀಯ ಮೀರಿ ಸಿದ್ದರಾಮಯ್ಯ ಅವರ ಮೇಲಿರುವ ಪ್ರೀತಿ, ಪುತ್ರನ ಜನಸ್ಪಂದನೆ ಹೇಗಿತ್ತೆಂಬುದು ತಿಳಿಯುತ್ತದೆ. ಹಾಗಾಗಿ ಸಿದ್ದರಾಮಯ್ಯ ಮತ್ತು ಪತ್ನಿ ಪಾರ್ವತಿ ಅವರು ಹಿರಿಯ ಮಗನ ಸ್ಥಾನದಲ್ಲಿ ಕಿರಿಯ ಮಗ ಡಾ.ಯತೀಂದ್ರ ಅವರನ್ನು ಕಾಣಲು ಬಯಸುತ್ತಿದ್ದಾರೆ. ಹಾಗೆ ರಾಜಕೀಯ ಪಾದಾರ್ಪಣೆಗೆ ಸಮ್ಮತಿಯನ್ನೂ ಸೂಚಿಸಿದ್ದಾರೆ ಎಂದು ತಿಳಿದುಬಂದಿದೆ.

ಹಾಗಾಗಿ ಡಾ.ಯತೀಂದ್ರ ಅವರು ತೋಣಚಿಕೊಪ್ಪಲಿನ ನಿವಾಸದಲ್ಲೇ ವಾಸ್ತವ್ಯ ಹೂಡಿದ್ದು, ತಮ್ಮನ್ನು ಭೇಟಿ ಮಾಡಿದ ಜನತೆಯ ಕಷ್ಟಸುಖಗಳನ್ನು ಆಲಿಸುತ್ತಿದ್ದಾರೆ. ಜನರ ನೋವುನಲಿವಿಗೆ ಸ್ಪಂದಿಸುವ ಭರವಸೆಯ ಮಾತುಗಳನ್ನಾಡುತ್ತಿದ್ದಾರೆ. ಅವರನ್ನು ಭೇಟಿ ಮಾಡಿ ಬಂದವರು ಹೇಳುವಂತೆ "ಯತೀಂದ್ರ ಅವರು ವೈದ್ಯ ವೃತ್ತಿಗೆ ತಕ್ಕಂತೆ ಸೌಮ್ಯ ಸ್ವಭಾವದ ವ್ಯಕ್ತಿ, ಜನರನ್ನು ಬಹಳ ಪ್ರೀತಿಯಿಂದ ಮಾತನಾಡಿಸುತ್ತಾರೆ. ರಾಕೇಶ್ ಅವರಂತೆ ಒರಟರಲ್ಲ. ಒಟ್ಟಿನಲ್ಲಿ ಸಿದ್ದರಾಮಯ್ಯ ಅವರ ಹೆಸರು ಉಳಿಸುತ್ತಾರೆ."

ಇದಕ್ಕೆ ಪೂರಕವಾಗಿ ಡಾ.ಯತೀಂದ್ರ ಅವರು ಮೊನ್ನೆ ಮಾತನಾಡುತ್ತಾ "ಜನರು ಅಣ್ಣನ ಮೇಲಿಟ್ಟಿದ್ದ ಪ್ರೀತಿಗೆ ಕೃತಜ್ಞನಾಗಿದ್ದೇನೆ. ಜನತೆಯ ಋಣ ತೀರಿಸಲು ನನ್ನ ತಂದೆ ಮತ್ತು ಕ್ಷೇತ್ರದ ಜನತೆಯ ನಡುವೆ ಕೆಲಸ ಮಾಡುತ್ತೇನೆ" ಎಂದು ಹೇಳಿದ್ದಾರೆ.

ಈ ಎಲ್ಲ ಬೆಳವಣಿಗೆಗಳು ಡಾ.ಯತೀಂದ್ರ ಅವರ ರಾಜಕೀಯ ಪ್ರವೇಶ ಮುನ್ಸೂಚನೆಯನ್ನು ನೀಡುತ್ತಿವೆ. ಯತೀಂದ್ರ ಅವರಿಗೆ ರಾಜಕೀಯದಲ್ಲಿ ಗಟ್ಟಿಗೊಳ್ಳಲು ಮೂರು ಅಡಿಪಾಯಗಳು ಭದ್ರವಾಗಿವೆ. ಒಂದು ಸಿದ್ದರಾಮಯ್ಯ ಅವರ ಹಿನ್ನೆಲೆ, ಎರಡು ಅಣ್ಣ ರಾಕೇಶ್ ಸಿದ್ದರಾಮಯ್ಯ ಅವರು ಕ್ಷೇತ್ರದಲ್ಲಿ ಉಂಟುಮಾಡಿದ್ದ ಸಂಚಲನದ ನೆರಳು, ಮೂರು ವೃತ್ತಿ ಎಂಬುದು ಬಹುತೇಕ ಸ್ಥಳೀಯರ ಅಭಿಪ್ರಾಯ. ಮೊದಲನೆಯದಾಗಿ ರಾಜಕೀಯ ಭಿನ್ನಾಭಿಪ್ರಾಯಗಳು ಏನೇ ಇದ್ದರೂ ವ್ಯಕ್ತಿಗತವಾಗಿ ಸಿದ್ದರಾಮಯ್ಯ ಜನಪರತೆ ಗಳಿಸಿದ್ದಾರೆ. ನೇರನುಡಿ ಸಮಾಜಮುಖಿ ನಡೆಯಿಂದ ಜನಪ್ರಿಯರಾಗಿದ್ದಾರೆ. ಹಾಗಾಗಿಯೇ ಕ್ಷೇತ್ರದ ಜನತೆ ಸಿದ್ದರಾಮಯ್ಯ ಅವರ ಕುಟುಂಬದಿಂದ ಅವರ ಉತ್ತರಾಧಿಕಾರಿ ರಾಜಕಾರಣಿಯನ್ನು ಬಯಸುತ್ತಿದ್ದಾರೆ ಎಂಬುದು. ಎರಡನೆಯದಾಗಿ ರಾಕೇಶ್ ಸಿದ್ದರಾಮಯ್ಯ ಅವರ ಸೀದಾಸಾದ ವ್ಯಕ್ತಿತ್ವ, ಜನತೆಯೊಂದಿಗೆ ಬೆರೆಯುತ್ತಿದ್ದ ಪರಿ. ಇದಕ್ಕೆ ಉದಾಹರಣೆ ರಾಕೇಶ್ ನಿಧನರಾದಾಗ ಸೇರಿದ್ದ ಭಾರೀ ಜನ, ಅಭಿಮಾನಿಯೊಬ್ಬ ರಾಕೇಶ್ ಮುಖ ನೋಡಲಾಗಲಿಲ್ಲವಲ್ಲ ಎಂದು ತಲೆಚಚ್ಚಿಕೊಂಡದ್ದು, ಮೂರನೆಯದು ವೃತ್ತಿ.

ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿ ಸಾಮಾನ್ಯ ಜನತೆ ಉನ್ನತ ವ್ಯಾಸಂಗ ಮಾಡಿದ ವಿದ್ಯಾವಂತರನ್ನು ರಾಜಕೀಯದಲ್ಲಿ ಕಾಣಲು ಇಷ್ಟಪಡುತ್ತಾರೆ. ಅದರಲ್ಲೂ ವೈದ್ಯ ವೃತ್ತಿಯಲ್ಲಿರುವವರ ಸೌಮ್ಯತೆಯನ್ನು, ತಿಳಿವಳಿಕೆಯನ್ನು ಹೆಚ್ಚು ಇಷ್ಟಪಡುತ್ತಾರೆ. ಒಟ್ಟಿನಲ್ಲಿ ಉತ್ತಮ ವಿದ್ಯಾವಂತ, ಯುವ ರಾಜಕಾರಣಿ ಬೇಕು ಎಂಬುದು ಸಾಮಾನ್ಯ ಜನರ ಇಚ್ಛೆ. ಇದಕ್ಕೆ ಉದಾಹರಣೆ ದೆಹಲಿ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷದ ಅಭೂತಪೂರ್ವ ಗೆಲುವು. ಹಾಗಾಗಿ ಡಾ.ಯತೀಂದ್ರ ಅವರ ವೈದ್ಯ ವೃತ್ತಿ ಹಿನ್ನೆಲೆ ಅವರ ರಾಜಕೀಯದಲ್ಲಿ ಕೆಲಸ ಮಾಡುತ್ತವೆ. ಇವುಗಳನ್ನು ಸಮರ್ಥವಾಗಿ ಬಳಸಿಕೊಂಡರೆ ಯಾವುದೇ ಅನುಮಾನವಿಲ್ಲದೇ ಸಿದ್ದರಾಮಯ್ಯ ಅವರ ರಾಜಕೀಯ ಉತ್ತರಾಧಿಕಾರಿಯಾಗಿ, ಸಿದ್ದರಾಮಯ್ಯ ಅವರ ಮುಂದಿನ ತಲೆಮಾರಿನವರಿಗೂ ಜನಪರ ರಾಜಕೀಯದ [illegible] [illegible]ಬಹುದು.

■ ರವಿತಶಿ

ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದಲಿತರ

"ಬ್ರಿಟಿಷರ ಕಡತಗಳನ್ನು ಹೊರತೆಗೆಯುವುದರಿಂದ ನಾವು ಭಾರತದ ಇತಿಹಾಸವನ್ನು ಹೊಸಬೆಳಕಿನಲ್ಲಿ ನೋಡುವುದು ಸಾಧ್ಯ" ಎಂದು ಬಾಬಾಸಾಹೇಬ್ ಅಂಬೇಡ್ಕರ್ ಹೇಳಿದ್ದರು. ಅವರು ಕೊರೆಗಾವ್ ಯುದ್ಧವನ್ನು ಬ್ರಿಟಿಷ್ ಕಡತಗಳಿಂದ ಹೊರತೆಗೆದು ಸ್ವತಃ ಆ ಕೆಲಸ ಮಾಡಿಟ್ಟು ಹೋಗಿದ್ದಾರೆ. ಪ್ರಶ್ನೆ ಏನೆಂದರೆ, ತಳಸಮುದಾಯಗಳ ಶ್ರಮ ಚರಿತ್ರೆಯನ್ನು ಬರೆಯಲು ತಳಸಮುದಾಯದವರೇ ಸಿದ್ಧರಾಗಬೇಕೆ ಎಂಬುದು. ಏಕೆಂದರೆ ಇಲ್ಲಿಯವರೆಗೆ ಬಂದಿರುವ ಇತಿಹಾಸದ ಕುರಿತ ಸಾಹಿತ್ಯಗಳೆಲ್ಲವೂ ಸಾಮ್ರಾಜ್ಯ ರಾಜ ಮತ್ತು ಮಂತ್ರಿಗಳ ಸುತ್ತ ಸುತ್ತುತ್ತವೆಯೇ ಹೊರತು ಆ ಸಾಮ್ರಾಜ್ಯದಲ್ಲಿ ಬಹುಸಂಖ್ಯಾತರಾಗಿದ್ದ ದುಡಿವ ಜನರ, ಹೋರಾಡುವ ಸೈನಿಕರನ್ನು ಮುಟ್ಟಲೂ ಹಿಂಜರಿಯುತ್ತವೆ. ಇದನ್ನು ಒಂದು ರೀತಿಯ 'ಅಕ್ಷರ ಅಸ್ಪೃಶ್ಯತೆ' ಎನ್ನಬಹುದು. ಇಂತಹ ಕಾಲಘಟ್ಟದಲ್ಲಿ ಅಂಬೇಡ್ಕರರು ಮಹಾರ್ ರೆಜಿಮೆಂಟಿನ ಸಾಧನೆಯನ್ನು ಜಗತ್ತಿಗೆ ಪರಿಚಯಿಸಿದ್ದರು. ಇಂದಿಗೂ ಕೂಡ ಭಾರತದ ಸೈನ್ಯದಲ್ಲಿ ಮಹಾರ್ ಮತ್ತು ಮಾಂಗ್ ರೆಜಿಮೆಂಟಿನ ಸೈನಿಕರು ತಮ್ಮ ಹೆಗ್ಗುರುತನ್ನು ಮೂಡಿಸುತ್ತಿದ್ದಾರೆ.



ಇತಿಹಾಸಜ್ಞ ಮೋಹನ್ ದಾಸ್ ನಾಮಿಷ್ರೆಯವರು "ಸ್ವಾತಂತ್ರ್ಯ ಹೋರಾಟದ ಸಾಹಿತ್ಯವನ್ನು ಮಹಾಹತು ಪ್ರಜ್ಞೆಯ ಬ್ರಿಟಿಷರು ಬರೆದಿದ್ದಾರೆ ಅಥವಾ ಭಾರತೀಯ ಹಿಂದೂ ಮೇಲ್ಜಾತಿಗಳ ಪ್ರಾಮುಖ್ಯತೆಯನ್ನು ಸಾರುವ ಮೇಲ್ವರ್ಗಗಳು ಬರೆದಿವೆ. ಆದರೆ ಈ ದೇಶದ ಬಹುಜನರಾದ ದಲಿತರು, ಆದಿವಾಸಿಗಳು ಮತ್ತು ಹಿಂದುಳಿದ ಜನರ ಕೊಡುಗೆಯನ್ನು ಕೈಬಿಟ್ಟಿದ್ದಾರೆ" ಎಂದು ಹೇಳಿರುವುದು ಅಕ್ಷರಶಃ ಸತ್ಯ. ಏಕೆಂದರೆ ನಮ್ಮ ಶಾಲೆಗಳಲ್ಲಿನ ಪಠ್ಯಗಳು, ಪುಸ್ತಕ ಮಳಿಗೆಯೊಳಗಿನ ಸಾಲು ಸಾಲು ಇತಿಹಾಸ ಪುಸ್ತಕಗಳು ನಮಗೆ ಶತಮಾನದಿಂದ ತಿಳಿಸಿರುವುದು ಇದನ್ನೆ. ಇದಕ್ಕೆ ಎಡಪಂಥೀಯ ಚಿಂತಕರ ಬರಹಗಳು ಅಪವಾದವಾದರೂ ಅವುಗಳೂ ಸಮಗ್ರವಲ್ಲ, ದಲಿತರ, ಆದಿವಾಸಿಗಳ ಚರಿತ್ರೆ ಅವರಿಗೆ ಜಾತಿಯ ಚರಿತ್ರೆ ಎನಿಸಿರಬೇಕು.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಿಪಾಯಿ ದಂಗೆ ಪ್ರಮುಖ ಪಾತ್ರವನ್ನು ವಹಿಸಿದೆ. ಅದನ್ನು ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದೇ ಬಣ್ಣಿಸಲಾಗುತ್ತದೆ. ಅದನ್ನು ಬಣ್ಣಿಸುವ ಗ್ರಂಥಗಳು ದೇಶದ ಉದ್ದಗಲಕ್ಕೂ ನಮಗೆ ವಿಫುಲವಾಗಿ ಸಿಗುತ್ತವೆ. ಅದನ್ನು ಓದಿದ ಪ್ರತಿಯೊಬ್ಬರಿಗೂ ಮಂಗಲ್ ಪಾಂಡೆ, ತಾತ್ಯಾ ಟೋಪಿ, ನಾನಾ ಸಾಹೇಬ್, ಝಾನ್ಸಿ ರಾಣಿ ಲಕ್ಷ್ಮಿಬಾಯಿ ಮುಂತಾದವರು ಮಾತ್ರ ಹೀರೋ, ಹೀರೋಯಿನ್ ಗಳಂತೆ ನಮಗೆ ಕಾಣುತ್ತಾರೆ. ಖಂಡಿತವಾಗಿಯೂ ಅವರು ವೀರ ವೀರಾಂಗನೆಯರೇ. ಆದರೆ ಅವರನ್ನೂ ಮೀರಿಸುವ ಪರಾಕ್ರಮಿಗಳು ಇದ್ದರು. ದೇಶಕ್ಕಾಗಿ ಪ್ರಾಣ ತೆತ್ತರು. ಅವರ ಹೆಸರುಗಳು ನಮಗೆ ಯಾವ ಪಠ್ಯದಲ್ಲಿಯೂ ಕಾಣಸಿಗುವುದಿಲ್ಲ, ನಾವೆಲ್ಲಿಯೂ ಕೇಳಿರುವುದಿಲ್ಲ, ಆದರೆ ದಲಿತ ಜಾನಪದ ಅವರ ಹೆಸರನ್ನು ತನ್ನ ಎದೆಯಲ್ಲಿಟ್ಟುಕೊಂಡು ಬರುತ್ತಿದೆ. ಅವರನ್ನು ನೆನೆದು ಹಾಡುತ್ತದೆ. ಬಾಬಾ ಎಂದು ಪೂಜಿಸುತ್ತದೆ. ವಿರಾಂಗನೆ ಎಂದು ಕಥೆ ಹೇಳುತ್ತದೆ. ಅವರ ಪ್ರತಿಮೆಗಳನ್ನು ಸ್ಥಾಪಿಸಿ ವರ್ಷಾಚರಣೆ ಮಾಡುತ್ತದೆ. ಹುತಾತ್ಮ ದಿನಾಚರಣೆಯನ್ನು ಮಾಡುತ್ತಿದೆ.

ಮತಾದಿನ್ ಭಂಗಿ, ಝಲ್ಕಾರಿ ಬಾಯಿ, ಉದಾ ದೇವಿ, ಪೂರನ್ ಕೋರಿ, ಬಾವ್ ಭಕ್ಷಿ, ಚೇತ್ರಾಮ್ ಜಾಟವ್, ಬಲ್ಲುರಾಮ್ ಮೆಹ್ತರ್, ಬಂಕೆ ಚಮ್ಮಾರ್, ವೀರಾ ಪಾಸಿ, ಮಕ್ಕಾ ಪಾಸಿ, ಮಹಾವೀರಿ ದೇವಿ, ಶಬೀದ್ ಬಾಬಾ, ಸಂಗ್ರಾಮ್ ಸಿಂಗ್, ರಂಜಿತ್ ರಾಮ್ ಮುಂತಾದ ಇನ್ನೂ ಎಷ್ಟೋ ತಳ ಸಮುದಾಯದ ದಿಟ್ಟ ಜೀವಗಳು ಬ್ರಿಟಿಷರ ವಿರುದ್ಧ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮ ಪ್ರಾಣವನ್ನೇ ಮುಡಿಪಾಗಿಟ್ಟು ಹುತಾತ್ಮರಾಗಿದ್ದಾರೆ. ಒಂದು ಹಳ್ಳಿಗೆ


ಮತಾದಿನ್ ಭಂಗಿ

ಹಳ್ಳಿಯೇ ಬ್ರಿಟಿಷರ ವಿರುದ್ಧ ಹೋರಾಡಿ ಮಡಿದಿದೆ. ದುರಂತವೆಂದರೆ ಇವರೆಲ್ಲರೂ ದಲಿತ, ಆದಿವಾಸಿ ಜನಾಂಗದವರಾಗಿರುವುದರಿಂದ ಇತಿಹಾಸದ ಪುಟಗಳಲ್ಲಿಯೇ ಇವರ ಅಂತ್ಯಸಂಸ್ಕಾರ ಮಾಡಲಾಗಿದೆ. ಇವರ ಇರುವಿಕೆಯನ್ನೇ ಸಮಾಧಿಗೊಳಿಸಲಾಗಿದೆ. ಸಮಾಜದಲ್ಲಿ ಅಸಡ್ಡೆಗೊಳಗಾದವರನ್ನು ಇತಿಹಾಸದಲ್ಲಿಯೂ ಅಸಡ್ಡೆ ಮಾಡಲಾಗಿದೆ.

ಇಂತಹ ಪರಿಸ್ಥಿತಿಯಲ್ಲಿ ಉತ್ತರ ಭಾರತದಲ್ಲಿ ನಡೆದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದಲಿತರ ಕೊಡುಗೆ ತಿಳಿಯುವುದು ಅತ್ಯವಶ್ಯಕ.

ಮತಾದಿನ್ ಭಂಗಿ ಸಿಪಾಯಿದಂಗೆಯ ಜನಕ

1857 ರ ಸಿಪಾಯಿ ಧಂಗೆ ಭುಗಿಲೆದ್ದದ್ದು ಝಾನ್ಸಿಯ ಬರಾಖ್‌ಪುರದಲ್ಲಿ. ಮಂಗಲ್ ಪಾಂಡೆ ಇಲ್ಲಿನ ಬ್ರಿಟಿಷ್ ಸೈನ್ಯದೊಳಗಿನ ಸೈನಿಕನಾಗಿದ್ದ. ನಾವೆಲ್ಲರೂ ತಿಳಿದಿರುವಂತೆ ಮಂಗಲ್ ಪಾಂಡೆ ಸಿಪಾಯಿದಂಗೆಯ ಜನಕ. ಬ್ರಿಟಿಷರ ವಿರುದ್ಧ ಮೊದಲು ದಂಗೆ ಎದ್ದವನು. ಆದರೆ ದಲಿತರ ಜಾನಪದ ಬೇರೆಯದ್ದೇ ಇತಿಹಾಸವನ್ನು ತನ್ನ ಒಡಲಲ್ಲಿ ತುಂಬಿಕೊಂಡಿದೆ.

ಒಮ್ಮೆ ಸಿಪಾಯಿ ಮಂಗಲ್ ಪಾಂಡೆಗೆ ದಾಹ ಉಂಟಾಗಿ ನೀರು ತರಲು ಸಹ ಸೈನಿಕನಿಗೆ ಹೇಳುತ್ತಾನೆ. ಆದರೆ ಅವನ ದಾಹವನ್ನು ತಿಳಿದ ಮತಾದಿನ್ ಭಂಗಿ ನೀರು ತಂದು ಕೊಟ್ಟಾಗ ಮಂಗಲ್ ಪಾಂಡೆ ನಿರಾಕರಿಸುತ್ತಾನೆ. ಅದಕ್ಕೆ ಕಾರಣ ಮತಾದಿನ್ ಭಂಗಿ ಒಬ್ಬ ಅಸ್ಪೃಶ್ಯ. ಬರಾಖ್‌ಪುರದ ಕಾಡತೂಸುಗಳ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಮತಾದಿನ್ ಭಂಗಿಗೆ ಅತಿಯಾದ ವೇದನೆ ಉಂಟಾಗಿ ಕೋಪದಿಂದ "ನಿನಗೆ ಬ್ರಾಹ್ಮಣನ ಮಗನೆಂಬು ಅತಿಯಾದ ಗೌರವವಲ್ಲವೇ. ಆದರೆ ನೀನು ಹಲ್ಲಿನಿಂದ ಕಚ್ಚಿ ಬಂದೂಕಿಗೆ ತೂರಿಸುವ ಕಾಡತೂಸುಗಳಿಗೆ ಹಸು ಮತ್ತು ಹಂದಿಯ ಕೊಬ್ಬನ್ನು ಲೇಪಿಸಲಾಗಿದೆ. ನಿನ್ನ ಜಾತಿ ಮತ್ತು ಧರ್ಮ ಈಗೇನಾಯಿತು? ಧಿಕ್ಕಾರ ನಿನ್ನ ಬ್ರಾಹ್ಮಣ್ಯಕ್ಕೆ" ಎಂದು ಬಿಡುತ್ತಾನೆ. ಇದನ್ನು ತಿಳಿದ ಮಂಗಲ್ ಪಾಂಡೆ ಮಾರ್ಚ್ 1, 1851 ರಂದು ಬ್ರಿಟಿಷರ ಮೇಲೆ ಗುಂಡಿನ ದಾಳಿ ಮಾಡುತ್ತಾನೆ. ಅವನನ್ನು ಬಂಧಿಸುವ ಬ್ರಿಟಿಷರು ಮೇ 10, 1857 ರಂದು ನೇಣಿಗೇರಿಸುತ್ತಾರೆ. ಮತಾದಿನ್ ಭಂಗಿಯ ಮೇಲೆ ದೇಶದ್ರೋಹದ ಕೇಸು ದಾಖಲಿಸಿ ಜೈಲಿಗಟ್ಟಲಾಗುತ್ತದೆ. ಈ ರೀತಿ ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮಕ್ಕೂ ಭಾರತದ ನೀಚ ಪದ್ಧತಿಯಾದ ಅಸ್ಪೃಶ್ಯತೆಗೂ ಸಂಬಂಧವಿದೆ. ಹಾಗಾಗಿ 'ಸಿಪಾಯಿದಂಗೆಯ ಜನಕ ಮತಾದಿನ್ ಭಂಗಿ'ಯಾಗುತ್ತಾನೆ. ದಲಿತರು ಇದನ್ನೇ ನಂಬುತ್ತಾರೆ. ಅಷ್ಟೇ ಅಲ್ಲ ಮಂಗಲ್ ಪಾಂಡೆಗಿಂತ ಮೊದಲೇ ಮತಾದಿನ್ ಭಂಗಿಯನ್ನು ಗಲ್ಲಿಗೇರಿಸಲಾಯಿತು ಎಂಬ ನಂಬಿಕೆಯೂ ಉತ್ತರ ಭಾರತದ ದಲಿತರಲ್ಲಿದೆ.

ಮತಾದಿನ್ ಭಂಗಿಯ ಬಗ್ಗೆ ದಲಿತರು ಹಲವಾರು ಹಾಡುಗಳನ್ನು ಹಾಡುತ್ತಾರೆ. ದಲಿತ ಭಾರತದ ಪತ್ರಿಕೆಗಳು ಅವನ ಬಗ್ಗೆ ವಿಫುಲವಾದ ಅಧ್ಯಯನ ನಡೆಸಿ ಭಾರತಕ್ಕೆ ಪರಿಚಯಿಸುವ ಕೆಲಸ ಮಾಡಿವೆ.

ಬಲ್ಲುರಾಮ್ ಮೆಹ್ತರ್, ಚೇತ್ರಾಮ್ ಜಾಟವ್ ಮತ್ತು ಬಂಕೆ ಚಮ್ಮಾರ್

ಅದು ಮೇ 26, 1857. ಸಿಪಾಯಿ ದಂಗೆಯ ಸುದ್ದಿ ಉತ್ತರ ಭಾರತದ ವಿವಿಧ ಪ್ರದೇಶಗಳಿಗೆ ಹರಡಿತು. ಬಹುಬೇಗನೇ ಇಟಾ ಜಿಲ್ಲೆಯ ಸೋರೊ ವಲಯಕ್ಕೂ ಬಿಸಿ ಮುಟ್ಟಿತು. ಅಲ್ಲಿ ಬ್ರಿಟಿಷ್ ಅಧಿಕಾರಿ ಫಿಲಿಪ್ ದಂಗೆಯನ್ನು ನಿಲ್ಲಿಸುವ ಪ್ರಯತ್ನದಲ್ಲಿ ಸಫಲನಾಗುತ್ತಿದ್ದಾಗ ಸೋರೊ ಪ್ರದೇಶದ ದಂಗೆಯನ್ನು ಮುನ್ನಡೆಸಿದವರೇ ಬಲ್ಲುರಾಮ್ ಮೆಹ್ತರ್ ಮತ್ತು ಚೇತ್ರಾಮ್ ಜಾಟವ್.



ಇವರಿಬ್ಬರೂ ದಂಗೆಯ ಮುಂಚೂಣಿಯಲ್ಲಿದ್ದವರು. ಆದರೆ ಇತಿಹಾಸ ನಮಗೆ ಸದಾಶಿವ ಮೆಹ್ರೆ ಮತ್ತು ಚತುರ್ಭುಜ ವೈಶ್ಯ ಇವರಿಬ್ಬರನ್ನು ಮಾತ್ರ ಪರಿಚಯಿಸಿದೆ. ಫಿಲಿಪ್ ಈ ದಂಗೆಯನ್ನು ಅಡಗಿಸಲು ಬಲ್ಲುರಾಮ್ ಮತ್ತು ಚೇತ್ರಾಮ್ ಇಬ್ಬರನ್ನೂ ಸೆರೆಹಿಡಿದು ಕಾಸ್‌ಗಂಜ್ ಪ್ರದೇಶದ ಮರಕ್ಕೆ ಕಟ್ಟಿಹಾಕಿ ಬಂದೂಕಿನಿಂದ ಸುಡುತ್ತಾನೆ. ಮಿಕ್ಕವರನ್ನು ಅದೇ ಮರಕ್ಕೆ ನೇಣಿಗೇರಿಸುತ್ತಾನೆ.

ಬಂಕೆ ಚಮ್ಮಾರ್ ಜೌನ್‌ಪುರದ ಮಚಲಿ ಶಹರ್‌ನ ಸಿಪಾಯಿ. ಬಾರಾಖ್‌ಪುರದಲ್ಲಿ ಸಿಪಾಯಿ ದಂಗೆ ಎದ್ದಾಗ ತಾನೂ ಅದಕ್ಕೆ ಕೈಜೋಡಿಸಿ ತನ್ನ ಪ್ರದೇಶದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ ಪರಾಕ್ರಮಿ. ಸಿಪಾಯಿ ದಂಗೆ ವಿಫಲವಾಗಿ ಕೊನೆಗೊಳ್ಳುವವರೆಗೂ ಈತ ಬ್ರಿಟಿಷರಿಗೆ ಚಳ್ಳೆ ಹಣ್ಣು ತಿನಿಸಿದವನು. ಸಿಪಾಯಿ ದಂಗೆ ವಿಫಲವಾದ ನಂತರ ಬಂಕೆ ಚಮ್ಮಾರ್ ಮತ್ತವನ 18 ಸಂಗಡಿಗರನ್ನು ದೇಶದ್ರೋಹಿಗಳೆಂದು ಪರಿಗಣಿಸಿ ನೇಣಿಗೇರಿಸಲಾಯಿತು.

ಝಲ್ಕಾರಿ ಬಾಯಿ ಝಾನ್ಸಿಯ ವೀರಾಂಗನೆ

ಝಾನ್ಸಿ ಎಂದೊಡನೆ ನೆನಪಾಗುವುದು ರಾಣಿ ಲಕ್ಷ್ಮಿಬಾಯಿ. ಬುಂದೇಲ್ ಖಂಡದ ದಲಿತರು ಇಂದಿಗೂ ತಮ್ಮ ಜಾನಪದದಲ್ಲಿ ವೀರಾಂಗನೆಯಾಗಿ ಕಾಪಿಟ್ಟುಕೊಂಡು ಬಂದಿರುವುದು ರಾಣಿ ಲಕ್ಷ್ಮಿಬಾಯಿಯನ್ನಲ್ಲ ಬದಲಾಗಿ ಝಲ್ಕಾರಿ ಬಾಯಿಯನ್ನ. ರಾಜಕುಮಾರ್ ಕೋರಿ ಎಂಬ ಜಾನಪದ ಹಾಡುಗಾರ ಝಲ್ಕಾರಿ ಬಾಯಿಯನ್ನು ದುರ್ಗಾ ದೇವತೆಗೆ ಹೋಲಿಸುತ್ತಾನೆ.

ಝಲ್ಕಾರಿ ಬಾಯಿ ಚಿಕ್ಕಂದಿನಲ್ಲಿಯೇ ದನ ಕಾಯುವಾಗ ಚಿರತೆಯನ್ನು ದೊಣ್ಣೆಯಿಂದ ಹೊಡೆದು ಕೊಂದಿದ್ದಳಂತೆ. ಮುಂದೆ ಝಲ್ಕಾರಿ ಬಾಯಿ ರಾಣಿ ಲಕ್ಷ್ಮಿಬಾಯಿಯ ಸೇವಕಳಾದಳು. ರಾಣಿಯ ಜೊತೆ ಇದ್ದ ಕಾರಣ ಕುದುರೆ ಸವಾರಿ ಹಾಗೂ ಯುದ್ಧ ಕಲೆಗಳನ್ನು ಅರಿತಿದ್ದಳು. ಆ ಕಾರಣಕ್ಕಾಗಿ ರಾಣಿಯ ಆಪ್ತ ಮಹಿಳಾ ಸೇನೆಯ ಮುಖ್ಯಸ್ಥಳಾಗಿದ್ದಳು. ಆಶ್ಚರ್ಯವೆಂದರೆ ಝಲ್ಕಾರಿ ಬಾಯಿ ರಾಣಿ ಲಕ್ಷ್ಮಿಬಾಯಿಯನ್ನು ಹೋಲುತ್ತಿದ್ದಳು.

ಝಾನ್ಸಿಗಾಗಿ ನಡೆದ ಯುದ್ಧದಲ್ಲಿ ಬ್ರಿಟಿಷ್ ಜನರಲ್ ರೋಸ್ ಸೇನೆ ಮೇಲುಗೈ ಸಾಧಿಸುತ್ತದೆ. ಸ್ಥಳೀಯ ಭಾರತೀಯನ ಕುತಂತ್ರದಿಂದ ಬ್ರಿಟಿಷ್ ಸೇನೆ ಝಾನ್ಸಿ ಕೋಟೆಯನ್ನು ಪ್ರವೇಶಿಸಿದಾಗ ರಾಣಿಯ ವೇಷ ತೊಟ್ಟು ಝಲ್ಕಾರಿ ಬಾಯಿ ಬ್ರಿಟಿಷರ ವಿರುದ್ಧ ಹೋರಾಡುತ್ತಾಳೆ. ಇದನ್ನು ತಿಳಿಯದ ಬ್ರಿಟಿಷರು ಝಲ್ಕಾರಿ ಬಾಯಿಯನ್ನು ಬಂಧಿಸುತ್ತಾರೆ. ಹಾಗಾಗಿ ರಾಣಿ ಲಕ್ಷ್ಮಿಬಾಯಿ ತಪ್ಪಿಸಿಕೊಂಡು ಪ್ರತಾಪಗಡ ಎಸ್ಟೇಟಿನಲ್ಲಿ ಕಾಲಕಳೆಯುವಂತಾಗಿ ಮುಂದಿನ ಯುದ್ಧಕ್ಕೆ ಅಣಿಯಾಗುತ್ತಾಳೆ. ಬ್ರಿಟಿಷರು ಝಲ್ಕಾರಿ ಬಾಯಿಯನ್ನು ಗುರುತಿಸಿ ಬಿಡುಗಡೆ ಮಾಡಿದರಾದರೂ ನಂತರ ನಡೆದ ಯುದ್ಧದಲ್ಲಿ ಝಲ್ಕಾರಿ ಬಾಯಿ ವೀರ ಮರಣವನ್ನಪ್ಪುತ್ತಾಳೆ.

ಝಲ್ಕಾರಿ ಬಾಯಿಯ ತ್ಯಾಗವನ್ನು ನೆನೆದು ಅವಳ ಬಗ್ಗೆ ಜೀವನಚರಿತ್ರೆ ಬರೆಯಲಾಗಿದೆ. ವೀರಾಂಗನೆ ಮೆಮೋರಿಯಲ್ ಟ್ರಸ್ಟ್ ನಡೆಸಲಾಗುತ್ತಿದೆ. ಝಾನ್ಸಿಯ ಪಾಲಿಟೆಕ್ನಿಕ್ ಕಾಲೇಜಿಗೆ ಝಲ್ಕಾರಿ ಬಾಯಿ ಹೆಸರಿಡಲಾಗಿದೆ. ಭಾರತ ಸರ್ಕಾರ 4 ರೂಪಾಯಿಯ ಅಂಚೆಚೀಟಿಯನ್ನು ಝಲ್ಕಾರಿಯ ಹೆಸರಿನಲ್ಲಿ ತಂದಿದೆ.

ಹರಬೋಲ ಜನಾಂಗ ಬ್ರಿಟಿಷರ ನಿದ್ದೆಗೆಡಿಸಿದವರು

ಹರಬೋಲಗಳು ಸಹ ವರ್ಣವ್ಯವಸ್ಥೆಯಿಂದ ಹೊರಗಿಟ್ಟಿರುವ ದಲಿತ ಆದಿವಾಸಿ ಜನಾಂಗ. 1857 ರ ಸಿಪಾಯಿ ದಂಗೆಯನ್ನು ಒಂದು ಪ್ರದೇಶದಿಂದ ಮತ್ತೊಂದು



ಪ್ರದೇಶಕ್ಕೆ ಪ್ರಚಾರ ಮಾಡುವಲ್ಲಿ ಇವರ ಪಾತ್ರ ದೊಡ್ಡದು. ಬುಂದೇಲ್ ಖಂಡ ಪ್ರದೇಶದ [illegible] ಮಾದಾರಿ, ಬೆವಿಯಾ, ಸೂತ್, ಬಾಜಿಗಾರ್, [illegible] ಎಂದೆಲ್ಲಾ ಕರೆಯಲಾಗುತ್ತದೆ. ಇವರ ಸಹಾಯದಿ[illegible] ಝಾನ್ಸಿ ರಾಣಿ ಲಕ್ಷ್ಮಿಬಾಯಿ ಗೂಢಚಾರಿಕೆ [illegible] ಪಡೆಯುತ್ತಿದ್ದಳು. ಬ್ರಿಟಿಷ್ ಆಡಳಿತ ಇವರಲ್ಲಿ ಹಲ[illegible] ದೇಶದ್ರೋಹ ಪ್ರಕರಣದಲ್ಲಿ ಬಂಧಿಸಿ ಜೈಲಿಗಟ್ಟಿತು[illegible]

ವೀರಾ ಪಾಸಿ

ವೀರಾ ಪಾಸಿ 'ಪಾಸಿ' ಜನಾಂಗಕ್ಕೆ ಸೇರಿದ [illegible] ಇವನು ಉತ್ತರಪ್ರದೇಶದ ರಾಯ್‌ಬರೇಲಿಯ ಮು[illegible] ಮಾವ್ ಪ್ರಾಂತ್ಯದ ಮಹಾರಾಜ ಬೇನಿ ಮಾಧವ್‌ಸಿ[illegible] ಆಪ್ತ ರಕ್ಷಕನಾಗಿದ್ದನು. ಸಿಪಾಯಿ ದಂಗೆಯ ಫಲ[illegible] ಬ್ರಿಟಿಷರು ರಾಜ ಬೇನಿ ಮಾಧವ್‌ಸಿಂಗ್‌ನನ್ನು ಬಂಧಿ[illegible] ವೀರಾ ಪಾಸಿ ಜೈಲಿಗೇ ನುಗ್ಗಿ ರಾಜನನ್ನು ಜೈಲಿ[illegible] ತಪ್ಪಿಸಿಕೊಳ್ಳುವಂತೆ ಮಾಡುತ್ತಾನೆ. ಇದಕ್ಕೆ ಕೋಪಗೆ[illegible] ಬ್ರಿಟಿಷ್ ಆಡಳಿತ ವೀರಾ ಪಾಸಿಯನ್ನು ಹಿಡಿದುಕೊಟ್ಟ[illegible] 50 ಸಾವಿರ ನಗದು ಘೋಷಣೆ ಮಾಡಿರುತ್ತದೆ. [illegible] ಜೀವಂತವಾಗಿ ಅಥವಾ ಶವವಾಗಿಯಾದ[illegible] ಹಿಡಿದುಕೊಟ್ಟವರಿಗೆ. ಆದರೆ ಬ್ರಿಟಿಷರ ಕೈಯಲ್ಲಿ [illegible] ಪಾಸಿಯನ್ನು ಕೊನೆಯವರೆಗೂ ಸೆರೆಹಿಡಿಯಲಾಗ[illegible]

ಈ 'ಪಾಸಿ' ಎಂಬ ದಲಿತ ಜನಾಂಗ ಪರಾ[illegible] ಜನಾಂಗ. ಜುಲೈ 20, 1857 ರಂದು ಜನರಲ್ [illegible] ಹ್ಯಾವ್ ಲಾಕ್ ನೇತೃತ್ವದ ಸೇನೆ ಲಖನೌ [illegible] ಮಗರವಾರ ಹಳ್ಳಿಯ ಬಳಿ ಬಂದಾಗ ಇದ್ದಕ್ಕಿದ್ದಂತೆ [illegible] ಗುಡಿಸಲುಗಳಿಂದ ಹೊರಬಂದ 2000 ಪಾಸಿ [illegible] ಬ್ರಿಟಿಷ್ ಸೈನ್ಯದ ಮೇಲೆ ಕಲ್ಲು ತೂರಿದ್ದರು. ಕಲ್ಲಿನ ಹೊ[illegible] ನಲುಗಿಹೋದ ಬ್ರಿಟಿಷ್ ಸೇನೆ ಕಾನ್ಪುರ ಕಂಟೋನ್‌ಮೆ[illegible] ಮರಳಿತು. ಆದರೆ ಆಗಸ್ಟ್ 1857 ರಲ್ಲಿ ಮತ್ತೆ ಮ[illegible] ಬ್ರಿಟಿಷ್ ಸುಸಜ್ಜಿತ ಸೇನೆಯನ್ನು ಎದುರಿಸಿದ ಪಾಸಿಗಳ[illegible] ವೀರ ಮರಣವನ್ನಪ್ಪಿದರು.

ಉತ್ತರ ಪ್ರದೇಶದ ಮಗರವಾರ ಊರಿನ [illegible] ನದಿಯ ದಂಡೆಯ ಮೇಲಿರುವ 'ಬನಿ' [illegible] ಊರಿನಲ್ಲಿಯೂ ಪಾಸಿ ಜನಾಂಗ ವಾಸವಾಗಿತ್ತು. ಅಲ್ಲಿ[illegible] ಸಹ ಬ್ರಿಟಿಷ್ ಸೇನೆ ಬಲವಾದ ಪ್ರತಿರೋಧ[illegible] ಎದುರಿಸಬೇಕಾಯಿತು. ಆದರೆ ಬೆಂಕಿಯುಂಡೆಗ[illegible] ತೂರುವುದರ ಮೂಲಕ ಪಾಸಿಗಳನ್ನು ಹಿಮ್ಮೆಟ್ಟಿಸಿ[illegible] ಪಾಸಿಗಳ ಇಡೀ ಊರನ್ನೇ ನಿರ್ನಾಮ ಮಾಡಿತು. [illegible] ಪಾಸಿಗಳು ತಮ್ಮ ಊರನ್ನು ಮತ್ತೇ ನಿರ್ಮಾ[illegible] ಮಾಡಿಕೊಂಡು ಬ್ರಿಟಿಷರಿಗಾಗಿ ಕಾಯುತ್ತಿದ್ದರಂತೆ. [illegible] ಪ್ರಖ್ಯಾತ ಜಾನಪದವೊಂದು ಹೀಗೆ ಹಾಡುತ್ತದೆ.

"ಹಳ್ಳಿ ಬನಿ ಕಟ್ಟಿದೆವು ಅವರು ಕೆಡವಿದರು
ಪುನಃ ಕಟ್ಟಿದೆವು ಪುನಃ ನಾಶಗೈದರು
ಬ್ರಿಟಿಷರ ಬೆಂಕಿಯುಂಡೆಗಳು ಹಳ್ಳಿಯನ್ನು ಸ್ಫೋಟಿ[illegible]
ಮತ್ತೆ ಬನಿ ಕಟ್ಟಿದೆವು ಹಾಗೂ ಅದು ಬನಿಯಾಗಿ
ಉಳಿಯಿತು."

ಪಾಸಿ ಜನಾಂಗದ ಪರಾಕ್ರಮ ತಾಳಲಾರದೇ ಬ್ರಿಟಿ[illegible] ಕೊನೆಗೆ ಆ ಪ್ರದೇಶದಲ್ಲಿ ಕೋಟೆಯನ್ನು ನಿರ್ಮಿಸಿಕೊಂ[illegible]

ಮಕ್ಕಾ ಪಾಸಿ

ಮಕ್ಕಾ ಪಾಸಿ ದಲಿತ ವೀರಾಂಗನೆ ಉದಾದೇವಿ[illegible] ಗಂಡ. ಜೂನ್ 10, 1857 ರಂದು ಹೆನ್ರಿ ಲಾ[illegible] ನೇತೃತ್ವದ ಬ್ರಿಟಿಷ್ ಸೇನೆ ಅವಧ್ ನಗರದಿಂದ [illegible] ಕಡೆ ತೆರಳುವಾಗ ಬಾರಾಬಂಕಿಯ ಬಳಿ [illegible] ಪಾಸಿಗಳನ್ನೊಳಗೊಂಡ ಮಕ್ಕಾ ಪಾಸಿಯ [illegible] ಎದುರಾಗುತ್ತದೆ. ಹಲವು ಬ್ರಿಟಿಷರನ್ನು ಕೊಂದ ಪಾ[illegible] ಸೇನೆ, ಮಕ್ಕಾ ಪಾಸಿಯನ್ನು ಲಾರೆನ್ಸ್ ಗುಂಡಿಟ್ಟು ಕೊ[illegible]

...ಸೆಣಸಾಡಿ ಹುತವಾಗುತ್ತದೆ. ಉತ್ತರ ಪ್ರದೇಶದ ...ವತಿಯವರ ಸರ್ಕಾರದಲ್ಲಿ ಮಂತ್ರಿಯಾಗಿದ್ದ ಪಾಸಿ ಆರ್.ಕೆ.ಚೌದರಿ ಹೇಳುತ್ತಾರೆ "ಪಾಸಿ ಸಾಮ್ರಾಜ್ಯದ ...ಯಾವುದೇ ಇತಿಹಾಸಕಾರರು ಏನನ್ನೂ ಬರೆದಿಲ್ಲ, ...ಧಕರು ತಮ್ಮ ಸಂಶೋಧನೆಗಳಿಗೆ ಈ ಜನಾಂಗವನ್ನು ...ಸಲಿಲ್ಲ. ಇವರ ಸಂಸ್ಕೃತಿ ಉಳಿಸಲು ಯಾವುದೇ ...ಗಳು ಇದುವರೆಗೆ ಮುಂದಾಗಲಿಲ್ಲ. ಒಂದೇ ಒಂದು ...ಥ ಪಾಸಿ ಸಾಮ್ರಾಜ್ಯದ ಬಗ್ಗೆ ಬರೆದಿರುವಂತಹದ್ದು ...ಗ್ರಂಥಾಲಯಗಳಲ್ಲಿಲ್ಲ" ಎಂದು.

...ಮಾಯಾವತಿಯವರಂತೂ ಪಾಸಿ ವೀರರನ್ನು ...ರಾಜ ಎಂದೇ ಸಂಬೋಧಿಸುತ್ತಾರೆ. ಉದಾಹರಣೆಗೆ: ...ರಾಜ ಬಿಜ್ಲೀ ಪಾಸಿ, ಮಹಾರಾಜ ಸತನ್ ಪಾಸಿ, ...ರಾಜ ಲಖನ್ ಪಾಸಿ, ಮಹಾರಾಜ ಸುಹಾಲ್ ... ಮಹಾರಾಜ ಛೇತಾ ಪಾಸಿ ಇತ್ಯಾದಿ.

ಉಡಾದೇವಿ: ಹೆಣ್ಣು ಹುಲಿ

...857 ರ ದಂಗೆಯಲ್ಲಿ ಉಡಾದೇವಿಯ ಪಾತ್ರ ...ದುದು. ಉಡಾದೇವಿ ಬೇಗಮ್ ಹಜ್ರತ್ ಮಹಲ್ ...ಲ್ಲಿ ಕಾರ್ಯನಿರ್ವಹಿಸುತ್ತಿದ್ದಳು.

...ಖನೌನ ಸಿಕಂದರಾಬಾದಿನಲ್ಲಿ ಒಂದು ದೊಡ್ಡ ಅರಳಿ ...ತ್ತು. ಅದರ ಕೆಳಗೆ ಸೈನಿಕರಿಗಾಗಿ ನೀರು ತುಂಬಿದ ... ಮಡಿಕೆಗಳನ್ನು ಇರಿಸಲಾಗಿತ್ತು. ಯುದ್ಧದಲ್ಲಿ ವಿರಾಮ ...ಬ್ರಿಟಿಷ್ ಕಡೆಯ 53 ಮತ್ತು 59 ನೇ ರೆಜಿಮೆಂಟಿನ ... ಆ ಮರದಡಿ ಬಂದು ನೀರು ಕುಡಿದು ವಿಶ್ರಾಂತಿ ...ಯುತ್ತಿದ್ದರು. ಕ್ಯಾಪ್ಟನ್ ಡಾಸನ್ ಸಹ ಅತ್ತ ಕಡೆ ...ಗ ಅವನಿಗೆ ಆಶ್ಚರ್ಯ ಕಾದಿತ್ತು. 36 ಬ್ರಿಟಿಷ್ ... ರಕ್ತದ ಮಡುವಿನಲ್ಲಿ ಬಿದ್ದು ಸತ್ತಿದ್ದರು. ಇದನ್ನು ...ಲಿಸಿದ ಡಾಸನ್ ತಕ್ಷಣದಲ್ಲಿಯೇ ಮರವನ್ನು ಬಿಟ್ಟು ...ಂದ. ಸೈನಿಕನೊಬ್ಬನನ್ನು ಕರೆದು ಮರದ ಮೇಲೆ ...ೀ ಇದ್ದಾರೆ ನೋಡು ಎಂದು ಅಪ್ಪಣೆ ಮಾಡಿದ. ...ಗೆ ಮರದ ಮೇಲೆ ಯಾರೋ ಕುಳಿತಿರುವುದು ...ಬಂದೂಕಿನಿಂದ ಗುಂಡಿನ ಮಳೆ ಸುರಿಸಿದ. ಮರದ ...ದ ಎರಡು ಬಂದೂಕು ಹೊಂದಿದ್ದ ಕೆಂಪು ಅಂಗಿ ...ಡ ಬಟ್ಟೆ ತೊಟ್ಟ ವ್ಯಕ್ತಿ ಕೆಳಗೆ ಬಿದ್ದ. ನಂತರ ...ತು ಅದು ಗಂಡಸಲ್ಲ ಹೆಂಗಸೆಂದು. ಆ ಹೆಂಗಸೇ ...ದೇವಿ. ಒಂದು ಬಂದೂಕಿನಲ್ಲಿ ಗುಂಡೆಲ್ಲ ಖಾಲಿ ...ತ್ತು. ಮತ್ತೊಂದರಲ್ಲಿ ತುಂಬಿದ್ದವು. ಜೇಬುಗಳಲ್ಲೆಲ್ಲಾ ...ಗುಂಡುಗಳು ಜೀವಂತವಾಗಿದ್ದವು. ಇತಿಹಾಸದಲ್ಲಿಯೇ ... ಹೆಂಡತಿ ಇಬ್ಬರೂ ದೇಶಕ್ಕಾಗಿ ಹುತಾತ್ಮರಾದ ...ರಣೆ ವಿರಳ. ಈ ಘಟನೆ ನಡೆದದ್ದು ನವೆಂಬರ್ ...857 ಎಂದು ಪಾಸಿ ಜನಾಂಗದವರು ನಂಬುತ್ತಾರೆ. ...990 ರಲ್ಲಿ ವೀರಾಂಗನೆ ಉಡಾದೇವಿ ಸ್ಮಾರಕ ...ವಾಗಿದೆ. 16ನೇ ನವೆಂಬರ್ ಉಡಾದೇವಿ ಹುತಾತ್ಮ ...ವಾಗಿ ಆಚರಿಸಲಾಗುತ್ತಿದೆ.

ಮಹಾವೀರಿ ದೇವಿ


...ಣ್ಣಾ, ಮಹಾವೀರಿ ಭಂಗಿನ್ ಹಾಡನ್ನು ಹಾಡು ...857 ರ ದಂಗೆಯಲ್ಲಿ ತ್ಯಾಗಮಯಿಯಾದಳು ನೋಡು ...ಟಿಷರ ಎದುರು ಸೋಲೊಪ್ಪಲಿಲ್ಲ ನೋಡು"

...ದು ಆಗ್ರಾದ ಪ್ರಸಿದ್ಧ ಹಾಡುಗಾರ ಅರ್ಜುನ್ ... ಹಾಡುತ್ತಾರೆ. ಮಹಾವೀರಿ ದೇವಿ ಬಗ್ಗೆ ಇನ್ನೂ ...ೋಧನೆಗಳು ನಡೆದಿವೆ. ಉತ್ತರ ಪ್ರದೇಶದ ...ಯಾಗಿರುವ ಮಹಾವೀರಿ ದೇವಿಯನ್ನೂ ...ವ ದಲಿತರು ದೇವಿ ಬಗ್ಗೆ ಹೆಮ್ಮೆ ಪಡುತ್ತಾರೆ.

...ಗೆ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ...ಹಿಸಿ ತಮ್ಮ ಜೀವವನ್ನೇ ಮುಡುಪಾಗಿಟ್ಟು ...ರಾದ ಲೆಕ್ಕವಿಲ್ಲದಷ್ಟು ದಲಿತರ, ಆದಿವಾಸಿಗಳ ...ಗಳು ದಲಿತ ಪರಂಪರೆಯಲ್ಲಿ ಅಡಗಿವೆ. ದಲಿತ ...ಗಳ ಸ್ಮೃತಿಪಟಲದಲ್ಲಿ ಜೀವಂತವಾಗಿವೆ. ಮೇಲ್ಜಾತಿ ... ಇತಿಹಾಸಕಾರರು ಬೇಕೆಂದೇ ಮುಚ್ಚಿಟ್ಟ ಬಹುಜನರ ...ನ್ನು ಅಂಬೇಡ್ಕರರ ಆದಿಯಾಗಿ ಹಲವಾರು ...ದಾಯಕ್ಕೆ ಸೇರಿದ ಲೇಖಕರು, ಸಂಶೋಧಕರು ... ತಂದಿದ್ದಾರೆ. ಆದರೆ ಬೆಳಕಿಗೆ ತರಬೇಕಾದ ...ದ ತಳ ಸಮುದಾಯಗಳ ಇತಿಹಾಸ ಸಾಕಷ್ಟಿದೆ. ...ಲ್ಲಿನ ಪ್ರತಿಯೊಂದು ವೀರಗಲ್ಲುಗಳೂ ನೂರಾರು ...ನ್ ಭಂಗಿಯ, ಮಹಾಪಾಸಿಯಂತಹ, ಉಡಾದೇವಿ, ... ಬಾಯಿಯಂತಹ ವೀರಾಂಗನೆಯರ ಕಥೆಯನ್ನು ...ವೆ. ಅದೆಲ್ಲವನ್ನೂ ಹೆಕ್ಕಿ ಜಗತ್ತಿಗೆ ತೋರಿಸುವ ...ನ್ನು ನಾಡಿನ, ದೇಶದ ಪ್ರಜ್ಞಾವಂತರು ಮಾಡಬೇಕಿದೆ. ...ನಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿಗಳಾಗಿದ್ದ ...ವತಿಯವರದ್ದು ನಿಜಕ್ಕೂ ಬಹುದೊಡ್ಡ ಸಾಧನೆ. ... ಆಳ್ವಿಕೆಯಲ್ಲಿ ಇಂತಹ ಹಲವಾರು ಬಹುಜನರ ... ಬೆಳಕಿಗೆ ಬಂದವು. ಇದೇ ಕೆಲಸವನ್ನು ಎಲ್ಲಾ ...ರ್ಕಾರಗಳು ಮಾಡಬೇಕಿದೆ. ತಳಸಮುದಾಯಗಳ ...ವನ್ನು ಸಮಾಧಿಯಿಂದ ಹೊರ ತರಬೇಕಿದೆ.

■ ವಿಕಾಸ ಆರ್ ಮೌರ್ಯ

ರಾಜ ಮತ್ತು ಚೇಳುಗಳು



ಒಂದಾನೊಂದು ಕಾಲದಲ್ಲಿ ಒಬ್ಬ ರಾಜ ಅನೇಕ ರಾಜ್ಯಗಳನ್ನು ಆಳುತ್ತಿದ್ದ ಹೀಗಿರಬೇಕಾದರೆ ಒಂದು ದಿನ ಆ ರಾಜನಿಗೆ ದೇವರುಗಳ ರಾಜ್ಯಗಳನ್ನು ಗೆಲ್ಲಬೇಕೆಂದು ಆಸೆಯಾಯಿತು. ಇದನ್ನು ತನ್ನ ಆಸ್ಥಾನದ ಮಂತ್ರಿಗಳು, ಪಂಡಿತರು ಮತ್ತು ಜ್ಯೋತಿಷಿಗಳ ಹತ್ತಿರ ಹೇಳಿಕೊಂಡ; ಅವರ ಸಲಹೆಯನ್ನು ಕೇಳಿದ. ಅವರು ತಕ್ಷಣ ರಾಜನ ಮಹದಾಸೆಗೆ ನೀರೆರೆದರು. ಶಾಸ್ತ್ರ ಪುರಾಣ, ಜ್ಯೋತಿಷ್ಯಗಳನ್ನು ಅಭ್ಯಾಸ ಮಾಡಿ; ಗುಣಾಕಾರ, ಭಾಗಾಕಾರಗಳನ್ನು ಮಾಡಿ ಅವರು ರಾಜನ ದಂಡಯಾತ್ರೆಗೆ ಒಂದು ಶುಭ ದಿನವನ್ನು ಗೊತ್ತುಪಡಿಸಿದರು. ರಾಜನು ಯಶಸ್ವಿಯಾಗಿ ಹಿಂದಿರುಗಲಿ ಎಂದು ಹರಸಿ, ಸಹಸ್ರಾರು ಸೈನಿಕರ ಜೊತೆಗೆ ಅವನನ್ನು ಆ ದಿನ ಬೀಳ್ಕೊಟ್ಟರು. ಆದರೆ ಆ ರಾಜ ದೇವರುಗಳನ್ನು ಗೆಲ್ಲಲಾರದೆ ಪರಾಜಯಗೊಂಡ. ದೇವರುಗಳ ಅಧಿಪತಿ ರಾಜ ಮತ್ತು ಅವನ ಸಹಸ್ರಾರು ಸೈನಿಕರನ್ನು ಸೆರೆ ಹಿಡಿದ. ಸೋತು ಹತಾಶೆಗೊಂಡ ರಾಜ ತನ್ನನ್ನು ಮತ್ತು ತನ್ನ ಸೈನಿಕರನ್ನು ಬಿಡುಗಡೆ ಮಾಡಬೇಕೆಂದು ಅಧಿಪತಿಯ ಮುಂದೆ ಅಂಗಲಾಚಿ ಬೇಡಿಕೊಂಡ. ಅಧಿಪತಿಯು ಅವರ ಬಿಡುಗಡೆಗೆ ಒಪ್ಪಿಕೊಂಡ. ಆದರೆ ಒಂದು ಷರತ್ತನ್ನು ಹಾಕಿದ. ಅದೇನೆಂದರೆ ರಾಜ ತನ್ನ ಖಜಾನೆಯಲ್ಲಿರುವ ಕೋಟಿ, ಕೋಟಿ ಚಿನ್ನದ ನಾಣ್ಯಗಳನ್ನು ದೇವರುಗಳಿಗೆ ಕೊಟ್ಟರೆ ಮಾತ್ರ ಅವನ ಮತ್ತು ಅವನ ಸೈನಿಕರನ್ನು ಬಿಡುಗಡೆ ಮಾಡುವುದು ಎಂದು. ಮನಸ್ಸಿಲ್ಲದ ಮನಸ್ಸಿನಿಂದ ರಾಜ ಅಧಿಪತಿಯ ಷರತ್ತಿಗೆ ಒಪ್ಪಿಕೊಂಡ. ಕೊಟ್ಟ ಮಾತು ನಡೆಸಿಕೊಳ್ಳಲು ರಾಜ ಒಬ್ಬನೆ ತನ್ನ ರಾಜ್ಯಕ್ಕೆ ಹಿಂದಿರುಗಿದ. ಹಿಂದಿರುಗಿ ಬಂದು ನಡೆದ ವಿಷಯವನ್ನೆಲ್ಲಾ ಆತ ತನ್ನ ಆಸ್ಥಾನದ ಮಂತ್ರಿಗಳು, ಪಂಡಿತರು ಮತ್ತು ಜ್ಯೋತಿಷಿಗಳಿಗೆ ಹೇಳಿದ. ಏನು ಮಾಡಬೇಕೆಂದು ಅವರನ್ನು ಕೇಳಿಕೊಂಡ. ಅವರೆಲ್ಲರೂ ಮತ್ತೊಮ್ಮೆ ಶಾಸ್ತ್ರ ಪುರಾಣ, ಜ್ಯೋತಿಷ್ಯಗಳನ್ನು ಅಭ್ಯಾಸ ಮಾಡಿ; ಗುಣಾಕಾರ, ಭಾಗಾಕಾರಗಳನ್ನು ಮಾಡಿ ಚಿನ್ನದ ನಾಣ್ಯಗಳನ್ನು ದೇವರುಗಳ ಅಧಿಪತಿಗೆ ಒಪ್ಪಿಸಲು ಒಂದು ಶುಭ ದಿನವನ್ನು ಗೊತ್ತು ಮಾಡಿದರು.

ಗೊತ್ತಾದ ಶುಭ ದಿನದಂದು ರಾಜ ತನ್ನ ಆಸ್ಥಾನದ ಮಂತ್ರಿಗಳು, ಪಂಡಿತರು ಮತ್ತು ಜ್ಯೋತಿಷಿಗಳ ಜೊತೆಗೆ ಅರಮನೆಯ ಖಜಾನೆಗೆ ಬಂದ. ಅವರೆಲ್ಲವೂ ಖಜಾನೆಯ ಚಿನ್ನದ ನಾಣ್ಯಗಳನ್ನು ಎತ್ತಿಕೊಳ್ಳಲು ಕೈ ಹಾಕುತ್ತಿದ್ದಂತೆ ಅವುಗಳೆಲ್ಲವು ಚೇಳುಗಳಾಗಿ ಬದಲಾದವು. ಇದರಿಂದ ರಾಜ ಮತ್ತು ಅವನ ಸಂಗಡಿಗರಿಗೆ ಆಘಾತ ಮತ್ತು ಆಶ್ಚರ್ಯಗಳೆರಡು ಆದವು. ಚಿನ್ನದ ನಾಣ್ಯಗಳೆಲ್ಲ ಚೇಳುಗಳಾಗಿ ಬದಲಾಗಿದ್ದು ಹೇಗೆ ಮತ್ತು ಯಾಕೆ ಎಂದು ಅವರಿಗೆ ತೋಚಲೇ ಇಲ್ಲ. ತಕ್ಷಣ ಈ ಸಮಸ್ಯೆಗೆ ಪರಿಹಾರ ಹುಡುಕಿರೆಂದು ರಾಜ ಪಂಡಿತರು ಮತ್ತು ಜ್ಯೋತಿಷಿಗಳಿಗೆ ಆಜ್ಞೆ ಇತ್ತ. ಮತ್ತೊಂದು ಸಲ ಅವರೆಲ್ಲರೂ ಶಾಸ್ತ್ರ ಪುರಾಣ, ಜ್ಯೋತಿಷ್ಯಗಳನ್ನು ಅಭ್ಯಾಸ ಮಾಡಿ; ಗುಣಾಕಾರ, ಭಾಗಾಕಾರಗಳನ್ನು ಮಾಡಿದರು. ಆದರೆ ಅವರಿಗೆ ಯಾವುದೇ ಪರಿಹಾರ ಸಿಗಲಿಲ್ಲ, ಕಾರಣವೂ ತಿಳಿಯಲಿಲ್ಲ. ಆದರೆ ಈ ಸಮಸ್ಯೆಗೆ ಪರಿಹಾರವಿಲ್ಲವೆಂದು ಹೇಳಿದರೆ ರಾಜ ತಮ್ಮ ಜೀವಕ್ಕೆ ಕುತ್ತು ತರುತ್ತಾನೆಂದು ಹೆದರಿ ಅವನ ಮುಂದೆ ಸುಳ್ಳು ಹೇಳಿದರು, "ರಾಜನ್, ನಮ್ಮ ಶಾಸ್ತ್ರ ಪುರಾಣ ಮತ್ತು ಜ್ಯೋತಿಷ್ಯದಲ್ಲಿ ಪ್ರತಿಯೊಂದು ಸಮಸ್ಯೆಗೆ ಪರಿಹಾರ ಇದ್ದೇ ಇದೆ. ಪ್ರಸ್ತುತ ಸಮಸ್ಯೆಗೆ ನಾವು ಪರಿಹಾರ ಕಂಡುಹಿಡಿದಿದ್ದೇವೆ."

ರಾಜ ಸಂತುಷ್ಟನಾಗಿ "ಏನದು?" ಎಂದು ಕೇಳಿದ.

ಅವರೆಲ್ಲರೂ ಆಗ ಒಕ್ಕೊರಲಿನಿಂದ, "ರಾಜನ್, ನಾವೀಗ ದೇವರುಗಳನ್ನು ಸಮಾಧಾನಪಡಿಸಿದರೆ ನಮ್ಮ ಸಮಸ್ಯೆ ಬಗೆಹರಿಯುತ್ತದೆ. ಅದಕ್ಕಾಗಿ ನಾವು ಹೋಮ ಮಾಡಿ, 101 ಬ್ರಾಹ್ಮಣರಿಗೆ ಕಾಣಿಕೆಗಳನ್ನು ಕೊಟ್ಟು, 1001 ಹಸು-ಎತ್ತುಗಳನ್ನು ಬಲಿಕೊಟ್ಟರೆ ಸಾಕು. ಚೇಳುಗಳೆಲ್ಲಾ ಮೊದಲಿನ ಹಾಗೆ ಚಿನ್ನದ ನಾಣ್ಯಗಳಾಗಿ ಬದಲಾಗುತ್ತವೆ" ಎಂದರು. ರಾಜ ಅವರ ಸಲಹೆಯಂತೆ ನಡೆದುಕೊಂಡ. ಆದರೆ ಚೇಳುಗಳು ಮೂಲ ರೂಪಕ್ಕೆ ಬದಲಾಗಲೇ ಇಲ್ಲ, ರಾಜನಿಗೆ ಏನು ಮಾಡಬೇಕೆಂದು ತೋಚದೆ, ಆಸ್ಥಾನದ ಪಂಡಿತರು ಮತ್ತು ಜ್ಯೋತಿಷಿಗಳನ್ನು ರಾಜ್ಯದಿಂದ ಹೊರಹಾಕಿದ. ತಾನೇ ಸಮಸ್ಯೆಗೆ ಪರಿಹಾರ ಹುಡುಕುತ್ತೇನೆಂದು ಘೋರ ತಪಸ್ಸಿಗೆ ನಿಂತ. ಅನೇಕ ದಿನಗಳ ನಂತರ ದೇವತೆಗಳು ಪ್ರತ್ಯಕ್ಷರಾಗಿ, "ರಾಜನ್, ಯಾಕೆ ಈ ಘೋರ ತಪಸ್ಸು? ಯಾಕೆ ನಮ್ಮನ್ನು ಕರೆದೆ? ಏನು ನಿನ್ನ ಕೋರಿಕೆ?" ಎಂದು ಕೇಳಿದರು. ರಾಜ ಇದುವರೆಗೂ ನಡೆದದ್ದನ್ನೆಲ್ಲಾ ಸವಿವರವಾಗಿ ಹೇಳಿದ. ಸಮಸ್ಯೆಗೆ ಪರಿಹಾರ ನೀಡಿರೆಂದು ಬೇಡಿಕೊಂಡ. ದೇವತೆಗಳು ಅವನ ಅಸಹಾಯಕತೆಗೆ ಮರುಗಿ, "ರಾಜನ್, ಕಷ್ಟ ಪಟ್ಟು ದುಡಿಯುವ ಮತ್ತು ಯಾರಿಗೂ ಮೋಸ ಮಾಡದೇ ಇರುವ ವ್ಯಕ್ತಿಗಳು ಯಾವಾಗ ಆ ಚೇಳುಗಳನ್ನು ಸ್ಪರ್ಶಿಸುತ್ತಾರೋ, ಆಗ ಅವುಗಳೆಲ್ಲ ಮತ್ತೆ ಚಿನ್ನದ ನಾಣ್ಯಗಳಾಗಿ ಬದಲಾಗುತ್ತವೆ" ಎಂದು ಭವಿಷ್ಯ ನುಡಿದರು. ರಾಜನಿಗೆ ಅವರ ಮಾತುಗಳಿಂದ ಬಹಳ ಖುಷಿಯಾಯಿತು. ತನ್ನ ರಾಜ್ಯಕ್ಕೆ ಮರಳಿದ.

ಮರಳಿ ಬಂದಮೇಲೆ ರಾಜ್ಯದ ಎಲ್ಲಾ ಜನರು ಬಂದು ಚೇಳುಗಳನ್ನು ಸ್ಪರ್ಶಿಸಬೇಕೆಂದು, ಅವುಗಳನ್ನು ಮತ್ತೆ ಚಿನ್ನದ ನಾಣ್ಯಗಳನ್ನಾಗಿ ಬದಲಾಯಿಸಬೇಕೆಂದು ಆಜ್ಞೆ ಹೊರಡಿಸಿದ. ರಾಜ್ಯದ ಕೆಲ ಜನರು ಚೇಳುಗಳನ್ನು ಸ್ಪರ್ಶಿಸಿದರೆ ಸತ್ತು ಹೋಗುತ್ತೇವೆಂದು ಹೆದರಿ ಯಾರಿಗೂ ಗೊತ್ತಾಗದ ಹಾಗೆ ತಮ್ಮನ್ನು ತಾವು ಬಚ್ಚಿಟ್ಟುಕೊಂಡರು. ಸುದ್ದಿ ಗೊತ್ತಾಗಿ ರಾಜ ಅವರನ್ನೆಲ್ಲಾ ಹುಡುಕಿಸಿ, ಬಂಧಿಸಿದ; ಇನ್ನು ಕೆಲವರನ್ನು ಸ್ಥಳದಲ್ಲೇ ಕೊಲ್ಲಿಸಿದ; ಮತ್ತಿತರರನ್ನು ರಾಜ್ಯದಿಂದ ಗಡಿಪಾರು ಮಾಡಿದ. ಇನ್ನುಳಿದವರು ಭಯದಿಂದ ಹೆದರಿ ರಾಜನ ಆಜ್ಞೆಯಂತೆ ಚೇಳುಗಳನ್ನು ಮುಟ್ಟಿದರು. ಆದರೆ ಅವರ ಸ್ಪರ್ಶದಿಂದ ಚೇಳುಗಳು ಮತ್ತೆ ಚಿನ್ನವಾಗಿ ಬದಲಾಗಲಿಲ್ಲ. ಅವರೆಲ್ಲರನ್ನು ಚೇಳುಗಳು ಕುಟುಕಿದ್ದರಿಂದ ಅವರು ಸ್ಥಳದಲ್ಲೇ ಸತ್ತುಹೋದರು. ಕಷ್ಟಪಟ್ಟು ದುಡಿಯುವ ಮತ್ತು ಮೋಸ ಮಾಡದೆ ಇರುವ ಜನರು ರಾಜ್ಯದಲ್ಲಿ ಇಲ್ಲದಿರುವುದನ್ನು ತಿಳಿದ ರಾಜ ದುಃಖ ಪಟ್ಟ. ಏನೂ ತೋಚದೆ ಕಂಗಾಲಾದ.

ಹೀಗಿರಬೇಕಾದರೆ ಊರ ಹೊರಗಿನ ಕೆಲವು ಅಸ್ಪೃಶ್ಯರು ಆಕಸ್ಮಾತ್ತಾಗಿ ಅನುಮತಿ ಇಲ್ಲದೆ ಊರನ್ನು ಪ್ರವೇಶಿಸಿದರು. ಊರು ಮೈಲಿಗೆಯಾಯಿತೆಂದು ರಾಜನ ಸೈನಿಕರು ಅವರನ್ನು ಬಂಧಿಸಿದರು. ಶಿಕ್ಷೆಗಾಗಿ ಅವರನ್ನು ರಾಜನ ಎದುರಿಗೆ ನಿಲ್ಲಿಸಿದರು. ಮೊದಲೇ ಸಂಕಷ್ಟ ಮತ್ತು ಕ್ರೋಧದಿಂದ ಕುದಿಯುತ್ತಿದ್ದ ರಾಜನಿಗೆ ಇವರ ಮೇಲೆ ಅತೀವ ಅಸಹ್ಯ ಉಂಟಾಗಿ ಅವರನ್ನು ಚೇಳುಗಳಿರುವ ಕೋಣೆಗೆ ತಳ್ಳಿ, ಸಾಯಿಸಿರೆಂದು ಆಜ್ಞಾಪಿಸಿದ. ಸೈನಿಕರು ಅಸ್ಪೃಶ್ಯರನ್ನು ಚೇಳುಗಳಿರುವ ಖಜಾನೆಗೆ ತಳ್ಳಿದರು.

ಮರುದಿನ ಸೈನಿಕರು ಸತ್ತಿರುವ ಅಸ್ಪೃಶ್ಯರನ್ನು ಹೊರಗೆಳೆಯಲು ಖಜಾನೆಯ ಕೋಣೆಯನ್ನು ತೆಗೆದರು. ಆದರೆ ಅವರಿಗೆ ಜಗದಾಶ್ಚರ್ಯ ಕಾದಿತ್ತು. ಅಸ್ಪೃಶ್ಯರ ಸ್ಪರ್ಶದಿಂದ ಚೇಳುಗಳೆಲ್ಲಾ ಚಿನ್ನದ ನಾಣ್ಯಗಳಾಗಿ ಬದಲಾಗಿದ್ದವು. ವಿಷಯ ತಿಳಿದ ರಾಜ ಇದರಿಂದ ಬಹಳ ಖುಷಿಗೊಂಡ. ಖಜಾನೆಯ ಕೋಟ್ಯಾಂತರ ಚಿನ್ನದ ನಾಣ್ಯಗಳನ್ನು ದೇವರುಗಳ ಅಧಿಪತಿಗೆ ಕೊಟ್ಟು ತನ್ನ ಸಹಸ್ರಾರು ಸೈನಿಕರನ್ನು ಬಿಡುಗಡೆಗೊಳಿಸಿಕೊಂಡ. ಮರಳಿ ರಾಜ್ಯಕ್ಕೆ ಬಂದಮೇಲೆ ಎಲ್ಲಾ ಅಸ್ಪೃಶ್ಯರು ಇನ್ನು ಮುಂದೆ ಊರ ಹೊರಗೆ ಇರಬೇಕಾದ ಅವಶ್ಯಕತೆಯಿಲ್ಲವೆಂದು, ಊರ ಜನರಂತೆ ಊರಲ್ಲಿ ವಾಸಿಸಬಹುದೆಂದು ಆಜ್ಞೆ ಹೊರಡಿಸಿದ. ಅವರಿಗೆ ರಾಜ ಅನೇಕ ಸೌಕರ್ಯಗಳನ್ನು ನೀಡಿದ.

* * *

ಇದಾದ ಅನೇಕ ಶತಮಾನಗಳ ನಂತರ ಆ ರಾಜ್ಯದ ಚಿನ್ನದ ನಾಣ್ಯಗಳೆಲ್ಲಾ ಮತ್ತೆ ಚೇಳುಗಳಾಗಿ ಬದಲಾಗಿವೆ. ರಾಜ, ಆಸ್ಥಾನದ ಪಂಡಿತರು ಮತ್ತು ಜ್ಯೋತಿಷಿಗಳಿಗೆ ಏನು ಮಾಡಬೇಕೆಂದು ತೋಚದೆ ಈಗಲೂ ಸಮಸ್ಯೆಯ ಪರಿಹಾರಕ್ಕಾಗಿ ಕಾದು ಕುಳಿತಿದ್ದಾರೆ.

■ ಡಾ.ವಿಜಯಕುಮಾರ್ ಎಂ ಬೋರಟ್ಟಿ

ಹಿಂಸೆಯ ಹೊರತಾಗಿ ಇರ್ಫಾನ್‌ಗೆ ಬೇರೇನೂ ಸಿಗಲಿಲ್ಲ



ಆಗಸ್ಟ್ 21ರಂದು ಹಳೆ ಶ್ರೀನಗರದಲ್ಲಿ ಸಿಆರ್‌ಪಿಎಫ್ ಗುಂಡಿಗೆ 18 ವರ್ಷದ ಇರ್ಫಾನ್ ಫಯಾಜ್ ವಾನಿ ಎಂಬ ಹುಡುಗ ಬಲಿಯಾಗಿದ್ದಾನೆ.

ಇರ್ಫಾನ್ ವಯಸ್ಸು ಹತ್ತಾಗುವ ಮುನ್ನ ಅವನ ಮೇಲೆ ಎರಡು ಕೇಸ್ ದಾಖಲಿಸಿದ್ದರು ಕಲ್ಲೆಸೆದು ಅಶಾಂತಿ ಸೃಷ್ಟಿಸಿದ ಎಂಬ ಕಾರಣಕ್ಕೆ! ಮೊದಲ ಬಾರಿ ಅವನನ್ನು ಬಾಲಕನಾಗಿದ್ದರೂ ಜೈಲಿನಲ್ಲಿ ವಯಸ್ಕರೊಂದಿಗೆ ಇರಿಸಲಾಯಿತು. ಹೊರಬಂದನಂತರ ಇರ್ಫಾನ್ ಆಜಾದಿ ಪ್ರತಿಭಟನೆಗಳಲ್ಲಿ ಭಾಗವಹಿಸಲು ಆರಂಭಿಸಿದ, ಕೈಗೆ ಕಲ್ಲೆತ್ತಿಕೊಂಡ! ಮತ್ತೊಮ್ಮೆ ಜೈಲ್ ಸೇರಿದ!

ತನ್ನ ತಂದೆಯ ಅನಾರೋಗ್ಯ ಅಣ್ಣನ ಅನಾರೋಗ್ಯದ ಕಾರಣ ಸಂಸಾರದ ಜವಾಬ್ದಾರಿ ಹೊರಬೇಕಾಗಿ ಬಂತು. ಚಹಾ ಅಂಗಡಿಯೊಂದರಲ್ಲಿ ಕೆಲಸ ಆರಂಭಿಸಿದ ಇರ್ಫಾನ್ ಒಂದು ವರ್ಷದ ನಂತರ ಆಟೋ ಚಾಲಕನಾದ. ತನ್ನ ತಂಗಿಯಂದಿರನ್ನು ತನ್ನ ಮಕ್ಕಳಂತೆ ನೋಡಿಕೊಳ್ಳ ತೊಡಗಿದ ಕಿರಿ ವಯಸ್ಸಿನಲ್ಲಿ ಸಂಸಾರದ ಜವಾಬ್ದಾರಿ ಹೊತ್ತ ಇರ್ಫಾನ್. ಇವನು ಆಟೋಓಡಿಸುವಾಗ ಗುತ್ತಿಗೆ... [illegible] ಆಜಾದಿ ಘೋಷಣೆ ಕೂಗಲ್ಪಟ್ಟರೆ, ಕಲ್ಲು ಎಸೆಯಲ್ಪಟ್ಟರೆ ಪೊಲೀಸರು ಇರ್ಫಾನ್ ಅನ್ನು ಆರೋಪಿ ಆಗಿಸುತ್ತಿದ್ದರು, ಅಪರಾಧಿ ಎಂದು ಪರಿಗಣಿಸುತ್ತಿದ್ದರು.

18ನೆ ವಯಸ್ಸುಗುವ ಹೊತ್ತಿಗಾಗಲೇ ಆತನ ಮೇಲೆ ಒಟ್ಟು 21 ಕೇಸ್ ದಾಖಲಾಗಿದ್ದವು.

ಬಂಧಿಸಿದ ಪೊಲೀಸರು ಅವನನ್ನು ಹೇಗೆಲ್ಲಾ ಹಿಂಸಿಸಿದರು ಎಂದರೆ ಸಹಜವಾಗಿ ಪೊಲೀಸ್ ಕುರಿತಾಗಿ ಆತಂಕ ಇದ್ದ ಭಯ ಅವನಲ್ಲಿ ಇಲ್ಲವಾಯಿತು.

ಬಂಧಿಸಿದಾಗ ಅಷ್ಟೇ ಅಲ್ಲ ಪೊಲೀಸರು ಆತನಿಗೆ ಹಿಂಸೆ ನೀಡುತ್ತಿದ್ದದ್ದು. ಯಾವುದೇ ಪ್ರಕ್ಷುಬ್ಧತೆ ಇಲ್ಲದ ಸಮಯದಲ್ಲೂ ಆತನಿಂದ ಹಫ್ತಾ ವಸೂಲಿ ಮಾಡಿ ಇನ್ನೊಂದೇ ಬಗೆಯ ಹಿಂಸೆ ಆತನಿಗೆ ನೀಡುತ್ತಿದ್ದರು.

ಈ ಎಲ್ಲಾ ಹಿಂಸೆಯಿಂದ ಪಾರಾಗಲು 2015ರಲ್ಲಿ ಆತ ಜೀವನೋಪಾಯಕ್ಕಾಗಿ ಮನಾಲಿಗೆ ಹೋದ. ಆದರೆ ಕೆಲವೇ ತಿಂಗಳಲ್ಲಿ ಆತನ ತಂದೆಯ ನಿಧನದ ಸುದ್ದಿ ಬಂತು. ತಂದೆಯ ಸಾವಿನ ಸಂದರ್ಭದಲ್ಲಿ ಮನೆಗೆ ಮರಳಿದರೆ, ಮನೆಯ ಬಾಗಿಲು ಪ್ರವೇಶಿಸುವ ಹೊತ್ತಿಗೆ ಪೊಲೀಸರು ಮತ್ತೆ ಆತನನ್ನು ಬಂಧಿಸಿದರು. ಬಂಧಿಸಿದ ಪೊಲೀಸರು "ಈಗ ಹೇಳಲುಕೇಳಲು ಯಾರಿಲ್ಲ, ಹೋಗಿ ಉಗ್ರಗಾಮಿಗಳನ್ನು ಸೇರಲು ಸುಲಭವಾಯಿತು" ಎಂದೆಲ್ಲಾ ಹೇಳುತ್ತಾ ಹಿಂಸಿಸಿದರು.

ಪೊಲೀಸರ ಹಿಂಸೆಯಿಂದ ತಂದೆಯ ಆರೋಗ್ಯ ತತ್ತರಿಸಿ ಕೊನೆಗೆ ಹೃದಯಾಘಾತ ಆಗಿ ತೀರಿಕೊಂಡರು ಎಂದು ಗೊತ್ತಾಗುತ್ತಿದ್ದಂತೆ ಇರ್ಫಾನ್ ಕುಸಿದುಹೋದ, ತಾನು ಉಗ್ರಗಾಮಿಗಳನ್ನು ಸೇರುತ್ತೇನೆ ಎಂದು ಹೇಳಲಾರಂಭಿಸಿದ್ದ. ಒಂದು ವರ್ಷದ ಹಿಂದೆ ನೋವಿನಲ್ಲೇ ಆ ಮಾತನ್ನು ಆಡಿದ್ದ ಇರ್ಫಾನ್ ಒಂದು ವರ್ಷದ ನಂತರವೂ ಉಗ್ರಗಾಮಿಗಳನ್ನು ಸೇರಿರಲಿಲ್ಲ.

ಬುರ್ಹಾನ್ ವಾನಿ ಹತ ಆಗಿ ಹಿಂಸೆ ಭುಗಿಲೆದ್ದಾಗ ಪೊಲೀಸರು ಇರ್ಫಾನ್ ಮನೆಗೆ ಮತ್ತೆ ಮತ್ತೆ ಭೇಟಿ ನೀಡಿ ವಿಚಾರಿಸತೊಡಗಿದರು ಮತ್ತು ಧಮಕಿ ಹಾಕಲಾರಂಭಿಸಿದರು. ಇದರಿಂದ ಭಯಭೀತಳಾದ ತಾಯಿ "ಒಂದಿಷ್ಟು ದಿನ ಸಂಬಂಧಿಕರ ಮನೆಯಲ್ಲಿ ಹೋಗಿ ಇರು" ಎಂದು ಒತ್ತಾಯ ಮಾಡಿ ಹತ್ತಿರದ ಊರಿನ ಸಂಬಂಧಿಕರ ಮನೆಗೆ ಕಳುಹಿಸಿದರು.

ಒಂದು ವಾರದ ಬಳಿಕ ಮನೆಯವರನ್ನು ನೋಡುವ ಹಂಬಲದಿಂದ ಇರ್ಫಾನ್ ಮನೆ ಕಡೆ ಹೊರಟ. ತನ್ನ ಮನೆಯಿಂದ ಎರಡು ಕಿಲೋಮೀಟರು ದೂರದಲ್ಲಿ ಇರ್ಫಾನ್ ನೆರೆದಿದ್ದ ಪ್ರತಿಭಟನಾಕಾರರ ಬಳಿಯಿಂದ ಹಾದುಬರುತ್ತಿರುವಾಗ ಸಿಆರ್‌ಪಿಎಫ್ ಗುಂಡಿಗೆ ಬಲಿಯಾದ.

ಆಟೋ ಚಾಲಕನಾಗಿದ್ದ ಇರ್ಫಾನಿನ ಆಟೋದಲ್ಲಿ ಅವನ ಸ್ನೇಹಿತರಿಗೆ ಒಂದು ಡೈರಿ ಸಿಕ್ಕಿತು.

ತನ್ನ ವಯಸ್ಸನ್ನು ಮೀರಿದ ಜವಾಬ್ದಾರಿ ಹೊತ್ತಿದ್ದ 18 ವರ್ಷದ ಒಬ್ಬ ಹುಡುಗ, ತನ್ನ ಡೈರಿಯಲ್ಲಿ ತಾನಿಷ್ಟ ಪಡುವ ಕ್ರೀಡಾಪಟುವಿನ ಬಗ್ಗೆಯೋ, ತಾನು ಇಷ್ಟ ಪಡುವ ಸಿನಿಮಾ ನಟ/ನಟಿಯ ಬಗ್ಗೆಯೋ, ತಾನು ಪ್ರೀತಿಸುವ ಹುಡುಗಿಯ ಕುರಿತೋ ಒಂದೇ ಒಂದು ಸಾಲೂ ಬರೆದಿರಲಿಲ್ಲ, ಉಗ್ರಗಾಮಿಗಳನ್ನು ಸೇರುತ್ತೇನೆ ಎಂದು ಆವೇಶದಲ್ಲಿ ಒಮ್ಮೆ ಹೇಳಿದ್ದ ಆತ ಯಾವ ಉಗ್ರಗಾಮಿಯ ಕುರಿತೂ ಬರೆದಿರಲಿಲ್ಲ ತನ್ನ ಡೈರಿಯಲ್ಲಿ.

ಅದರಲ್ಲಿ ಪೊಲೀಸರು ತನ್ನ ಮೇಲೆ ಜಡಿದ 21 ಕೇಸ್ ಕುರಿತ ವಿವರ ಮತ್ತು ತಾನು ಕೋರ್ಟ್‌ಗೆ ಹೋಗಬೇಕಾದ ದಿನಗಳನ್ನು ಬಿಟ್ಟರೆ ಇರ್ಫಾನ್ ಬೇರೇನೂ ಬರೆದಿರಲಿಲ್ಲ.

ಬರೆಯಲು ಬೇರೇನೂ ಇರಲೂ ಇಲ್ಲ. ಕಾಶ್ಮೀರದ ಪ್ರಕ್ಷುಬ್ಧತೆ ಯುವಕನೊಬ್ಬನ ಬದುಕಿಗೆ 21 ಕೇಸ್ ಬಿಟ್ಟು ಬೇರೇನನ್ನೂ ಬರೆದುಕೊಳ್ಳಲು ಅವಕಾಶ ಮಾಡಿಕೊಡಲಿಲ್ಲ.

ಇದು ಅಸಂಖ್ಯ ಕತೆಗಳಲ್ಲಿ ಒಂದು ಅಷ್ಟೇ...

(ಇರ್ಫಾನ್ ಕುರಿತ ವಿವರಗಳು ಸಿಕ್ಕಿದ್ದು ಉಮರ್ ಮುಕ್ತಾರ್ ಎಂಬ ವರದಿಗಾರನ ವರದಿ ಮುಖಾಂತರ)

■ ಸಂವರ್ತಾ ಸಾಹಿಲ್

ಟಿವಿ ಚಾನೆಲ್‌ನೋರ ಸಂಕಟ


ಟಿವಿ ಚಾನೆಲ್‌ನವರಿಗೆ ಶಾನೆ ಕಷ್ಟ ಆಗೋಗಿರೋ ಹಂಗಿದೆ. ಅವರೋ ಯಾವುದೋ ಸಿದ್ಧಾಂತದ ಹಿನ್ನೆಲೆಯಿಂದ ಬಂದಿರೋರು. ಹಂಗಂತ ನಾವು ಈ ಸಿದ್ಧಾಂತ ನಂಬಿರೋರು ಎಂದು ಬಹಿರಂಗಪಡಿಸುವಂತಿಲ್ಲ. ವೃತ್ತಿಧರ್ಮ ಅನ್ನೋದು ಒಂದು ಇದೆ ನೋಡಿ. ನಾವು ನ್ಯಾಯಪರ ಇರೋರು ಅಂತ ನಾಟಕ ಆಡಿ ನಂಬಿಸಬೇಕಾಗುತ್ತೆ. ಹಾಗಿದ್ದುಕೊಂಡೇ ತಮ್ಮ ಸಿದ್ಧಾಂತಕ್ಕೆ ವಿರೋಧವಾಗಿ ನಡೆಯುವವರ ಮಾನಾನ ಸಮಯ ಸಿಕ್ಕಿದಾಗ ಹರಾಜು ಹಾಕಬೇಕಾಗುತ್ತೆ. ಹೀಗೆ ಮಾಡುವಾಗ ತೋರಿಕೆಗಾದರೂ ತಮ್ಮ ಸಿದ್ಧಾಂತಕ್ಕೆ ಪೂರಕವಾದ ಘಟನಾವಳಿಗಳನ್ನ ಟಿವಿ ಪರದೆ ಮೇಲೆ ತೋರಿಸಬೇಕಾಗುತ್ತೆ ಅಲ್ಲೇ ಇರೋದು ನೋಡಿ ತಾಪತ್ರಯ.

ಗಾಂಧೀಜಿ ಕೊಲೆ ಮಾಡಿದ್ದು ಓರ್ವ ವ್ಯಕ್ತಿ ಅಲ್ಲ, ಒಂದು ಸಿದ್ಧಾಂತ ಎಂದು ಹೇಳಲಾಗುತ್ತಿದೆ: ಆ ಸಿದ್ಧಾಂತದ ಆರಾಧಕರು ಈಗ ಚಲಾವಣೆಯಲ್ಲಿದ್ದಾರೆ. ಆದರೆ ದುರಂತ ನೋಡಿ. ಅವರು ಬೇಳೆಬೇಯಿಸಿಕೊಳ್ಳಬೇಕಾದರೆ ತಮ್ಮ ಸಿದ್ಧಾಂತಗಳ ನಿರೂಪಕರಾದ ತಮ್ಮ ಪೂರ್ವೀಕರನ್ನು ನೆನಪು ಮಾಡಿಕೊಳ್ಳುವಂತಿಲ್ಲ. ನೆನಪು ಮಾಡಿಕೊಳ್ಳಬೇಕೆಂದು ಬಯಸಿದರೂ ಆದರಿಂದ ಏನೂ ಪ್ರಯೋಜನ ಇಲ್ಲ, ಯಾಕೆಂದರೆ ಅವರು ಯಾರಿಗೂ ಜಾಗತಿಕ ಮನ್ನಣೆ ಇಲ್ಲ! ತಾವು ಪವಿತ್ರ ಸಿದ್ಧಾಂತ ಎಂದು ನಂಬಿರುವುದರ ವಿರೋಧಿ ಎಂದು ಕೊಲೆ ಮಾಡಿದ ಗಾಂಧಿಯ ಹೆಸರನ್ನೇ ತಮ್ಮ ಉಳಿವಿಗೂ, ಏಳ್ಗೆಗೂ ಬಳಸಿಕೊಳ್ಳುವುದು ಅನಿವಾರ್ಯ ವಾಗಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಅವರಿಗೆ ಆಗಬಹು ದಾದ ಮಾನಸಿಕ ಹಿಂಸೆಯನ್ನು ಊಹಿಸಲೂ ಸಾಧ್ಯ ಇಲ್ಲ.

ಇಂತಹದ್ದೇ ಪರಿಸ್ಥಿತಿ ಈಗ ಮಾಧ್ಯಮದವರ ಎದುರಾಗಿದೆ. ಆಮ್ನೆಸ್ಟಿ ಇಂಟರ್‌ನ್ಯಾಷನಲ್ ಅನ್ನೊ ಸಂಸ್ಥೆ 'ಒಡೆದ ಕುಟುಂಬಗಳು' ಅನ್ನುವ ವಿಷಯ ಕುರಿತು ವಿಚಾರಸಂಕಿರಣ ಏರ್ಪಡಿಸಿತ್ತಲ್ಲ, ಆಗ ಕೆಲವರು ಭಾರತದ ಸೈನಿಕರು ಕಾಶ್ಮೀರದಲ್ಲಿ ನಡೆಸಿರುವ ಕಾನೂನುಬಾಹಿರ ಚಟುವಟಿಕೆಗಳನ್ನು ಖಂಡಿಸಿ ಅವರ ವಿರುದ್ಧ ಘೋಷಣೆ ಕೂಗಿದರಂತೆ. ಅದನ್ನು ಕೇಳಿ ಅಲ್ಲಿದ್ದ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನವರಿಗೆ 'ಆಹಾ ದೇಶ ಕಾಯೋ ಸೈನಿಕರ ಮೇಲೆ ಇಂತಹ ಆಪಾದನೆ ಮಾಡ್ತಾರಲ್ಲ, ಘೋಷಣೆ ಕೂಗ್ತಾರಲ್ಲ' ಅಂತ ಬಲೇ ನೋವಾಯ್ತಂತೆ. ಅದಕ್ಕೇ 'ಇದು ದೇಶದ್ರೋಹದ ಕೆಲಸ ಅವರ ಮೇಲೆ ಕೇಸು ಜಡೀರಿ' ಎಂದೆಲ್ಲ ಗಲಭೆ ಎಬ್ಬಿಸಿದರಲ್ಲಾ, ಕಾನೂನು ಪರಿಪಾಲಿಸ ಬೇಕಾದವರು ಅವರ ಒತ್ತಡಕ್ಕೆ ಮಣಿಯಲಿಲ್ಲವಂತೆ. ಕೇವಲ ಘೋಷಣೆ ಕೂಗುವುದು ದೇಶದ್ರೋಹ ಆಗುವುದಿಲ್ಲ, ಸುಪ್ರೀಂಕೋರ್ಟೇ ಇದನ್ನ ಸ್ಪಷ್ಟಪಡಿಸಿದೆ ಎಂದು ಕಾನೂನು ತೋರಿಸಿದರಂತೆ. ದೇಶದ ನ್ಯಾಯ ಏನೇ ಹೇಳಬಹುದು. ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ನಂಬಿರೋ ಸಿದ್ಧಾಂತದ ನ್ಯಾಯ 'ಇದು ದೇಶದ್ರೋಹ' ಎಂದು ತೀರ್ಮಾನ ಹೇಳಿತ್ತು, ರಾಜ್ಯದ ಗೃಹಮಂತ್ರಿಯೂ ಸುಪ್ರೀಂಕೋರ್ಟಿನ ತೀರ್ಪನ್ನೇ ಗಿಣಿಪಾಠದಂತೆ ಒಪ್ಪಿಸುತ್ತಿದ್ದಾಗ ಮತ್ತು ಆನಂತರ, ಒತ್ತಡ ಹಾಕಿ ಏನು ಬೇಕಾದರೂ ಸಾಧಿಸಬಹುದು ಎಂದು ನಂಬಿದ್ದ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನೋರಿಗೆ ಸಹಜ ವಾಗಿಯೇ ಒಳಗಿಂದ ಉರಿ ಹತ್ತಿಕೊಂಡಿತು. ಪ್ರತಿಭಟನೆ ಯನ್ನು ತೀವ್ರಗೊಳಿಸಲು ತೀರ್ಮಾನಿಸಿತು.

ಈಗ ಟಿವಿ ಚಾನೆಲ್‌ನೋರ ಸಂಕಟ ನೋಡಿ. ದೇಶದ ನ್ಯಾಯ ಇದು ದೇಶ ದ್ರೋಹ ಅಲ್ಲ ಎಂದು ಸ್ಪಷ್ಟಪಡಿಸಿದೆ. ನ್ಯಾಯಾಲಯದ ತೀರ್ಪನ್ನು ಅಲ್ಲಗಳೆಯುವಂತಿಲ್ಲ, ಆದರೆ ಅದು ತಾವು ನಂಬಿರುವ ಸಿದ್ಧಾಂತಕ್ಕೆ ಹೊರತಾದುದು. ಆದರೂ ತಾವು ನಂಬಿರುವ ಸಿದ್ಧಾಂತಕ್ಕೆ ಪ್ರಚಾರ ಸಿಗಬೇಕು ಅಂತ ಅವರೇನು ಮಾಡಿದರು ಅಂದರೆ...

ಟಿವಿ ಪರದೆಯ ಒಂದು ಭಾಗದಲ್ಲಿ ರಾಜ್ಯದ ಗೃಹ ಮಂತ್ರಿ ಟಿವಿ ಚಾನೆಲ್‌ನವರು ಹಿಡಿದಿರೋ ಮೈಕಿನಲ್ಲಿ 'ದೇಶದ್ರೋಹ ಅಲ್ಲ' ಎಂದು ಹೇಳುತ್ತಿರುವುದನ್ನು ತುಂಬಿಸಲಾಗಿತ್ತು. ಇನ್ನೊಂದು ಭಾಗದಲ್ಲಿ ಇದನ್ನು ಪ್ರತಿಭಟಿಸುವವರ ಚಿತ್ರ ಬರಬೇಕಿತ್ತು, ಗೃಹಮಂತ್ರಿಗಳ ಹೇಳಿಕೆಗೆ ಎಬಿವಿಪಿಯ ತೀವ್ರ ಪ್ರತಿಭಟನೆ ಎಂಬ ಧ್ವನಿಯೇನೋ ಬರುತ್ತಿತ್ತು, ಪ್ರತಿಭಟನಾಕಾರರ ಸಂಖ್ಯೆ ಹೇಳಿಕೊಳ್ಳುವಷ್ಟು ಇರಲಿಲ್ಲವೋ ಏನೋ ಅವರನ್ನು ತೋರಿಸಲಿಲ್ಲ. ತೋರಿಸಿದ್ದರೂ ಮಾಧ್ಯಮದವರ ಮಾತಿನ ಒಗಕ್ಕೆ ಸಪ್ಪೆ ಎನಿಸುತ್ತಿತ್ತು. ಅವರ ಅದೃಷ್ಟಕ್ಕೆ ಅವತ್ತು ಭೂಮಿಯ ಹಕ್ಕಿಗಾಗಿ ಸಾವಿರಾರು ಜನರು ಪ್ರತಿಭಟಿಸು ತ್ತಿದ್ದರು. ಹಿರಿಯರಾದ ಎಚ್.ಎಸ್. ದೊರೆಸ್ವಾಮಿ, ಆಮ್‌ಆದ್ಮಿ ಪಕ್ಷದ ರವಿ ಕೃಷ್ಣಾರೆಡ್ಡಿ ಇಂತಹವರು ಇದ್ದರು. ಆಗ ನೋಡಿ ಟಿವಿ ಚಾನೆಲ್‌ನವರು ಚಾಣಾಕ್ಷತನ ಮೆರೆದರು. ಗೃಹಮಂತ್ರಿಗಳ ಹೇಳಿಕೆಗೆ ಎಬಿವಿಪಿಯ ಆಕ್ರೋಶ ಎಂಬ ಉದ್ಘೋಷಿತ ವಾಕ್ಯಕ್ಕೆ ಈ ಚಿತ್ರ ಟಿವಿ ಪರದೆಯ ಮೇಲೆ



ಬಂತು! ಹಿರಿಯ ಸ್ವಾತಂತ್ರ್ಯ ಹೋರಾಟಗಾರರ ಬೆಂಬಲವೂ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿಗೆ ಇದೆ ಎಂಬ ಭ್ರಮೆಯನ್ನು ಬಿಂಬಿಸಲಾಗಿತ್ತು! ತಾವು ನಂಬಿರುವ ಸಿದ್ಧಾಂತದ ಪ್ರಚಾರಕ್ಕೆ ಹೀಗೆಲ್ಲ ಸರ್ಕಸ್ ಮಾಡುವುದು ಅನಿವಾರ್ಯವೊ ಏನೋ! ವೃತ್ತಿ ಪರತೆ ಎಂದರೆ ಇದು!

ಅಲ್ಲಾ ಸಂಘ ಪರಿವಾರದ ಪ್ರತಿಭಟನೆ ಎಂದರೆ ಅಲ್ಲಿ ಕೇಸರಿಬಾವುಟದ ಮೆರೆದಾಟ ಇರಬೇಕಲ್ಲಾ, ಅಲ್ಲಿ ಕೆಂಪುಬಾವುಟ ಹಾರಾಡುತ್ತಿತ್ತಲ್ಲಾ. ಎಂದದ್ದಕ್ಕೆ 'ಇಂತಹವನ್ನೆಲ್ಲ ಸೂಕ್ಷ್ಮವಾಗಿ ಗಮನಿಸುವ ಪಬ್ಲಿಕ್ ಎಲ್ಲಿದಾರ್ರೀ' ಅಂತ ಟೀವಿಯೋರು ಜಾಡುಸ್ತಾರೋ. ಏನೋ....

ಚಪ್ಪಲಿ ಸಂಸ್ಕೃತಿ

ಮಂಡ್ಯದಲ್ಲಿ ಮಹಿಳಾ ಕಾಂಗ್ರೆಸ್ ಸಮ್ಮೇಳನ ಇತ್ತು. ಮಾಜಿ ಸಂಸದೆ ರಮ್ಯಾ ಬಂದಿದ್ದರು. ಇತ್ತೀಚೆಗೆ ಅವರು ಯಾವುದೋ ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ಪಾಕಿಸ್ತಾನಕ್ಕೆ ಹೋಗಿಬಂದಿದ್ದರು. ಪಾಕ್ ವಿಷಯ ಅಂದರೆ ಮಾಧ್ಯಮದವರಿಗೂ ಕುತೂಹಲ. ಅದನ್ನು ಕುರಿತು ಪ್ರಶ್ನಿಸಿದರು. ಈ ಹಿಂದೆ ಮನೋಹರ ಪರಿಕ್ಕರ್ ಎಂಬುವವರು ಪಾಕ್ ಕುರಿತು ಒಂದು ಹೇಳಿಕೆ ನೀಡಿದ್ದರು. ಈ ಮನೋಹರ್ ಪರಿಕ್ಕರ್ ಅನ್ನುವವರು ಯಾರು ಅಂದ್ರೆ ಹಿಂದೆ ಗೋವಾ ರಾಜ್ಯ ಮುಖ್ಯಮಂತ್ರಿಯಾಗಿದ್ದವರು. ಭಾರೀ ಬುದ್ಧಿವಂತರಂತೆ. ಅದನ್ನೋಡೇ ಮೋದಿಯವರು ಕೇಂದ್ರಕ್ಕೆ ಕರೆಸಿಕೊಂಡರು. ರಕ್ಷಣಾ ಮಂತ್ರಿ ಮಾಡಿದರು. ಮೊದಲೇ ಇವರು ಬುದ್ಧಿವಂತರು ಅಲ್ವಾ, ಬಂದತಕ್ಷಣ ಇಲಾಖೆಯ ತಳಮಟ್ಟ ಪರೀಕ್ಷಿಸಿದರು: ನಮ್ಮ ಸೈನಿಕರಿದ್ದರಲ್ಲಾ ಅವರು ಪ್ರತಿನಿತ್ಯ ಮಾಡುತ್ತಿದ್ದ ಕೆಲಸ ಅಂದರೆ ಕವಾಯತು ಮಾಡೋದು, ತಿನ್ನೋದು, ಮಲಗೋದು ಅಷ್ಟೇಯ. ಇದು ದೇಶಕ್ಕೆ ತುಂಬಲಾರದ ನಷ್ಟ ಆಗಿದೆ, ಆಗುತ್ತಾ ಇದೆ ಎಂದು ಯೋಚಿಸಿದರು. 'ಯಾವುದೇ ಯುದ್ಧ ಇಲ್ಲದೆ ಸೈನಿಕರೆಲ್ಲ ಸೋಮಾರಿಗಳಾಗಿದ್ದಾರೆ. ಯುದ್ಧ ಸಾಮಗ್ರಿಗಳು ತುಕ್ಕು ಹಿಡಿಯುತ್ತಿವೆ' ಎಂದು ನೊಂದು ನುಡಿದಿದ್ದರು. ಅಂತಹ ರಾಷ್ಟ್ರೀಯತೆಯ ಒಳನೋಟ ಇರುವ ಬುದ್ಧಿವಂತರಿವರು. ಅಂತಹ ಬುದ್ಧಿವಂತರು 'ಪಾಕಿಸ್ತಾನಕ್ಕೆ ಹೋದರೆ ನರಕಕ್ಕೆ ಹೋದಂತೆ ಆಗುತ್ತದೆ' ಎಂದು ತೀರ್ಪು ನೀಡಿದ್ದರು. ಅಂತಹ ಬುದ್ಧಿವಂತರ ಮಾತನ್ನೇ ಕಿತ್ತೆಸೆದು ಈ ಪದ್ದೆ ಹುಡುಗಿ ಏನು ಮಾಡ್ತು. 'ಮನೋಹರ ಪರಿಕ್ಕರ್ ಹೇಳಿರುವ ತರಹ ಪಾಕಿಸ್ತಾನ ಇಲ್ಲ, ಅಲ್ಲಿನ ಜನರೂ ನಮ್ಮ ಹಾಗೇ ಇದ್ದಾರೆ. ಒಳ್ಳೆಯ ಜನ. ನಮ್ಮನ್ನ ಚೆನ್ನಾಗಿ ನೋಡಿಕೊಂಡರು' ಎಂದ್‌ಬುಡ್ತು!

ಮನುಷ್ಯ ಮನುಷ್ಯರ ನಡುವೆ ಸಂಬಂಧ ಇರಬೇಕಾದ್ದು ಹೀಗೆ ಅಲ್ವಾ. ಇದರಲ್ಲಿ ಏನೂ ವಿಶೇಷತೆ ಇಲ್ಲ ಅಂತ ಹಲವರಿಗೆ ಅನ್ನಿಸಬಹುದು. ಆದರೆ ವಿಷಯ ಅಷ್ಟು ಸುಲಭ ಅಲ್ಲ, ಇದರ ಸೂಕ್ಷ್ಮತೆ ಅರಿವಾದದ್ದು ಕೆಲವರಿಗೆ ಮಾತ್ರ!

ಪಾಕಿಸ್ತಾನ ಎಂದರೆ ಏನು? ಅದೊಂದು ಶತ್ರು ರಾಷ್ಟ್ರ. ಅಲ್ಲಿರುವವರು ಶತ್ರುಗಳು. ಮನುಷ್ಯರಲ್ಲ, ಇದೇ ಅದರ ಸೂಕ್ಷ್ಮ! ಇದನ್ನು ಅರಿಯದೆ ರಮ್ಯಾ ಅಲ್ಲಿಯೂ ಒಳ್ಳೆಯವರು ಇದ್ದಾರೆ ಎಂಬ ದೇಶದ್ರೋಹ ಹೇಳಿಕೆ ನೀಡಿದ್ದರು!

ಟಿವಿ ಚಾನೆಲ್‌ಗಳು ಚುರುಕಾದೊ. ಬ್ರೇಕಿಂಗ್ ನ್ಯೂಸ್ ಹಾರಾಡಿದೊ; ಶತ್ರು ರಾಷ್ಟ್ರದ ಕುರಿತು ರಮ್ಯಾ ಅವರ ಹೇಳಿಕೆ ಎಷ್ಟು ಸರಿ?

ಪ್ರಶ್ನೆಯಲ್ಲಿಯೇ 'ಘೋರ ಅಪರಾಧ!' ಎಂಬ ಉತ್ತರ ಹುದುಗಿಸಿ ಪದೇ ಪದೆ ಪ್ರಸಾರ ಮಾಡಿದೊ.

ರಮ್ಯಾರ ಹೇಳಿಕೆ ಸಿಟ್ಟಿಗೇಳಿಸಿತೋ ಅಥವಾ ಟಿವಿ ಚಾನೆಲ್‌ಗಳು ಸುದ್ದಿ ಮಾಡಿದ ರೀತಿ ಪ್ರಚೋದಿಸಿತೊ ಗೊತ್ತಿಲ್ಲ, ದೇಶಪ್ರೇಮಿಗಳ ಗುಂಪು ಸೇರಿತು.

ನಡೆಯಿತು ರಸ್ತೆ ತಡೆ.

ಅಣಕ



• ಎಚ್.ಎಲ್.ಕೇಶವಮೂ

ಕೂಗಿತು ರಮ್ಯಾಗೆ ಧಿಕ್ಕಾರ.

ಮಾಡಿತು ರಮ್ಯಾ ಚಿತ್ರಕ್ಕೆ ಚಪ್ಪಲಿ ಸೇವೆ.

ಪುರುಷ ಸ್ತ್ರೀ ಭೇದ ಇರಲಿಲ್ಲ ಈ ಕೈಂಕರ್ಯ

ಟಿವಿಗಳಲ್ಲಿ ಮೆರೆದಾಡಿತು ಮಂಡ್ಯದ ಚಪ್ಪಲಿ

ಸಮಯದ ನಿರ್ಬಂಧ ಇಲ್ಲ, ಯಾವ ಗಳಿಗೆ ಟಿವಿ ಹಾಕಿದರೂ ಈ ಸುದ್ದಿ! ಚಪ್ಪಲಿ ಸೇವಾ ತಮ್ಮ ಸಂಸ್ಕೃತಿಯ ಮೆರೆದಾಟ ಕಂಡು 'ಧನ್ಯೋಸ್ಮಿ' ಕೊಂಡಿರಬೇಕು!

ಬೆಂಗಳೂರಿನಲ್ಲಿ ಜಗ್ಗೇಶ್ ಎಂಟ್ರಿ ಕೊಟ್ಟರು.

ಜಗ್ಗೇಶ್‌ಗೂ ಪಾಕ್‌ಗೂ ಅವಿನಾಭಾವ ಸಂ ಪಾಕ್ ನಾಶ ಮಾಡುವ ಅಸ್ತ್ರ ಅವರಿಗೆ ತಿ ಭಾರತೀಯರೆಲ್ಲರೂ ಒಟ್ಟಿಗೆ ಉಚ್ಚೆ ಉಯ್ದರೆ ಪಾಕ್ ಹೋಗುತ್ತೆ! ಇದೇ ಜಗ್ಗೇಶ್ ಮಂತ್ರ. ಅದೇ ಭಾಷೆಯ ರಮ್ಯಾ ಹೇಳಿಕೆಗಾಗಿ ಆಕೆಯನ್ನ ಛೇಡಿಸಿದರು.

ಅವರ ಈ ವೀರಾವೇಶದ ನುಡಿ ಬಂ ಅಹೋರಾತ್ರಿ ಧರಣಿ ಮಾಡುತ್ತಿದ್ದ ಎಬಿವಿಪಿಯ ಹೈಕಳ ಎದುರು!

ಮಹಾಭಾರತದ ಉತ್ತರ ಕುಮಾರ ನೆನಪಾದರು ಜವಾಬ್ದಾರರಲ್ಲ!

ಚಾನೆಲ್‌ಗಳಿಗೆ ಸುಗ್ಗಿ!

ಟಿವಿ ಪರದೆಯ ಒಂದು ಭಾಗ ರಮ್ಯಾ ಅದರ ಪಕ್ಕದ ಭಾಗದಲ್ಲಿ ಜಗ್ಗೇಶ್‌ರ ಐಲಾಟ!

ಹಗಲು ರಾತ್ರಿ ಇದೇ ಸುದ್ದಿ.

ಆದರೂ ಕೆಲವು ಮಾಧ್ಯಮಗಳಿಗೆ ಅತೃಪ್ತಿ!

ಯಾಕೆ ಅತೃಪ್ತಿ?

ಅವು ನಿರೀಕ್ಷಿಸದಷ್ಟು ಪ್ರತಿಭಟನೆ ನಡೆಯುತ್ತಿ

ಆದರೂ ಅವು ತಮ್ಮ ಪ್ರಯತ್ನ ನಿಲ್ಲಿಸಲಿಲ್ಲ. ಮಾಡಿದವು:

ರಮ್ಯಾರಿಂದ ಕಾಂಗ್ರೆಸ್‌ಗೆ ಸಂಕಷ್ಟ!

(ಪಾಕಿಸ್ತಾನದಲ್ಲೂ ಮನುಷ್ಯರಿದ್ದಾರೆ ಎಂದದ್ದು ಕಾಂ ಸಂಕಷ್ಟ ತಂದಿತ್ತಂತೆ!)

ರಾಜ್ಯದಾದ್ಯಂತ ರಮ್ಯಾ ವಿರುದ್ಧ ಪ್ರತಿಭಟನೆ.

ರಮ್ಯಾ ಹೇಳಿಕೆಯಿಂದ ಭುಗಿಲೆದ್ದ ಆಕ್ರೋಶ.

ಕ್ಷಮಾಪಣೆ ಕೇಳುವವರೆಗೂ ಪ್ರತಿಭಟನೆ ನಿಲ್ಲ

ಆಕ್ರೋಶ ಭುಗಿಲೆದ್ದಿತ್ತು ನಿಜ. ಎಲ್ಲಿ ಟಿವಿಗಳಲ್ಲಿ!

* * *

ಇವನ್ನೆಲ್ಲ ಚನ್ನಮ್ಮಜ್ಜಿಗೆ ವಿವರಿಸುತ್ತಾ ಇದ್ದೆ.

ಅಂದಹಾಗೆ ಈ ಚನ್ನಮ್ಮಜ್ಜಿ ದೇವೇಗೌಡರ ಅಭಿಮಾನಿ!

'ಹಿಂಗೆಲ್ಲ ನಡದದಪ್ಪಾ' ಅಂತ ಆಶ್ಚರ್ಯವ್ಯಕ್ತಪಡಿ

'ಇಷ್ಟೇ ಏನು ಕಂಡಿ ನೀನು. ಪ್ರಹ್ಲಾದ ಅನ್ನೋನು ರಮ್ಯಾ ಪಾಕಿಸ್ತಾನಕ್ಕೋಗ್ಲಿ ಅಂದವ್ನೆ'

'ಅವನ ಮಕ್ಕೆ ಯಾರೂ ಉಗೀಲಿಲ್ವ' ಅಂದಳು


ಯೋಗೇಶ್ ಮಾಸ್ಟರ್
ಪುರಾಣದ ಹೂರಣ

ಯೋಗದ ಮೂಲ



ಪ್ರಕೃತಿಯ ಶಕ್ತಿಯೊಡನೆ ವ್ಯಕ್ತಿಯ ಶಕ್ತಿಯನ್ನು ...ಾಗಿಸಿ ಕೊಳ್ಳುವುದಕ್ಕೆ ಅನೇಕ ತಂತ್ರಗಳನ್ನು ...ೋಗಿಸುವಂತೆ ಮಂತ್ರವೂ ಒಂದು. ಮಂತ್ರದ ...ರಣೆಯಿಂದ ತಮ್ಮ ಶಕ್ತಿ ಪ್ರಕೃತಿಯ ಮಹಾಶಕ್ತಿಯೊಡನೆ ...ಾ ಅದರ ಶಕ್ತಿ ತಮ್ಮ ಶಕ್ತಿಯೊಡನೆ ವಿಲೀನವಾಗು ...ಬುದು ಒಂದು ಅಂತರ್ಯದ ನಂಬಿಕೆ. ಅದೇ ...ತ್ರ ಯೋಗ. ಯೋಗವೆಂದರೆ ಸೇರುವುದು. ಒಂದಾಗು ... ವ್ಯಕ್ತಿಯ ಆಂತರಿಕ ಶಕ್ತಿ ಪ್ರಕೃತಿಯ ಆಂಕರಿಕ ...ತ್ತು ವ್ಯಾಪಕ ಶಕ್ತಿಯೊಡನೆ ವಿಲೀನಗೊಳಿಸಿಕೊಳ್ಳುವುದು.

...ಆದರೆ ಲೌಕಿಕ ವ್ಯವಹಾರಗಳಲ್ಲಷ್ಟೇ ಮುಳುಗಿರುವ ...ಾನ್ಯ ಜನರಿಗೆ ಈ ಮಂತ್ರವೆನ್ನುವುದು ಒಂದು ಆಸೆಯ ... ಧನಪ್ರಾಪ್ತಿಗೆ ಲಕ್ಷ್ಮೀಮಂತ್ರ, ವಿದ್ಯೆಯ ಪ್ರಾಪ್ತಿಗೆ ...ೀ ಮಂತ್ರ, ಶಕ್ತಿ ಸಂವರ್ಧನೆಗೆ ಗಾಯತ್ರೀ ಮಂತ್ರ, ... ಭೂತ ಇತ್ಯಾದಿಗಳ ಬಾಧೆ ನಿವಾರಣೆಗೆ ಹನುಮಾನ್ ...ತ್ರ- ಒಟ್ಟಾರೆ ಯಾವುದೇ ಬಯಕೆಗಳಿಗೂ, ...ರೋಗಗಳ ನಿವಾರಣೆಗೂ, ಇಷ್ಟಾರ್ಥಗಳ ಸಿದ್ಧಿಗೂ ...ೇಡ್ ಮಂತ್ರಗಳಿವೆ.

...ಮಂತ್ರ ಅಂದಕೂಡಲೇ ಮುಗಿದುಹೋಯಿತು. ...ದ ಆಸ್ತಿಕರು ತಟ್ಟನೆ ಗಂಭೀರವಾಗಿಬಿಡುತ್ತಾರೆ. ...ರಲ್ಲೂ ಸಂಸ್ಕೃತದಲ್ಲಿ ಇರುವಂತಹ ಸಾಲಾದರೆ ...ೋಯ್ತು. ಅದೇನಿದ್ದರೂ ಅದನ್ನು ಮಂತ್ರ ಅಂದ್ಕೊಂಡು ...ಬಿಟ ಅಂತಿರ್ತಾರೆ. ಸಂಸ್ಕೃತದ ಪ್ರಭಾವ ಅಷ್ಟು ...ಾವಪೂರ್ಣವಾಗಿದೆ.

ಸರಸದ ಭಕ್ತಿ

...ಎಂ.ಎಸ್.ಸುಬ್ಬುಲಕ್ಷ್ಮಿ ಹಾಡಿರುವ ವೆಂಕಟೇಶ್ವರ ...ಭಾತ ದಿಂದಲೇ ದೈವೀಭಕ್ತಿಯ ದಿನವು ಪ್ರಾರಂಭ ...ತ್ತಿದ್ದ ಕಾಲವಿತ್ತು. ಈಗಲೂ ಆ ಛಾಯೆ ಪೂರ್ತಿ ...ೀಗಿಲ್ಲ. ಅದರಲ್ಲಿನ ಒಂದು ಚರಣ:

...ಕಮಲಾಕುಚ ಚೂಚುಕ ಕುಂಕುಮತೋ
...ರುಣಿ ತಾರುಣಿ ತಾತುಲ ನೀಲತನೋ
...ಕಮಲಾಯತ ಲೋಚನ ಲೋಕಪತೇ
...ವಿಜಯೀ ಭವ ವೆಂಕಟ ಶೈಲಪತೇ

ಅಂದರೆ, "ಹೇ, ವೆಂಕಟೇಶ್ವರ ವಿಭೋ, ಹಿಂದಿನ ... ಸರಸದ ಸಮಯದಲ್ಲಿ ಲಕ್ಷ್ಮೀದೇವಿಯನ್ನು ...ದಪ್ಪಿಕೊಂಡು ಮಲಗಿರುವೆಯೇನೋ. ಕಮಲದಂತೆ ...ವ ಲಕ್ಷ್ಮಿಯ ಸ್ತನಗಳು ನೀಲಿ ಬಣ್ಣದ ನಿನ್ನ ದೇಹಕ್ಕೆ ...ಕ್ಕಿ ಚುಚ್ಚಿ ನಿನ್ನ ವಕ್ಷಸ್ಥಳವು ಕೆಂಪಾಗಿದೆ ನೋಡಿದೆಯಾ! ...ಲ ಲೋಚನನೇ ನಿನಗೆ ವಿಜಯವಾಗಲಿ" ಎಂದರ್ಥ. ...ೀನಿಲ್ಲ ಬಿಡಿ. ವೆಂಕಟೇಶ ಎಂಬೋನು ಅವನ ಹೆಂಡತಿ ... ಜೊತೆ ಅಷ್ಟು ಸರಸವಾಗಿ ತಬ್ಬಾಡಿಕೊಂಡರೆ ನಾವ್ಯಾಕೆ ಕೆಡಿಸಿಕೊಳ್ಳಬೇಕು. ಆದರೆ ಸಮಸ್ಯೆ ಅದಲ್ಲ.

"ಸರಸದ ಸಮಯದಿ ಲಕುಮಿಯ ಕಮಲದಂತ ...ಲೆಗಳು, ನಿನಗುಜ್ಜಿ ಉಜ್ಜಿ ನೀಲಶರೀರದ ನಿನ್ನೆದೆ ...ಾಯ್ತು" ಅಂತ ಅದೇ ಕನ್ನಡದಲ್ಲಿ ಬರೆದಿದ್ದರೆ ಅಥವಾ ...ವುದೇ ನಮ್ಮ ಆಡು ಭಾಷೆಯಲ್ಲಿ ಬರೆದಿದ್ದರೆ ...ೊಂದು ಬೇರೆ ರೀತಿಯ ಗೀತೆಯೆಂದೇ ಪರಿಗಣಿಸು ...ೇ ಹೊರತು, ದೇವರ ಮುಂದೆ ನಿಂತು ಹಾಡುವಂತಹ ...ಗೀತೆಯೆಂದು ಖಂಡಿತ ಆಸ್ತಿಕ ಮಹಾಶಯರು ...ಗಣಿಸುತ್ತಿರಲಿಲ್ಲ.

... ಸುವಕ್ಷೋಜ ಕುಂಭ ಅಂತ ಸರಸ್ವತಿಯ ಕುಚಗಳನ್ನೇ ...ಡುತ್ತಾ ತನ್ನ ಶಾರದಾ ಭುಜಂಗವನ್ನು ಶುರು ಹಚ್ಚಿಕೊಂಡ ...ರಾಚಾರ್ಯನಾಗಲಿ, ಕುಚೋನ್ನತೇ ಕುಂಕುಮ ರಾಗ ...ೇ ಎಂದು ದೇವಿಯ ಉನ್ನತವಾಗಿರುವ ಕುಚಗಳನ್ನು ...ಸುತ್ತಾ ಸ್ತುತಿಸುವ ಕಾಳಿದಾಸನಾಗಲಿ ಬರೆದಿರುವ ...ೇಕಾನೇಕ ಸ್ತುತಿಗಳು ಸಂಸ್ಕೃತದಲ್ಲಿರುವುದರಿಂದ ...ೀರವಾಗಿ ಕಣ್ಮುಚ್ಚಿಕೊಂಡು ದೇವಸ್ಥಾನದಲ್ಲಿ ಭಕ್ತಿಯಿಂದ ...ಳಲು ಸಾಧ್ಯ. ಅದೇ ಸ್ಥಳೀಯ ಭಾಷೆಯಲ್ಲಿದ್ದರೆ ಅದರ ...ೇ ಬೇರೆಡೆಯಿರುತ್ತಿತ್ತು, ಇದು ಹಾಗೇ ಆಗುವುದು. ...ವುದು ನಿಗೂಢವೆನಿಸುವುದೋ, ಕಷ್ಟವೋ, ಅರಿವಿಗೆ ...ಿಚಿತವಾಗಿದ್ದು ರೂಢಿಗೆ ಪರಿಚಿತವಾಗಿರುವುದೋ ...ಷೆಲ್ಲಾ ಶ್ರೇಷ್ಠವೆಂದು ಬಹುಮಂದಿಗೆ ಅನ್ನಿಸಿಬಿಡುತ್ತದೆ.

ಮನನದಿಂದ ಭಾವನ

"ಮನನಾತ್ ತ್ರಾಯತೇ ಇತಿ ಮಂತ್ರ" ಎಂದರೆ, ...ದೇ ಸಮನೆ ಮನನ ಮಾಡುತ್ತಿರುವುದೇ ಮಂತ್ರವಾಗುತ್ತದೆ. ... ಗಣಪತಯೇ ನಮಃ ಅಥವಾ ಓಂ ನಮೋ ...ನಾರಾಯಣಾಯ ಇತ್ಯಾದಿ ಸಾಲುಗಳು, ಗಾಯತ್ರೀಮಂತ್ರ, ...ಗಳಲ್ಲಿ ಯಾವುದೇ ಶಕ್ತಿ ಇಲ್ಲ, ಆದರೆ, ನಾನೊಂದು ...ವನ್ನು ಹೇಳುತ್ತಿದ್ದೇನೆ. ಈ ಮಂತ್ರದಿಂದ ಹೀಗಾಗುತ್ತದೆ ಎಂದು ನಂಬಿಕೊಂಡು, ಸತತವಾಗಿ ಅಂದುಕೊಂಡು ಕೆಲಸ ಮಾಡಿದರೆ ಅವರ ಸ್ವಪ್ರಯತ್ನ ಫಲ ಕೊಡಬಹುದೇನೋ. ಆದರೆ, ಆ ಯಶಸ್ಸನ್ನು ಮಾತ್ರ ಮಂತ್ರಕ್ಕೆ ಕೊಟ್ಟುಕೊಳ್ಳುತ್ತಾರೆ. ಇನ್ನು ಈಗ ಒಂದೇಸಮನೆ ಮಂತ್ರಗಳನ್ನು ಮಧುರವಾಗಿ ಲಹರಿ ಲಹರಿಗಳಂತೆ ಹರಿಬಿಡುವ ಇಲೆಕ್ಟ್ರಾನಿಕ್ ಉಪಕರಣಗಳಿವೆ. ಅವುಗಳನ್ನು ಸ್ವಿಚ್‌ಆನ್ ಮಾಡಿಬಿಟ್ಟರೆ ಆಯಿತು. ಅದು ಗಾಯತ್ರೀ ಮಂತ್ರವನ್ನೋ ಮತ್ತೊಂದನ್ನೋ ಒಂದೇ ಸಮನೆ ಪುನರುಚ್ಚರಿಸುತ್ತಲೇ ಇರುತ್ತದೆ. ಈ ಮಂತ್ರಗಳು ನಿರಂತರ ಹರಿಸುವ ಲಹರಿಗಳಿಂದ ತರಂಗಗಳು, ಅದರಲ್ಲೂ ಸಕಾರಾತ್ಮಕ ತರಂಗಗಳು ಹೊರಸೂಸುತ್ತಾ ವಾತಾವರಣದಲ್ಲಿರುವ ನಕಾರಾತ್ಮಕ ತರಂಗಗಳನ್ನು ತೊಡೆದುಹಾಕುತ್ತದೆ ಎಂದು ಮಂತ್ರಗಳಿಗೆ ಭೌತಶಾಸ್ತ್ರದ ತರಂಗಗಳ ಥಿಯರಿಯನ್ನು ತಂದು ಜೋಡಿಸಿಬಿಡುತ್ತಾರೆ. ಅದನ್ನು ನಮ್ಮ ಈಗಿನ ಆಸ್ತಿಕರು ವೈಜ್ಞಾನಿಕವಾಗಿ ಅರ್ಥೈಸಲು ಯತ್ನಿಸುವರು. ಅದೊಂದು ವ್ಯರ್ಥ ಮತ್ತು ಅನರ್ಥ ಪ್ರಯತ್ನ. ತರಂಗಗಳು ಇರುವುದಾಗಲಿ, ಅವುಗಳಲ್ಲಿ ಸಂದೇಶಗಳು ರವಾನೆಯಾಗುವುದಾಗಲಿ, ಅದರಿಂದ ಪ್ರೇರಣೆ, ಸ್ಫುರಣಗಳಾಗುವುದಾಗಲಿ ಯಾವುದೂ ಸುಳ್ಳಲ್ಲ. ಅದಕ್ಕೆ ಬೇರೆಯೇ ವಿಧಾನಗಳಿವೆ. ತಂತ್ರಗಳಿವೆ. ಅಂತಹ ಶಕ್ತಿ ಸಂವರ್ಧನೆ ಅಥವಾ ಶಕ್ತಿಯ ಆವಾಹನೆಗಾಗಿಯೇ ಯಂತ್ರ, ಮಂತ್ರ ಮತ್ತು ತಂತ್ರಗಳೆಂಬ ತಂತ್ರಗಳು ಆವಿಷ್ಕಾರಗೊಂಡಿದ್ದು. ಆದರೆ, ಪುನರಾವರ್ತಿತವಾಗಿ ಒಂದು ಮಂತ್ರವನ್ನು ಹೇಳುತ್ತಿದ್ದರೆ ಅಥವಾ ಇಲೆಕ್ಟ್ರಾನಿಕ್ ಉಪಕರಣದಲ್ಲಿ ಮಂತ್ರ ಹೊರಹೊಮ್ಮುತ್ತಿದ್ದರೆ ಏನೂ ಆಗುವುದಿಲ್ಲ. ಹಾಗೇನೋ ಧನಾತ್ಮಕ ತರಂಗಗಳು ಸುತ್ತಲೂ ಉಂಟಾಗುತ್ತಿವೆ ಎಂದು ಭ್ರಾಮಕಸ್ಥಿತಿಯಲ್ಲಿ ವ್ಯಕ್ತಿ ನೆಮ್ಮದಿಯಿಂದ ಇರಬಹುದು.

ಈ ಯಂತ್ರ ಮಂತ್ರ ತಂತ್ರಗಳ ಆಚರಣೆಯಲ್ಲಿ ಇಂಥಾ ಭ್ರಾಮಕಸ್ಥಿತಿಗಳದ್ದೇ ಬಹುಪಾಲು ಕಾರುಬಾರು.

ಆಟೋ ಸಜೇಶನ್ ಮಂತ್ರಗಳು

ಇನ್ನು ಮಂತ್ರಗಳ ಕಾರ್ಯಾಚರಣೆಯನ್ನು ಪಾಶ್ಚಾತ್ಯ ಮನಶಾಸ್ತ್ರಜ್ಞರು ಆಟೋ ಸಜೇಶನ್‌ಗಳೆಂದು ಕರೆದು, ಅರ್ಥವಾಗದ ಭಾಷೆಯಲ್ಲಿ ಬಡಬಡಿಸುವ ಸಾಲುಗಳನ್ನು ಹೇಳುವುದರ ಬದಲು, ನೇರವಾಗಿ ತಮಗೆ ಸಕಾರಾತ್ಮಕವಾಗಿ ಕಾಣುವ ಸಾಲುಗಳನ್ನೇ ಪುನರುಚ್ಚರಿಸುತ್ತಾ, ಪದೇ ಪದೇ ಪುನರುಚ್ಚರಿಸುತ್ತಾ, ಮನಸ್ಸಿನ ಆಳಕ್ಕಿಳಿಸಿಕೊಳ್ಳುವ ತಂತ್ರವನ್ನೂ ಅಭ್ಯಾಸಕ್ಕೆ ತಂದರು.


"ನಾನು ದಿನದಿನಕ್ಕೂ, ಹೊತ್ತುಹೊತ್ತಿಗೂ ಉತ್ತಮ ಗೊಳ್ಳುತ್ತಿದ್ದೇನೆ" ಎಂದೋ, "ನನ್ನಲ್ಲಿರುವ ಸಾಮರ್ಥ್ಯ ಮತ್ತು ಶಕ್ತಿಗಳು ನನಗೆ ಒಳಿತಾಗುವಂತಹ, ನನ್ನ ಕೆಲಸಗಳಿಗೆ ಪೂರಕವಾಗುವಂತಹ ವಿಷಯಗಳನ್ನು ಆಕರ್ಷಿಸುತ್ತವೆ" ಅಥವಾ "ನನ್ನಲ್ಲಿ ಶಕ್ತಿ ಇದೆ ಮತ್ತು ಸಾಮರ್ಥ್ಯವಿದೆ. ನಾನು ನನಗೆ ಯಶಸ್ಸನ್ನು ಪಡೆದುಕೊಳ್ಳುವಂತಹ ಕೆಲಸಗಳನ್ನು ಸಮರ್ಥವಾಗಿ ನಿಭಾಯಿಸುತ್ತೇನೆ" ಎಂದು ಹೇಳಿಕೊಡುತ್ತಾರೆ. ಇದೂ ಕೂಡ ವಾಸ್ತವತೆಗಿಂತ ಅತಿಯಾಗಿ ಭ್ರಾಮಕ ಸ್ಥಿತಿಗಳಿಗೆ ಅಧೀನವಾಗುವಂತಹ ಅಪಾಯಗಳೇನೋ ಇವೆ. ಆದರೆ, ಸರಳ ಧನಾತ್ಮಕ ಚಿಂತನೆಗಳಿಗೆ ಪ್ರೇರಕವಾಗುವಂತಹದ್ದು ಎಂಬುದೇನೂ ಸುಳ್ಳಲ್ಲ. ವ್ಯಕ್ತಿತ್ವ ವಿಕಸನ ಶಿಬಿರಗಳಲ್ಲಿ



ಸಕಾರಾತ್ಮಕ ಚಿಂತನೆಗಳಿಂದ ಧನಾತ್ಮಕ ತರಂಗಗಳು ಏರ್ಪಟ್ಟು ಎಲ್ಲವೂ ಸರಿಹೋಗಿಬಿಡುತ್ತದೆ ಎಂಬಂತಹ ಅತಿ ನಂಬುಗೆಗೆ ಹಚ್ಚುವುದು ಕೂಡ ಮಿಥ್ ಆಗಿಯೇ ಕಾಣುತ್ತದೆ.

ಇನ್ನು ಗಾಯತ್ರಿ ಮಂತ್ರವನ್ನು ಕುರಿತ ಮಿಥ್‌ಗಳಿಗಂತೂ ಏನೂ ಕೊರತೆಯಿಲ್ಲ. ಗಾಯತ್ರೀಮಂತ್ರಕ್ಕಿಂತ ಶ್ರೇಷ್ಠವಾದ ಮಂತ್ರ ಇನ್ನೊಂದಿಲ್ಲ. ಅದೊಂದು ಮಹಾಶಕ್ತಿಶಾಲಿ ಮಂತ್ರ. ಸರ್ವವೇದಗಳ ಸರ್ವಶಾಸ್ತ್ರಗಳ ಸರ್ವಸ್ಮೃತಿಗಳ ಶಕ್ತಿ ಈ ಗಾಯತ್ರೀಮಹಾಮಂತ್ರದಲ್ಲಿದೆ ಎಂದು ಮಾಡಿರುವ ಪ್ರಚಾರವನ್ನು ಎಲ್ಲರೂ ಬಹು ಗಂಭೀರವಾಗಿ ಮಾನ್ಯ ಮಾಡಿರುವರು.

"ಓಂ ಭೂರ್ಭುವಸ್ವಃ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧಿಯೋ ಯೋನಃ ಪ್ರಚೋದಯಾತ್"



ಇದೊಂದು ಸುಂದರವಾದ, ಅರ್ಥವೂ ಕೂಡ ನಿಸರ್ಗದ ಆಂತರಿಕ ಶಕ್ತಿಯನ್ನು ಸಂಕೇತಿಸುವಂತಹ ಸಾಲುಗಳೇ ಆಗಿವೆ. ಆದರೆ, ಪ್ರಚಲಿತದಲ್ಲಿರುವಂತೆ, ಚಂದಮಾಮ ಕಥೆಯಲ್ಲಿ ನಡೆದುಬಿಡುವಂತೆ ಈ ಮಂತ್ರೋಚ್ಚಾರಣೆಯಿಂದ ಅಥವಾ ಯಾವುದೇ ಮಂತ್ರೋಚ್ಚಾರಣೆಯಿಂದ ಏನೂ ಆಗದು. ಆದರೆ, ಯಾವುದೇ ಒಂದು ವಿಷಯವನ್ನು ಪದೇ ಪದೇ ಮನನ ಮಾಡುವುದರಿಂದ, ಭಾವಿಸುವುದರಿಂದ, ಚಿಂತಿಸುವುದರಿಂದ ಮಾನಸಿಕವಾಗಿ, ಮನಸ್ಸಿನಾಳಕ್ಕೆ ಭಾವನೆಯ ಅಥವಾ ವಿಚಾರದ ಸೂಕ್ಷ್ಮತೆಯನ್ನು ಒಯ್ಯುವುದರಿಂದ ಸಂಗತಿಗಳ ಕಾರಣ ಮತ್ತು ಪರಿಣಾಮಗಳನ್ನು ಕಾಣಬಹುದು.

ಒಟ್ಟಾರೆ, ಮಂತ್ರವೆಂದು ಏನೇನೋ ತಮಗೆ ಬರದ ಭಾಷೆ ಯಲ್ಲಿರುವ ಸಾಲುಗಳನ್ನು ಉಚ್ಚರಿಸುತ್ತಾ ಭ್ರಮೆಗೊಳಗಾಗುವುದು ಕೂಡ ಇಂದು ನಿನ್ನೆಯದಲ್ಲ.

ಲೋಕಾಯತದಲ್ಲಿ

ದೇವಿಪ್ರಸಾದ್ ಚಟ್ಟೋಪಾಧ್ಯಾಯ ತಮ್ಮ ಲೋಕಾಯತದಲ್ಲಿ ಇವುಗಳ ಬಗ್ಗೆ ಉಲ್ಲೇಖಿಸುತ್ತಾರೆ.


ನಮ್ಮ ಸಾಂಸ್ಕೃತಿಕ ಇತಿಹಾಸದಲ್ಲಿ ಇದ್ದಂತಹ ಮಾತೃಪ್ರಧಾನ ಸಮಾಜವು ಕೃಷಿ ಆಧಾರಿತ ಸಮಾಜ. ಅಲ್ಲಿ ಸ್ತ್ರೀತತ್ವವಾದ ಪ್ರಕೃತಿ ಅಂತಿಮ ಸತ್ಯ. ಅದೇ ಭೌತ ಕಾರಣ. ನಿಮಿತ್ತ ಕಾರಣ. ಇದನ್ನು ಮುಖ್ಯವಾಗಿ ಪ್ರತಿನಿಧಿಸಿದ್ದು ತಂತ್ರ ಮತ್ತು ಸಾಂಖ್ಯ. ತಾಂತ್ರಿಕ ಆಚರಣೆಗಳು ಆದಿಮ ಕೃಷಿಹಂತದ ವಿಶಿಷ್ಟ ಆಚರಣೆಗಳು. ಯೋಗದ ಉಗಮವನ್ನು ಇದರಲ್ಲಿ ಅರಸಬೇಕೇ ವಿನಃ ಭಾವನಾದಿ ಉಪನಿಷತ್ತುಗಳಲ್ಲಿ ಮತ್ತು ಯೋಗ ಸೂತ್ರದಲ್ಲಿ ಅಲ್ಲ. ಏಕೆಂದರೆ, ಅವೈದಿಕ ಸಂಪ್ರದಾಯದಲ್ಲಿ ಯೋಗದ ಆಚರಣೆಗಳು ವೈದಿಕ ಸಂಪ್ರದಾಯದಲ್ಲಿದ್ದಂತೆ ಮಾರ್ಪಾಟು ಹೊಂದಲಿಲ್ಲ. ಧೋರಣೆಗಳು ಯಥಾಪ್ರಕಾರ ಉಳಿದವು.

ಹಾಗಿದ್ದರೆ ಯೋಗಾಚರಣೆಗಳ ಆದಿಮ ಅಥವಾ ಮೂಲ ಪ್ರಾಮುಖ್ಯತೆ ಏನು? ಅವು ಅಲೌಕಿಕ ಅಥವಾ ಅರ್ಥರಹಿತ ಖಂಡಿತ ಅಲ್ಲ.

ಆದಿಮ ಕಾಲದಲ್ಲಿ ಮಾಂತ್ರಿಕತೆಯ ಪಾತ್ರವಿತ್ತು. ಅದು ನಿಜ ಕೌಶಲಕ್ಕೆ ನೆರವು ನೀಡುವ ಭ್ರಾಮಕ ಕೌಶಲ. ಆದಿಮ ಜನಸಮುದಾಯದ ಉಳಿವು ಈ ಮಾಂತ್ರಿಕತೆಯ ಸಾಫಲ್ಯವನ್ನವಲಂಬಿಸಿತ್ತು. ಸಾಫಲ್ಯ ಪಡೆಯಲು ಮಾಂತ್ರಿಕನು ಉನ್ಮಾದದಿಂದ ಕೆರಳಿದವನಂತೆ ತನ್ನ ಮೇಲೆ ಆವಾಹನೆ ಮಾಡಿಕೊಳುವುದು, ವಿಭ್ರಮವನ್ನು ಪ್ರದರ್ಶಿಸುವುದು, ತನ್ನಲ್ಲಿ ಯಾವುದೋ ಅತಿಮಾನವ ಶಕ್ತಿ ಹೊಮ್ಮಿದೆಯೆಂಬಂತೆ ಭಾವಿಸಿಕೊಳ್ಳುವುದು, ಎಲ್ಲಾ ಬೇಕಿತ್ತು. ಅವುಗಳ ಸಹಾಯದಿಂದ ಪ್ರಕೃತಿಯ ಶಕ್ತಿಗಳನ್ನು ತನ್ನ ನಿಯಂತ್ರಣದಲ್ಲಿರಿಸಿಕೊಂಡ ಮಾನಸಿಕ ಸ್ಥಿತಿ ಏರ್ಪಡುತ್ತಿತ್ತು. ನೈಜ ಭೌತಿಕ ಸತ್ಯವೇನೂ ಬದಲಾಗುತ್ತಿರಲಿಲ್ಲ. ಅವನ ಮನಸ್ಸು ಅದು ಬದಲಾಯಿಸಿತೆಂಬಂತೆ ಪರಿಭಾವಿಸಿಕೊಳ್ಳುತ್ತಿತ್ತು. ಇಂತಹ ಮನಸ್ಥಿತಿಯನ್ನು ತಲುಪುವುದೆಂತು? ಅದಕ್ಕೆ ವಿವಿಧ ತಂತ್ರಗಳನ್ನು ಬಳಸಿಕೊಂಡ. ಅವು ದೈಹಿಕ ವ್ಯಾಯಾಮ, ಶ್ವಾಸದ ನಿಯಂತ್ರಣ, ಉಪವಾಸ, ಇಂದ್ರಿಯ ಪ್ರತ್ಯಾಹಾರ, ಸ್ವ-ಹಿಂಸೆ, ಮಾದಕದ್ರವ್ಯ ಸೇವನೆ, ಇತ್ಯಾದಿ ರೂಪಗಳಲ್ಲಿರುತ್ತಿದ್ದುವು. ಇವುಗಳಿಂದ ವಿಕೃತ ಮಾನಸಿಕ ಉನ್ಮಾದ, ಕೆಲವೊಮ್ಮೆ ಮೂರ್ಛೆ ಹೋದಂತಹ ಬರುಸು ಮತ್ತು ಪ್ರಜ್ಞಾಹೀನತೆ ಸಾಧ್ಯವಿತ್ತು. ಯೋಗದ ಅಭ್ಯಾಸಗಳಿಗೆ ಮೂಲವನ್ನು ಇದರಲ್ಲಿ ಅರಸಬೇಕೇ ವಿನಃ ಬರ್ಬರತೆಯ ಹಂತದ ಮನಸ್ಸು ಕಲ್ಪಿಸಿಕೊಳ್ಳುವ ಪುರಾಣಗಳಲ್ಲಿ ಅಲ್ಲ. ಅದರ ಮೂಲ ಉದ್ದೇಶವಿದ್ದದ್ದು ಪ್ರಕೃತಿಯನ್ನು ತಹತೋಟಿಗೆ ತಂದುಕೊಳ್ಳುವುದೇ ಹೊರತು ಆಧ್ಯಾತ್ಮ ಪ್ರಪಂಚದೊಡನೆ ಸಂಸರ್ಗ ಹೊಂದುವುದು ಅಲ್ಲ.

ಇದೇ ಮುಂದುವರಿದಂತೆ ಪ್ರಕೃತಿಯಿಂದ ಅಧ್ಯಾತ್ಮಕ್ಕೆ ಬದಲಾದ ಕತೆ ಮಾತ್ರ ಕುತೂಹಲಕರ. ■

ಬಸ್ಯಾನ ಮತ್ತೊಂದು ಬೂಸಿ




ಮೊನ್ನೆ ಆಗಸ್ಟ್ 15ರಂದು ಮೋದಿ ತನ್ನ ಪೇಟೆಂಟ್ ಹಾವಭಾವಗಳೊಂದಿಗೆ ದಿಲ್ಲಿಯ ಕೆಂಪುಕೋಟೆಯಿಂದ ಸುಮಾರು 94 ನಿಮಿಷಗಳ ಕಾಲ ಕೊರೆದ ಕಪಟ ಆವೇಶದ ಮಾತುಗಳನ್ನು ಕೇಳುತ್ತಾಕೇಳುತ್ತಾ ಆರಾಮಾಗಿ ಗೊರಕೆ ಹೊಡೆಯತೊಡಗಿದ್ದ ಅಸಂಖ್ಯಾತ ಮಂದಿಯ ಪೈಕಿ ಖುದ್ದು ಮೋದಿಯ ಪರಮಾಪ್ತರಾದ ಜೇಟ್ಲಿ, ಪರಿಕ್ಕರ್‌ರಂಥವರೇ ಇದ್ದರೆಂದ ಮೇಲೆ ಬೈರಿಗೆಯ ಮಟ್ಟ ಹೇಗಿದ್ದಿರಬೇಕೆಂದು ಯಾರಾದರೂ ಊಹಿಸಬಹುದು. ತಾನು ಯಾವ ವಿಷಯದ ಮೇಲೆ ಮಾತಾಡಬೇಕು, ಸಲಹೆಗಳನ್ನು ಕೊಡಿ ಎಂದು ನಾಟಕೀಯವಾಗಿ ಜನರನ್ನು ಕೇಳಿದ ವ್ಯಕ್ತಿ ಅಂತಿಮವಾಗಿ ಯಾವ ಸಲಹೆಗಳನ್ನೂ ಸ್ವೀಕರಿಸದೆ ತನ್ನದೆ ವೈಯಕ್ತಿಕ ಮಾತುಗಳನ್ನಾಡಿದಂತೆ ತೋರುತ್ತದೆ. ಮಾತುಗಾರಿಕೆ ಮಾತ್ರ ಎಂದಿನಂತೆ ಅಮಾಯಕ ಜನರನ್ನು ನಂಬಿಸುವ ರೀತಿಯಲ್ಲಿ ಇತ್ತು. ತಾನು, ತನ್ನಿಂದಾಗಿ, ತನ್ನ ಸರ್ಕಾರ ಎಂಬ ಶಬ್ದಗಳೇ ತುಂಬಿದ್ದ ಭಾಷಣದಲ್ಲಿ ದೇಶದ ಜ್ವಲಂತ ಸಮಸ್ಯೆಗಳಿಗಿಂತ ಅಧಿಕ ಮಹತ್ವವನ್ನು ಕೀಳುಮಟ್ಟದ ಚುನಾವಣಾ ರಾಜಕೀಯಕ್ಕೆ ನೀಡಲಾಗಿತ್ತು, ಅದೂ ಎಷ್ಟರಮಟ್ಟಿಗೆ ಎಂದರೆ ತಪ್ಪು ಮಾಹಿತಿಗಳನ್ನು ನೀಡುವವರೆಗೆ. "ದಿಲ್ಲಿಯಿಂದ ನಾಗ್ಲಾ ಫತೇಲಾ ತಲುಪಲು ಕೇವಲ ಮೂರು ಗಂಟೆ ಸಾಕು. ಆದರೆ ವಿದ್ಯುತ್‌ಶಕ್ತಿ ಅಲ್ಲಿಗೆ ತಲುಪಲು 70 ವರ್ಷಗಳು ಬೇಕಾದವು" ಎನ್ನುತ್ತಾ ಉತ್ತರ ಪ್ರದೇಶದ ಹತ್ರಾಸ್ ಜಿಲ್ಲೆಯ ನಾಗ್ಲಾ ಫತೇಲಾ ಎಂಬ ಹಳ್ಳಿಗೆ ವಿದ್ಯುತ್ ಶಕ್ತಿಯನ್ನು ತಲುಪಿಸಲು ತನ್ನ ಸರ್ಕಾರದಿಂದಷ್ಟೆ ಸಾಧ್ಯವಾಯಿತು ಎಂಬ ತಪ್ಪು ಮಾಹಿತಿಯನ್ನು ದೇಶದ ಜನರಿಗೆ ನೀಡಿದ. ಇಲ್ಲದ "ಮಹತ್ಸಾಧನೆ"ಯನ್ನು ಕೊಚ್ಚಿಕೊಂಡ ಮೋದಿ ಉತ್ತರ ಪ್ರದೇಶವನ್ನೇ ಏಕೆ ಆರಿಸಿದ? ಏಕೆಂದರೆ ಸದ್ಯೋಭವಿಷ್ಯದಲ್ಲಿ ಅಲ್ಲಿ ಅಸೆಂಬ್ಲಿ ಚುನಾವಣೆಗಳು ನಡೆಯಲಿವೆ! ಮೋದಿಯ ಭೀಷಣ ವಾಕ್ಪ್ರವಾಹವನ್ನು ಮೆಚ್ಚಿದ ಎಲ್ಲೆಡೆಗಳ ಭಕ್ತರು ಉಘೇ ಉಘೇ ಎನ್ನುತ್ತಾ ಕಿವಿಗಡಚಿಕ್ಕುವಂತೆ ಕರತಾಡನ ಮಾಡುತ್ತಿದ್ದರೆ ಅತ್ತ ನಾಗ್ಲಾ ಫತೇಲಾದ ಜನ ಮಾತ್ರ ದಂಗು ಬಡಿದುಹೋದರು. ಯಾಕೆಂದರೆ ಅಲ್ಲಿ ದೀನ ದಯಾಳ್ ಉಪಾಧ್ಯಾಯ ಗ್ರಾಮಜ್ಯೋತಿ ಯೋಜನೆಯ ಅಡಿಯಲ್ಲಿ ಒಂದಿಷ್ಟು ಕಂಬಗಳನ್ನು ಊರಿ, ತಂತಿಗಳನ್ನು ಎಳೆದು, ಮೀಟರ್‌ಗಳನ್ನು ಅಳವಡಿಸಲಾಗಿದೆಯಷ್ಟೆ ಹೊರತು ಇದುವರೆಗೂ ವಿದ್ಯುತ್ತಿನ ಸುಳಿವೇ ಕಂಡುಬಂದಿಲ್ಲ! ಒಟ್ಟು 600 ಕುಟುಂಬಗಳು ವಾಸ ಮಾಡುತ್ತಿರುವ ಆ ಹಳ್ಳಿಯಲ್ಲಿ 150 ಮನೆಗಳು ಅನಧಿಕೃತವಾಗಿ ವಿದ್ಯುತ್‌ಸಂಪರ್ಕ ಪಡೆದುಕೊಂಡಿವೆ. ಅದು ಹೇಗೆಂದರೆ 22 ಕೊಳವೆಬಾವಿಗಳಿಗೆಂದು ಮೀಸಲಾಗಿರುವ ಪರಿವರ್ತಕ ಒಂದರಿಂದ ಕಾನೂನುಬಾಹಿರವಾಗಿ ತಂತಿಗಳನ್ನು ಎಳೆಯುವ ಮೂಲಕ. ಇದರ ಬಾಬತ್ತು ಸ್ಥಳೀಯ ವಿದ್ಯುತ್ ಸಂಸ್ಥೆಯಾದ ದಕ್ಷಿಣಾಂಚಲ್ ವಿದ್ಯುತ್ ವಿತರಣ ನಿಗಮಕ್ಕೆ ಎರಡು ತಿಂಗಳಿಗೊಮ್ಮೆ ರೂ. 395/ ಪಾವತಿಸಲಾಗುತ್ತಿದೆ.

ಪ್ರಧಾನಿ ಕಚೇರಿಯಿಂದ ಮಾಧ್ಯಮಗಳಿಗೆ ಲಭ್ಯವಾದ ಚಿತ್ರಗಳಲ್ಲಿ ನಾಗ್ಲಾ ಫತೇಲಾದಲ್ಲಿ ಜನರು ಟಿವಿ ವೀಕ್ಷಿಸುತ್ತಿರುವುದನ್ನು ಕಾಣಬಹುದು. ಆದರೆ ಅವೆಲ್ಲ ಅದೇ ಜಿಲ್ಲೆಯಲ್ಲಿರುವ ಬೇರೊಂದು ಹಳ್ಳಿಯ ಚಿತ್ರಗಳೆಂದು ಅಲ್ಲಿನ ಜನರೇ ದೃಢಪಡಿಸಿದ್ದಾರೆ! 2014ರ ಚುನಾವಣಾ ಪ್ರಚಾರದ ವೇಳೆ ಮಾಧ್ಯಮಗಳ ಮೂಲಕ ಚೀನಾದ ಶಿಡಾಜಿಡಾ ಸ್ಟೇಷನ್‌ನ ಚಿತ್ರಗಳನ್ನು ತೋರಿಸಿ ಗುಜರಾತ್ ರಾಜ್ಯವನ್ನು ದೇಶಕ್ಕೆಲ್ಲ ಮಾದರಿ ಎಂದು ಬಿಂಬಿಸುತ್ತಿದ್ದ ಅದೇ ತಂತ್ರಗಾರಿಕೆ ಇಲ್ಲಿಯೂ ಕಂಡುಬರುತ್ತಿದೆ. "ಉತ್ತರ ಪ್ರದೇಶ ಸರಕಾರ 13.11.2013ರಂದು ವಿದ್ಯುದೀಕರಣದ ಪ್ರಸ್ತಾಪವನ್ನು ಸಲ್ಲಿಸಿದ ಬಳಿಕ 20.12.2013ರಂದು ಕೇಂದ್ರ ಸರಕಾರ ಅದನ್ನು ಮಂಜೂರು ಮಾಡಿದೆ. ತದನಂತರ ದಕ್ಷಿಣಾಂಚಲ್ ವಿದ್ಯುತ್ ವಿತರಣ ನಿಗಮದ ಆಗ್ರಾ ವಿಭಾಗ ಅಕ್ಟೋಬರ್ 2015ರಲ್ಲಿ ಒಂದು ವರದಿ ಸಲ್ಲಿಸಿ ಅಲ್ಲಿ ವಿದ್ಯುದೀಕರಣದ ಕಾರ್ಯ ಮುಗಿದಿದೆ ಎಂದು ತಿಳಿಸಿದೆ" ಎಂದು ಮೋದಿ ಸರ್ಕಾರದ ವಾರ್ತಾ ವಿಭಾಗ ಹೇಳಿದರೆ ಅಂತಹ ಯಾವುದೇ ವರದಿಯನ್ನು ಸರಕಾರಕ್ಕೆ ಕಳುಹಿಸಲಾಗಿಲ್ಲ ಎನ್ನುತ್ತಾರೆ ನಿಗಮದ ಆಲಿಗಢ ವಿಭಾಗದ ಚೀಫ್ ಎಂಜಿನಿ[...] ವಿ.ಎಸ್. ಗಂಗ್ವಾರ್. ಉತ್ತರ ಪ್ರದೇಶದ ಬಿಜ್ನೋರ್ [...] ಹಲ್ದು ಖಾತಾ ಹಳ್ಳಿಯದೂ ಇದೇ ಕಥೆ. [...] ದಾಖಲೆಗಳ ಪ್ರಕಾರ ಕಳೆದ ವರ್ಷವೆ ಅಲ್ಲಿಗೆ ವಿ[...] ಬಂದಿದೆ. ಆದರೆ ಅದೇ ಕ್ಷೇತ್ರದ ಎಂಜಿನಿಯರ್ [...] ಅಲ್ಲಿ ಇನ್ನೂ ಮೂಲ ಹಂದರವನ್ನೇ ರಚಿಸಲಾಗಿ[...]

ಮೊನ್ನೆ ಏಪ್ರಿಲ್‌ನಲ್ಲಿ ಕೇಂದ್ರ ವಿದ್ಯುತ್ [...] ಪೀಯೂಶ್ ಗೋಯಲ್ ಕೂಡ ಇದೇ ತೆರನಾದ[...] ಹೇಳಿಕೆಗಳನ್ನು ಕೊಟ್ಟಿದ್ದಾನೆ. ತಾನು ಸಚಿವನಾಗಿ ಅ[...] ವಹಿಸಿಕೊಂಡಾಗ ಉತ್ತರ ಪ್ರದೇಶ ರಾಜ್ಯ ಗ್ರಾ[...] ಪ್ರದೇಶಗಳ ವಿದ್ಯುದೀಕರಣದಲ್ಲಿ ತುಂಬಾ ಹಿಂದೆ ಬ[...] 2012-13ರಲ್ಲಿ ಕೇವಲ ಮೂರು ಹಳ್ಳಿಗಳಿಗೆ ಸ[...] ನೀಡಲಾಗಿತ್ತು; 2013-14ರಲ್ಲಂತೂ ಒಂದೇ [...] ಹಳ್ಳಿಗೂ ಸಂಪರ್ಕ ನೀಡಲಾಗಿಲ್ಲ; ಕೇಂದ್ರ ಸರಕಾರ[...] ಸರಕಾರದ ಮೇಲೆ ಒತ್ತಡ ಹಾಕಿದ ನಂತರವೆ 201[...] ಮತ್ತು 2015-16ರಲ್ಲಿ 134 ಹಳ್ಳಿಗಳಿಗೆ ವಿದ್ಯುತ್[...] ದೊರೆತಿದೆ ಎಂದಾತ ಭೋಂಗು ಬಿಟ್ಟಿದ್ದ.

ವಾಸ್ತವವಾಗಿ ಭಾರತ ಸರ್ಕಾರದ ವಿದ್ಯುದಿ[...] ಮಾನದಂಡಗಳನ್ನು ಪಾಲಿಸಿದಾಗಷ್ಟೆ ಒಂದು [...]


ಬೂಸಿ ಬಸ್ಯ- ಮೋದಿ



ವ್ಯಾಪಾರಿಗಳ ಲಾಭವೇ ಎಬಿವಿಪಿಗೆ ದೇಶಪ್ರೇಮಕ್ಕಿಂತ ಮುಖ್ಯ

ಕೇವಲ ಭಾರತದ ಭೂಪಟಕ್ಕೆ ನಮಸ್ಕರಿಸುವುದು, ಧ್ವಜಕ್ಕೆ ಸೆಲ್ಯೂಟ್ ಹೊಡೆಯುವುದು ಹಾಗೂ ರಾಷ್ಟ್ರಗೀತೆ ಹಾಡುವುದು, ಜತೆಗೆ ಯೋಧರ ಬಗ್ಗೆ ಒಂದಿಷ್ಟು ಕೃತ್ರಿಮ ಗೌರವ ತೋರಿಸುವುದು, ಇವಿಷ್ಟೇ ದೇಶ ಪ್ರೇಮದ ಸಂಕೇತಗಳೇ? ಸಾಮಾಜಿಕ ದ್ರೋಹಗಳೂ ದೇಶದ್ರೋಹದ ಪಟ್ಟಿಗೇ ಸೇರುತ್ತವೆ ಎಂಬುದು ನೆನಪಿರಲಿ. ಕಾರಣ ದೇಶ ಆಗಿರುವುದು ಸಮಾಜದಿಂದಲೇ ತಾನೇ. ಸರಕಾರಿ ನೌಕರರ ಲಂಚಕೋರತನ, ರಾಜಕಾರಣಿಗಳ ಭ್ರಷ್ಟಾಚಾರ, ಉದ್ಯಮಿಗಳ ತೆರಿಗೆಗಳ್ಳತನ, ಕೃಷಿ ಮಾರುಕಟ್ಟೆಯ ದಲ್ಲಾಳಿಗಳಿಂದ ಅಸಹಾಯಕ ರೈತರ ಶೋಷಣೆ, ಬನಿಯಾ-ಜೈನರಿಂದ ಅಗತ್ಯ ವಸ್ತುಗಳ ಕಾಳಸಂತೆ, ಮಾರ್ವಾಡಿಗಳಿಂದ ಬಡ ಸಾಲಗಾರರ ರಕ್ತ ಹೀರುವಿಕೆ, ಇವೆಲ್ಲವೂ ಸಮಾಜದ್ರೋಹ ಹಾಗೂ ದೇಶದ್ರೋಹದ ಪರಿಧಿಯಲ್ಲಿಯೇ ಬರುತ್ತದೆ. ದೇಶದ ಪ್ರಕೃತಿ ಸಂಪತ್ತನ್ನು ಲೂಟಿಗೈದು ವಿದೇಶಕ್ಕೆ ಸಾಗಿಸಿದ ಬಳ್ಳಾರಿಯ ಗಣಿಗಳ್ಳರಂತೂ ಅತೀದೊಡ್ಡ ದೇಶದ್ರೋಹಿಗಳು. ಲಲಿತ್ ಮೋದಿ, ವಿಜಯ್ ಮಲ್ಯಾ, ಜತಿನ್ ಮೆಹ್ತಾ ಇವರಿಗೆ ದೇಶ ಬಿಟ್ಟು ಓಡಲು ಸಹಾಯ ಮಾಡಿದ ಬಿಜೆಪಿ ರಾಜಕಾರಣಿಗಳೂ ದೇಶದ್ರೋಹಿಗಳು. ಈ ಎಲ್ಲಾ ಸಮಾಜದ್ರೋಹಿ-ಉರ್ಫ್-ದೇಶದ್ರೋಹಿಗಳ ವಿರುದ್ಧ ಎಬಿವಿಪಿ ಯವರು ಯಾಕೆ ಪ್ರತಿಭಟನೆ ಮಾಡುತ್ತಿಲ್ಲ? ಯಾಕೆಂದರೆ ಅವರ ಪಕ್ಷದವರೇ ಎಲ್ಲಕ್ಕಿಂತ ದೊಡ್ಡ ಸಮಾಜದ್ರೋಹಿಗಳು. ದೇಶ ಆಗಿರುವುದು ಮನುಷ್ಯರಿಂದಲೇ ಹೊರತು ನಿರ್ಜೀವ ವಸ್ತು ಅಥವಾ ಚಿಹ್ನೆ ಸಂಕೇತಗಳಿಂದ ಅಲ್ಲ. ಹಾಗಿರುವಾಗ ನಮ್ಮಲ್ಲಿಯ ಜೀವಂತ ಮನುಷ್ಯರಿಗೆ ಮೊದಲು ಗೌರವ ಕೊಟ್ಟ ಆಮೇಲೆ ನಿರ್ಜೀವ ಚಿಹ್ನೆ ಸಂಕೇತಗಳಿಗೆ ಗೌರವ ಕೊಡೋಣ. ದೇಶಕ್ಕೆ ಅನ್ನ ಕೊಡುವ ರೈತ ಮತ್ತು ದೇಶವನ್ನು ಸ್ವಚ್ಛವಾಗಿಡುವ ದಲಿತ ಇವರು ದೇಶ ಕಾಯುವ ಯೋಧರಷ್ಟೇ ಅನಿವಾರ್ಯರು ಹಾಗೂ ಗೌರವಪೂರ್ಣರು. ಹಾಗಿರುವಾಗ ನಮ್ಮದೇ ದೇಶದ ಜೀವಂತ ಮನುಷ್ಯರು ತಮ್ಮ ಕುಲ ಕಸುಬು ಮಾಡುವಾಗ ಜಾತಿ ಹೆಸರಲ್ಲಿ ಮಾರಣಾಂತಿಕವಾಗಿ ಹೊಡೆಯುವುದು ಅಥವಾ ಕೊಲ್ಲುವುದು ಎಲ್ಲಿಯ ದೇಶಪ್ರೇಮ? ಯೋಧರಷ್ಟೇ ಮುಖ್ಯವಾಗಿರುವ ರೈತರಿಗೆ ಅಥವಾ ದಲಿತ ಚರ್ಮಕಾರರಿಗೆ ಅಗೌರವವಾದರೆ ಪರವಾಗಿಲ್ಲ ಆದರೆ ನಿರ್ಜೀವ ಸಂಕೇತ ಗಳಾದ ಭೂಪಟ ಧ್ವಜ ಹಾಡುಗಳಿಗೆ ಸ್ವಲ್ಪವೂ ಅಗೌರವ ವಾಗಬಾರದು ಎನ್ನುವುದು ವಿವೇಕಶೂನ್ಯತೆ ಪರಮಾವಧಿ.





ಸಂಘ ಪರಿವಾರದಲ್ಲಿ ಹಾಗೂ ಬಿಜೆಪಿ ಪಕ್ಷದಲ್ಲಿ ಒಬ್ಬನೇ ಒಬ್ಬ ಸ್ವಾತಂತ್ರ್ಯ ಹೋರಾಟಗಾರನ ಕುಟುಂಬದ ಸದಸ್ಯರಿಲ್ಲ, ಅಷ್ಟೇ ಅಲ್ಲ, ಸ್ವಾತಂತ್ರ್ಯ ಪೂರ್ವದಲ್ಲಿಯೇ ಆರ್‌ಎಸ್‌ಎಸ್‌ನವರು ಬ್ರಿಟಿಷರ ಜತೆ ಗುಟ್ಟಾಗಿ ಕೈಜೋಡಿಸಿ ದೇಶದ್ರೋಹ ಮಾಡಿದ್ದರು. ಇಂತಹ ದೇಶದ್ರೋಹಿಗಳ ಕುಟುಂಬದ ಈಗಿನ ಪೀಳಿಗೆಯವರು ತಮ್ಮ ಹಿರಿಯರ ದೇಶದ್ರೋಹದ ಕೃತ್ಯಗಳನ್ನು ಮರೆಮಾಚಲು ಈಗ ವಿಪರೀತ ದೇಶಭಕ್ತಿಯ ನಾಟಕ ಆಡುತ್ತಿದ್ದಾರೆ ಅಷ್ಟೇ. ಅಡ್ವಾಣಿ ಪಾಕಿಸ್ತಾನಕ್ಕೆ ಹೋಗಿದ್ದಾಗ ಜಿನ್ನಾರನ್ನು ಹೊಗಳಿದ್ದರು. ವಾಜಪೇಯಿ ಪ್ರಧಾನಿಯಾಗಿದ್ದಾಗ ಲಾಹೋರಿಗೆ ಬಸ್ ಶುರು ಮಾಡಿದರು. ಆರ್‌ಎಸ್‌ಎಸ್ ಸದಸ್ಯ ವೇದಪ್ರತಾಪ್ ವೈದಿಕ ಎಂಬವ ಜುಲೈ 2014 ರಲ್ಲಿ ಪಾಕ್ ಉಗ್ರವಾದಿ ಹಫೀಜ್ ಸಯೀದ್‌ನನ್ನು ವೈಯಕ್ತಿಕವಾಗಿ ಭೇಟಿಯಾಗಿ ಸಂದರ್ಶನ ಪಡೆದಿದ್ದ. ಪ್ರಧಾನಿ ಮೋದಿಯವರು ನವಾಜ್ ಶರೀಫರ ಹುಟ್ಟುದಿನಕ್ಕೆ ಅಧಿಕೃತ ಆಹ್ವಾನವಿಲ್ಲದೇ ಪಾಕ್‌ಗೆ ಹೋಗಿ ಭಾರತದ ಮಾನ ಕಳೆದು ಬಂದಿದ್ದರು. ಆಗ ಈ ಎಬಿವಿಪಿಯವರು ಎಲ್ಲಿ ಮಲಗಿದ್ದರು?

ಕನ್ನಡ ಸಿನೆನಟಿ ರಮ್ಯಾ ಪಾಕಿಸ್ತಾನದ ಸಾಮಾನ್ಯ ಜನರು ಭಾರತೀಯರಷ್ಟೇ ಒಳ್ಳೆಯವರೆಂದು ಹೇಳಿದ್ದು ಎಬಿವಿಪಿಗೆ ದೇಶದ್ರೋಹವಾಗಿ ಕಂಡಿದೆ, ಆದರೆ ಅಡ್ವಾಣಿ, ಮೋದಿ, ವಾಜಪೇಯಿ ಮತ್ತು ವೈದಿಕ್ ಮಾಡಿದ್ದು ಇವರಿಗೆ ದೇಶ ಪ್ರೇಮವಾಗಿ ಕಂಡಿತೆ? ಸಂಪೂರ್ಣ ಪಾಕಿಸ್ತಾನದ ಸಾಮಾನ್ಯ ಜನರೂ ನಮ್ಮ ವೈರಿಗಳಾಗಿದ್ದರೆ ಪಾಕಿಸ್ತಾನಕ್ಕೆ ನಮ್ಮ ಹಿಂದೂ ವ್ಯಾಪಾರಿಗಳು ಮಾಡುವ ಭಾರಿ ಲಾಭದಾಯಕ ರಫ್ತುಗಳನ್ನು ಹಾಗೂ ಬನಿಯಾ-ಜೈನರು ಪಾಕ್ ಉತ್ಪಾದಿತ ವಸ್ತುಗಳನ್ನು ಆಮದು ಮಾಡಿಕೊಳ್ಳುವುದನ್ನೂ ಬಿಜೆಪಿ ಸರಕಾರವೇ ನಿಷೇಧಿಸಲಿ ನೋಡೋಣ. ರಾಜಕೀಯವಾಗಿ ಚೀನಾ[...] ನಮ್ಮ ವೈರಿಯೇ ತಾನೇ. ಆ ವೈರಿ ಚೀನಾದಿಂದ [...] ಗಣಪತಿ ದೇವರ ಮೂರ್ತಿ ಸಹಿತ ಹಿಂದೂ [...] ಅಲಂಕಾರದ ಎಲ್ಲಾ ವಸ್ತುಗಳನ್ನು ಹಾಗೂ [...] ಹಣತೆಗಳನ್ನೂ ಆಮದು ಮಾಡಿಕೊಂಡು ನಮ್ಮ[...] ದೇಶದ ಹಿಂದೂ ಕುಶಲಕರ್ಮಿಗಳ ಕುಲ ಕಸು[...] ನಿರ್ನಾಮ ಮಾಡಿ ಅವರ ಕುಟುಂಬವನ್ನು ಉ[...] ಕೆಡುವುವಾಗ ಎಬಿವಿಪಿ ಯವರ ದೇಶಪ್ರೇಮ [...] ಉಮ್ಮಳಿಸಿ ಬರುವುದಿಲ್ಲ, ಯಾಕೆಂದರೆ ತಮ್ಮ [...] ಪಕ್ಷದ ಬನಿಯಾ ಜೈನ ವ್ಯಾಪಾರಿಗಳ ಲಾಭವೇ ಎ[...] ಯವರಿಗೆ ದೇಶಪ್ರೇಮಕ್ಕಿಂತ ಹೆಚ್ಚು ಮುಖ್ಯವಾಗಿ[...] ಸಂಘ ಪರಿವಾರದವರಷ್ಟು ದೊಡ್ಡ ಆಷಾಢಭೂ[...] ಈ ಜಗತ್ತಿನಲ್ಲಿ ಬೇರಾರೂ ಇಲ್ಲ.

- ಅಭಿಷೇಕ್ ಪಡಿವಾಲ್

ಎಬಿವಿಪಿ ತನ್ನ ಸದಸ್ಯರು ಸೈನ್ಯ[...] ಸೇರುವಂತೆ ಹುರಿದುಂಬಿಸಲಿ

ಬೆಂಗಳೂರಿನಲ್ಲಿ ಅಮ್ನೆಸ್ಟಿ ಇಂಟರ್‌ನ್ಯಾಷನಲ್ [...] ದೇಶದ್ರೋಹದ ಆಪಾದನೆ ಹೊರಿಸಿ ಬೀದಿ ದಾ[...] ಮಾಡುತ್ತಿರುವ ಎಬಿವಿಪಿ ಸದಸ್ಯರೆಲ್ಲಾ 35 ವರ್ಷ ದ[...] ನಡುವಯಸ್ಸಿನವರಾಗಿದ್ದಾರೆ. ಇವರೆಲ್ಲಾ ಎಷ್ಟು ವರ್ಷ[...] ವಿದ್ಯಾರ್ಥಿಗಳಾಗಿಯೇ ಇದ್ದಾರೆ? ಅವರ ಜೊತೆ [...] ವಿದ್ಯಾರ್ಥಿನಿಯರೂ ಎರಡೆರಡು ಮಕ್ಕಳ ತಾಯಿ[...] ಇದ್ದಾರೆ. ಇವರೆಲ್ಲಾ ಯಾವ ಕಾಲೇಜಿನ ವಿದ್ಯಾರ್ಥಿ[...] ಕೇಂದ್ರ ಗೃಹ ಸಚಿವ ರಾಜನಾಥ್ ಸಿಂಗ್ ಹೇಳಿದ್ದೇನೆಂ[...] ಕಾಶ್ಮೀರಿಗಳು ಕೈಯಲ್ಲಿ ಕಲ್ಲು ಹಿಡಿಯುವ ಬದಲು [...] ಹಿಡಿಯಬೇಕು. ಆದರೆ ಅವರದೇ ಪಕ್ಷದ ವಿದ[...] ವಿಭಾಗವಾದ ಎಬಿವಿಪಿಯವರು ಹಿಂದಿನ ಎರಡ[...] ವರ್ಷದಿಂದ ಕೈಯಲ್ಲಿ ಪುಸ್ತಕ ಹಿಡಿದಿಲ್ಲ, ವರ್ಷ[...] ಏನಾದರೊಂದು ಪಿಳ್ಳೆ ನೆವದಲ್ಲಿ ಬೀದಿಗಿಳಿದು ಗ[...] ಮಾಡುವುದೇ ಅವರ ಫುಲ್‌ಟೈಮ್ ಕೆಲಸ ಆಗಿರು[...]

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. [...] ಪ್ರತಿಕ್ರಿಯೆಗಳನ್ನು 9980331427 ನಂಬರ್[...] ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬ[...]

...ದ್ಯುದೀಕರಣ ಪೂರ್ಣಗೊಂಡಿದೆ ಎನ್ನಬಹುದು. ಆ ...ಸದಂಡಗಳೆಂದರೆ (1) ಶಾಲೆ, ಆರೋಗ್ಯಕೇಂದ್ರ, ...ಾಯತು ಕಚೇರಿಗಳಂಥ ಸಾರ್ವಜನಿಕ ಕಟ್ಟಡಗಳಿಗೆ ...ತ್ತು ಕನಿಷ್ಠ 10% ಮನೆಗಳಿಗೆ ವಿದ್ಯುತ್ ಸಂಪರ್ಕ ...ಸಿರಬೇಕು (2) ಪರಿವರ್ತಕಗಳು, ತಂತಿಗಳು ಇರಬೇಕು; ...ತ ಕೇರಿಗಳಿದ್ದರೆ ಅಲ್ಲಿಯೂ ಪರಿವರ್ತಕಗಳು, ತಂತಿಗಳು ...ಬೇಕು. ಆದರೆ ಯಾವುದೇ ಮಾರ್ಗದಲ್ಲಾದರೂ ಸೈ ...ರೆ ಆಗಬೇಕು, ಜನಪ್ರಿಯತೆ ಉಳಿಸಿಕೊಳ್ಳಬೇಕು ...ು ಅಲಿಖಿತ ನಿಯಮವನ್ನು ಪಾಲಿಸುತ್ತಿರುವ ಮೋದಿ ...ರ ಮಾನದಂಡಗಳಿಗೆಲ್ಲ ಗೇಟ್‌ಪಾಸ್ ನೀಡಿರುವಂತೆ ...ರುತ್ತದೆ. ಸ್ವಾರಸ್ಯಕರವಾಗಿ, ಸುಮಾರು 342 ಹಳ್ಳಿಗಳ ...ದ್ಯುದೀಕರಣ ಆಗಿಲ್ಲ ಎಂದು ಖುದ್ದು ಸರ್ಕಾರಿ ತಂಡಗಳೆ ...ು ಕೊಟ್ಟಿರುವ ಹೊರತಾಗಿಯೂ ಆ ಹಳ್ಳಿಗಳಿಗೆಲ್ಲ ...ುತ್‌ಸಂಪರ್ಕ ನೀಡಲಾಗಿದೆ ಎನ್ನುತ್ತದೆ ಮೋದಿ ...ರದ 'GARV' ಆಪ್! ಅಂದಹಾಗೆ ಈ 'GARV' ...ಅನ್ನು ಶುರುಮಾಡಿರುವುದು ವಿದ್ಯುದೀಕರಣ ...ರ್ಯಕ್ರಮವನ್ನು ಹೆಚ್ಚು ಪಾರದರ್ಶಕ ಆಗಿಸಲಂತೆ! ಮೋದಿ ...ರದ ವಿದ್ಯುತ್ ಮಂತ್ರಾಲಯದ ಪ್ರಕಾರ ಅವರು ...ಟೋಚಿತ್ರಗಳಿಗೇ ಹೆಚ್ಚು ಮಹತ್ವ ನೀಡುವವರಂತೆ. ...ಟೋಚಿತ್ರಗಳಲ್ಲಿ ಕಂಬ ಮತ್ತು ತಂತಿಗಳು ಕಂಡರೂ ...ು, ಹಳ್ಳಿಗೆ ವಿದ್ಯುತ್ ಬಂದಿದೆ ಎಂದೇ ...ಲಾಗುತ್ತದಂತೆ! ಹೀಗಾಗಿಯೆ ಇರಬೇಕು, ಸ್ಥಳೀಯ ...ುತ್ ವಿತರಕ ಸಂಸ್ಥೆಗಳು ನೀಡುವ ವರದಿಯನ್ನು ...ರಿಪಡಿಸಿಕೊಳ್ಳುವ ಗೋಜಿಗೆ ಹೋಗದೆ ಇನ್ನೂ ...ಾರು 300 ಹಳ್ಳಿಗಳ ವಿದ್ಯುದೀಕರಣ ಆಗಿದೆ ಎಂದು ...ಕಕ್ಕೆಲ್ಲ ಸಾರಲಾಗಿದೆ.

...ಹೀಗೆ ಸುಳ್ಳುಗಳ ಸರದಾರ ಈ ಬಾರಿ ಸ್ವಾತಂತ್ರ್ಯ ...ದಂಥ ಮಹತ್ವದ ದಿನದಂದೇ ಹುಸಿಯಾಡಿದ್ದಾನೆ. ...ರೆ ಮೋದಿ ಸರ್ಕಾರದ ಘೋಷಣೆಗಳಿಗೂ ವಾಸ್ತವಕ್ಕೂ ...ವೆ ಅಜಗಜಾಂತರವನ್ನು ಈಗ ಸಾಮಾನ್ಯ ಮತದಾರರು ...ತಿದ್ದಾರೆ. ಹೀಗಾಗಿ ಈಗೀಗ ಆತನ ಹುಸಿಮಾತುಗಳನ್ನು ...ುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಇದು ಬರೀ ...ಳ್ಳಿ ಪ್ರಚಾರ ಮತ್ತು ಜಾಹೀರಾತುಗಳ ಮುಖಾಂತರ ...ಗೆ ಮಂಕುಬೂದಿ ಎರಚುತ್ತಿರುವ ಸರ್ಕಾರ ಎಂಬ ...ನ್ನು ಅರಿತವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ.

■ ಸುರೇಶ್ ಭಟ್ ಬಾಕ್ರಬೈಲ್

(ಆಧಾರ: *wire.in* ವರದಿ)

ಸ್ಯಾಂಡಲ್‌ವುಡ್‌ನಲ್ಲಿ 'ಜನುಮದ ಜೋಡಿ' ಚಿತ್ರವನ್ನು ನೆನಪಿಸುವಂತಹ ಮಾತುಗಳು ಮತ್ತೆ ಕೇಳಿಬರುತ್ತಿವೆ. ಮಹೇಶ್ ಸುಖಧರೆ ನಿರ್ದೇಶನದಲ್ಲಿ ಮೂಡಿ ಬಂದಿರುವ 'ಹ್ಯಾಪಿ ಬರ್ತ್‌ಡೇ' ಸಿನಿಮಾ ಹಳ್ಳಿ ಸೊಗಡಿನ ಹಿನ್ನೆಲೆಯಲ್ಲಿ ಮೂಡಿ ಬಂದಿದ್ದು, ಜಾನಪದ ಲೋಕವನ್ನೇ ಸಿನಿಮಾ ರಂಗದಲ್ಲಿ ಸೃಷ್ಟಿ ಮಾಡಲಿದೆಯಂತೆ.

'ಹ್ಯಾಪಿ ಬರ್ತ್‌ಡೇ'ಯಲ್ಲಿ ಜಾನಪದ ಲೋಕ ಅನಾವರಣ

ಕನ್ನಡದಲ್ಲಿ ಅನೇಕ ಹಿಟ್ ಸಿನಿಮಾಗಳನ್ನು ಕೊಟ್ಟಿರುವ ನಿರ್ದೇಶಕ ಮಹೇಶ್ ಸುಖಧರೆ, ಈ ಬಾರಿ ಹೊಸ ಕತೆಯೊಂದಿಗೆ ಪ್ರೇಕ್ಷಕರಿಗೆ ಮುಖಾಮುಖಿ ಆಗಿದ್ದಾರೆ. ಸೂಪರ್ ಸ್ಟಾರ್‌ಗಳ ಕಮರ್ಷಿಯಲ್ ಚಿತ್ರಗಳಿಗೆ ಆಕ್ಷನ್ ಕಟ್ ಹೇಳಿರುವ ಇವರು, 'ಹ್ಯಾಪಿ ಬರ್ತ್‌ಡೇ' ಚಿತ್ರಕ್ಕಾಗಿ ಹಳ್ಳಿ ಸೊಗಡಿನ ಕತೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಅಲ್ಲದೇ ಸಚಿನ್ ಎಂಬ ಹೊಸ ಹುಡುಗನನ್ನು ಈ ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ಗೆ ಪರಿಚಯಿಸುತ್ತಿದ್ದಾರೆ. ಜೊತೆಗೆ ಸಂಸ್ಕೃತಿ ಶೆಣೈ ಎಂಬ ನಾಯಕಿ ಕೂಡ ಕನ್ನಡ ಸಿನಿಮಾರಂಗಕ್ಕೆ ಪದಾರ್ಪಣೆ ಮಾಡಲಿದ್ದಾರೆ. ಹೆಸರಾಂತ ತಾರಾ ಬಳಗ ಸಿನಿಮಾದಲ್ಲಿದ್ದು, ತನ್ನದೇ ಆದ ಕಾರಣಗಳಿಂದಾಗಿ ಈ ಚಿತ್ರ ನಿರೀಕ್ಷೆ ಮೂಡಿಸಿದೆ. ಇದೇ ಶುಕ್ರವಾರ ರಾಜ್ಯಾದ್ಯಂತ ತೆರೆ ಕಾಣುತ್ತಿದೆ. ಈ ಸಿನಿಮಾದ ಬಗ್ಗೆ ಮಹೇಶ್ ಸುಖಧರೆ ಮಾತಾಡಿದ್ದಾರೆ.

** ದರ್ಶನ್‌ರಂಥ ಕಮರ್ಷಿಯಲ್ ನಟರ ಜತೆ ಕೆಲಸ ಮಾಡಿದವರು, ಸಡನ್ನಾಗಿ ಹೊಸ ಹುಡುಗನ ಚಿತ್ರದತ್ತ ಮುಖ ಮಾಡಿದ್ದು ಯಾಕೆ?*

ಕತೆ ಹೇಗೆ ಇರುತ್ತದೆಯೋ ಹಾಗೆಯೇ ನಟರು ಬದಲಾಗುತ್ತಾರೆ. 'ಅಂಬರೀಷ' ಸಿನಿಮಾದ ಕತೆಗೆ ದರ್ಶನ್ ಬೇಕಿತ್ತು, ಅದಕ್ಕಾಗಿ ಅವರ ಜತೆ ಕೆಲಸ ಮಾಡಿದೆ. 'ಹ್ಯಾಪಿ ಬರ್ತ್‌ಡೇ' ಚಿತ್ರದ ಕತೆಗೆ ಹೊಸಬರು ಬೇಕಿತ್ತು, ಹೀಗಾಗಿ ಸಚಿನ್‌ನನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಇಬ್ಬರ ಜತೆಯೂ ಕೆಲಸ ಮಾಡಿದ ಖುಷಿ ನನಗೆ ಸಿಕ್ಕಿದೆ.



** ಹೊಸ ಹುಡುಗರ ಜತೆ ಕೆಲಸ ಮಾಡುವುದು ಕಷ್ಟ ಅಂತ ಅನಿಸತ್ತಾ?*

ಕಷ್ಟವೇನೂ ಅಲ್ಲ. ಆದರೆ ಅನೇಕ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಅದಕ್ಕಾಗಿ ನಾನು ಶೂಟಿಂಗ್‌ಗೆ ಹೋಗುವ ಮುನ್ನವೇ ಒಂದಿಷ್ಟು ತಯಾರಿ ಮಾಡಿಕೊಳ್ಳುತ್ತೇನೆ. ಸಚಿನ್‌ನನ್ನು ಕ್ಯಾಮೆರಾ ಮುಂದೆ ನಿಲ್ಲಿಸುವುದಕ್ಕಿಂತ ಮುಂಚೆ, ಅವನಿಗೆ ಇಡೀ ಸ್ಕ್ರಿಪ್ಟ್ ಅನ್ನು ವಿವರಿಸಿದೆ. ಪಾತ್ರದ ಬಗ್ಗೆ ಪರಿಚಯ ಮಾಡಿಕೊಟ್ಟೆ. ಸಿನಿಮಾಗೆ ಬೇಕಿರುವ ಪೂರ್ವ ತಯಾರಿಯನ್ನೂ ಮಾಡಿಕೊಳ್ಳಲು ಹೇಳಿದೆ. ಹೀಗಾಗಿ ಶೂಟಿಂಗ್ ಸಮಯದಲ್ಲಿ ನನಗೆ ಕಷ್ಟ ಅಂತೇನೂ ಅನಿಸಲಿಲ್ಲ.

** 'ಹ್ಯಾಪಿ ಬರ್ತ್‌ಡೇ' ಸಿನಿಮಾದ ಕತೆಯೇನು?*

ಹಳ್ಳಿ ಸೊಗಡಿನ ಸ್ಟೋರಿಯನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಜತೆಗೆ ಜಾನಪದದ ಅನೇಕ ಅಂಶಗಳನ್ನು ಚಿತ್ರಕತೆಯಲ್ಲಿ ಬಳಸಿಕೊಂಡಿದ್ದೇನೆ. ಮಂಡ್ಯದ ನೆಲದಲ್ಲಿ ಮೂಡಿಬಂದಿರುವ ಸಿನಿಮಾದಲ್ಲಿ ನವಿರಾದ ಪ್ರೇಮಕತೆ ಕೂಡ ಇದೆ.

** 'ಜನುಮದ ಜೋಡಿ'ಯನ್ನು ನಿಮ್ಮ ಚಿತ್ರದ ಜೊತೆ ಹೋಲಿಕೆ ಮಾಡುತ್ತಿದ್ದಾರೆ. ಈ ಕುರಿತು ಏನು ಹೇಳುತ್ತೀರಿ?*

'ಜನುಮದ ಜೋಡಿ' ಸಿನಿಮಾಗೂ ನಮ್ಮ ಸಿನಿಮಾಗೂ ತುಂಬಾ ವ್ಯತ್ಯಾಸವಿದೆ. ಹಳ್ಳಿಯಲ್ಲಿ ನಡೆಯುವ ಕತೆ ಮತ್ತು ಜಾನಪದ ಕಲೆಗಳನ್ನು ಬಳಸಿಕೊಂಡಿದ್ದೇವೆ ಅನ್ನುವುದನ್ನು ಬಿಟ್ಟರೆ, ಎರಡಕ್ಕೂ ಸಾಕಷ್ಟು ಹೋಲಿಕೆ ಇದೆ. ಎರಡೂ ಸಿನಿಮಾಗಳ ಮಾದರಿ ಒಂದೇ ರೀತಿ ಎಂದು ಹೇಳಬಹುದು. ಜನರು ಮಾಡುತ್ತಿರುವ ಈ ಹೋಲಿಕೆಯನ್ನು ಪ್ರೀತಿಯಿಂದ ಸ್ವೀಕರಿಸುತ್ತೇನೆ.

** ಸಿನಿಮಾದಲ್ಲಿ ಏನೆಲ್ಲ ವಿಶೇಷತೆಗಳಿವೆ?*


ಇದು ಒಂದು ಪಕ್ಕಾ ಪ್ಯಾಕೇಜ್ ಚಿತ್ರ. ಮಾಸ್ ಮತ್ತು ಕ್ಲಾಸ್ ನೋಡುಗರಿಗೆ ಏನೆಲ್ಲ ದೃಶ್ಯಗಳು ಬೇಕೋ ಎಲ್ಲವೂ ಒಂದೇ ಸಿನಿಮಾದಲ್ಲಿವೆ. ಸಾಹಸ ಸನ್ನಿವೇಶಗಳು, ಕಾಮಿಡಿ ದೃಶ್ಯಗಳು ಪ್ರೇಕ್ಷಕರಿಗೆ ಕಚಗುಳಿ ಇಡುತ್ತವೆ. ಮೇಕಿಂಗ್ ಡಿಫರೆಂಟ್ ಆಗಿದೆ. ಹಳ್ಳಿಯ ವೈಭವವನ್ನು ಫ್ರೆಶ್ ಆಗಿ ಕಟ್ಟಿಕೊಟ್ಟಿದ್ದೇವೆ. ಹೆಸರಾಂತ ತಾಂತ್ರಿಕ ವರ್ಗ ಸಿನಿಮಾಗಾಗಿ ಕೆಲಸ ಮಾಡಿದೆ.

** ಈ ಸಿನಿಮಾದಲ್ಲೂ ಅಂಬರೀಷ ನಟಿಸಿದ್ದಾರೆ. ಯಾವ ರೀತಿಯ ಪಾತ್ರದಲ್ಲಿ ಅವರು ಕಾಣಿಸಿಕೊಂಡಿದ್ದಾರೆ?*

ನನ್ನ ಸಿನಿಮಾದಲ್ಲಿ ಅಂಬರೀಷ ಅವರು ಪಾತ್ರ ಮಾಡಿದರೆ, ನನಗೆ ಏನೋ ಒಂದು ರೀತಿಯ ಖುಷಿ. ಹೀಗಾಗಿ ನನ್ನ ಚಿತ್ರದಲ್ಲಿ ಅವರು ಕಾಣಿಸಿಕೊಳ್ಳುತ್ತಲೇ ಇರುತ್ತಾರೆ. 'ಹ್ಯಾಪಿ ಬರ್ತ್‌ಡೇ' ಚಿತ್ರದಲ್ಲಿ ಅವರು ಮಿನಿಸ್ಟರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಪ್ರಮುಖ ಸನ್ನಿವೇಶವೊಂದರಲ್ಲಿ ಅವರು ಕಾಣಿಸುತ್ತಾರೆ.

** ನಿಮ್ಮ ಮುಂದಿನ ಸಿನಿಮಾ ಯಾವುದು?*

'ಹ್ಯಾಪಿ ಬರ್ತ್‌ಡೇ' ಚಿತ್ರದ ಬಗ್ಗೆಯೇ ಸದ್ಯ ಯೋಚಿಸುತ್ತಿದ್ದೇನೆ. ಬೇರೆ ಸಿನಿಮಾಗಳ ಬಗ್ಗೆ ತಲೆ ಕೆಡಿಸಿಕೊಳ್ಳಲು ಪುರುಸೊತ್ತು ಇಲ್ಲ. ಕೈಯಲ್ಲಿ ಮೂರು ಸಿನಿಮಾಗಳಿವೆ. ಅವುಗಳನ್ನು ಯಾವಾಗ ಶುರು ಮಾಡಬೇಕು ಅಂತ ಇನ್ನೂ ನಿರ್ಧಾರವಾಗಿಲ್ಲ. ■



...ಗೆ ಹೋಗಲು ಅವರಿಗೆ ಸಮಯ ಎಲ್ಲಿದೆ? ವಿದ್ಯಾರ್ಥಿ ...ಗಳ ರಾಜಕೀಯಕರಣದಿಂದ ಎಷ್ಟೊಂದು ವಿದ್ಯಾರ್ಥಿಗಳ ...ಷ್ಯ ಹಾಳಾಗಿದೆ ಎಂದು ಊಹಿಸುವುದು ಕಷ್ಟ.

ಅಮ್ನೆಸ್ಟಿ ಕಾರ್ಯಕ್ರಮದಲ್ಲಿ ದೇಶದ್ರೋಹದ ಘೋಷಣೆ ...ಗಿದವರ ವಿರುದ್ಧ ಸರ್ಕಾರ ಕಾನೂನುಕ್ರಮ ಕೈಗೊಳ್ಳಬೇಕು. ...ರೆ ಎಬಿವಿಪಿ ಕಾರ್ಯಕರ್ತರು ಅದನ್ನೇ ಬಂಡವಾಳ ...ಡಿಕೊಳ್ಳಬಾರದು. ಯಾರೋ ನಾಲ್ಕು ಮಂದಿ ಘೋಷಣೆ ...ಗಿದ ಮಾತ್ರಕ್ಕೆ ದೇಶದ ಹಿತಾಸಕ್ತಿಗೆ ಧಕ್ಕೆ ಆಗದು ...ವಾ ಪ್ರತಿಭಟನೆ ಮಾಡಿದ ಮಾತ್ರಕ್ಕೆ ನಾಳೆ ಕಾಶ್ಮೀರ ...ಸ್ಯೆ ಪರಿಹಾರವಾಗದು. "ಎಬಿವಿಪಿಯವರಿಗೆ ನಿಜವಾದ ...ಜಿ ಇದ್ದರೆ ಕೇಂದ್ರದಲ್ಲಿರುವ ತಮ್ಮದೇ ನಾಯಕರ ...ನವೊಲಿಸಿ ಮಹದಾಯಿ ನದಿ ನೀರಿನ ಸಮಸ್ಯೆ ...ಹರಿಸಲಿ" ಎಂದು ಜೆಡಿಎಸ್ ನೇತಾರ ಎಚ್.ಡಿ. ...ಮಾರಸ್ವಾಮಿ ನೀಡಿರುವ ಸಲಹೆ ಸೂಕ್ತವಾಗಿದೆ.

ಅಮ್ನೆಸ್ಟಿಯಿಂದ ನಮ್ಮ ದೇಶದ ಯೋಧರಿಗೆ ಅವಮಾನ ...ಗಿದೆ ಎಂದು ಪ್ರತಿಭಟನೆ ಮಾಡುತ್ತಿರುವ ಎಬಿವಿಪಿಯ ...ದ್ಯಾರ್ಥಿಗಳಲ್ಲಿ 99% ಜನರು ಎಂದೂ ಸೇನೆ ಸೇರುವ ...ಯೋಚನೆಯನ್ನೇ ಮಾಡಿರುವುದಿಲ್ಲ. ಒಂದು ವೇಳೆ ...ಬಿವಿಪಿಯವರಿಗೆ ದೇಶದ ಗಡಿಯ ಬಗ್ಗೆ ನಿಜವಾದ ...ಜಿಯಿದ್ದರೆ ತಮ್ಮ ಸದಸ್ಯರನ್ನು ಆರ್ಮಿ-ಸಿಆರ್‌ಪಿಎಫ್ ಫೋರ್ಸ್ ...ಲು ಹುರಿದುಂಬಿಸಲಿ ಹಾಗೂ ಸೇನೆಯ ಪರೀಕ್ಷೆಯಲ್ಲಿ ...ಾಗಲು ನಿವೃತ್ತ ಯೋಧರಿಂದ ಕೋಚಿಂಗ್ ಕೊಡಿಸಲಿ.

ಈಗೀಗ ಎಬಿವಿಪಿಯವರು ತಮ್ಮ ಎಲ್ಲಾ ಪ್ರತಿಭಟನೆ ...ಲ್ಲಿ ಹೆಣ್ಣು ಮಕ್ಕಳನ್ನು ಸೇರಿಸಿಕೊಂಡು ದಾಂಧಲೆಗೆ ...ಯುತ್ತಾರೆ. ಆಮೇಲೆ ಅವರ ದಾಂಧಲೆ ವಿರುದ್ಧ ...ಲೀಸರು ಕ್ರಮ ಕೈಕೊಂಡರೆ ಹೆಂಗಸರ ವಿರುದ್ಧ ಪೊಲೀಸರ ...ತ್ಯಾಚಾರ ಎಂದು ರಾಷ್ಟ್ರಮಟ್ಟದಲ್ಲಿ ಹುಯಿಲೆಬ್ಬಿಸುವ ...ಸ್ಸಾದು ಇದು. ನಿವೃತ್ತ ಯೋಧರಿಗೆ ಹಣ ಕೊಟ್ಟು ...ದಿ ನಾಟಕದಲ್ಲಿ ತಮ್ಮ ಜತೆ ಸೇರಿಸಿಕೊಳ್ಳುವ ...ಬಿವಿಪಿಯವರು ಈ ನಿವೃತ್ತ ಯೋಧರ ಕುಟುಂಬಗಳಿಗೆ ...ದ ಸಹಾಯ ಯಾವಾಗಲಾದರೂ ಮಾಡಿದ್ದಾರೆಯೇ?

- ರಾಮಕೃಷ್ಣ ಕುಲಾಲ್, ಬೆಂಗಳೂರು

02 ⏮ ಜಿಎಸ್‌ಟಿ-2

ಎರಡನೆಯದಾಗಿ ಜಿಎಸ್‌ಟಿ ಕೌನ್ಸಿಲ್ ಎಂಬುದು ಈಗ ವ್ಯಾಟ್ ವಿಚಾರಕ್ಕೆ ಇರುವ ರಾಜ್ಯಗಳ ಹಣಕಾಸು ಮಂತ್ರಿಗಳ ಪರಿಷ್ಕೃತ ರೂಪವಾಗಿರುತ್ತದೆ. ಅಲ್ಲಿ ಎಲ್ಲರೂ ಮಾತಾಡಬಹುದಾದ್ದರಿಂದ, ಅನ್ಯಾಯವಾಗದು ಎಂಬ ವಾದ. ಎಲ್ಲರೂ ಮಾತಾಡಬಹುದಾದರೂ, ಕೇಂದ್ರಕ್ಕೆ ಇದರಲ್ಲಿ ಹೆಚ್ಚು ಕಡಿಮೆ ವೀಟೋ ಅಧಿಕಾರ ಇರುತ್ತದೆ. ಇನ್ನೂ ಮೂರನೆಯ ಅಂಶ, ಈ ಜಿಎಸ್‌ಟಿಯನ್ನು ಜಾರಿ ಮಾಡುವುದರಿಂದ ನಷ್ಟ ಅನುಭವಿಸುವ ರಾಜ್ಯಗಳಿಗೆ ಮುಂದಿನ 3 ವರ್ಷಗಳ ಕಾಲ ಪರಿಹಾರ ಕಲ್ಪಿಸಲಾಗುತ್ತದಂತೆ.

ಇವೆಲ್ಲವೂ ಅವರು ಹೇಳುತ್ತಿರುವ ರೀತಿಯೇ ಆಗುತ್ತದೆ ಎಂದೇ ಇಟ್ಟುಕೊಳ್ಳೋಣ. ಆದರೆ, ಮುಂದೊಂದು ದಿನ ಆಯಾ ರಾಜ್ಯದ ಪ್ರಜೆಗಳಿಂದ ಆಯ್ಕೆಯಾಗುವ ಯಾವುದೇ ಸರ್ಕಾರಕ್ಕೆ ತನಗೆ ಸರಿ ಕಾಣಿಸಿದ ರೀತಿಯಲ್ಲಿ ಸರಿ ಕಾಣಿಸಿದ ಪ್ರಮಾಣದ ತೆರಿಗೆಯನ್ನು ಹಾಕುವ ಸ್ವಾತಂತ್ರ್ಯವಂತೂ ಇರುವುದಿಲ್ಲ. ಅದರಲ್ಲೂ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷದ ಜೊತೆ ಜಗಳವಿರುವ ಯಾವುದಾದರೂ ಒಂದು ರಾಜಕೀಯ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ, ಅದು ತನಗೆ ಸರಿ ಕಂಡ ರೀತಿಯಲ್ಲಿ ರಾಜ್ಯದ ಅಭಿವೃದ್ಧಿಯನ್ನು ಮಾಡಬೇಕೆಂದುಕೊಂಡರೆ ಅದು ಸಾಧ್ಯವಿರುವುದಿಲ್ಲ.

ಇದು ಕೇವಲ ರಾಜ್ಯ ಸರ್ಕಾರಗಳ ಮೇಲೆ ಮಾತ್ರ ಪರಿಣಾಮ ಬೀರುವುದಿಲ್ಲ. ಸ್ಥಳೀಯ ಸಂಸ್ಥೆಗಳಾದ ಪಂಚಾಯಿತಿ ಮತ್ತು ನಗರ ಸ್ಥಳೀಯ ಸಂಸ್ಥೆಗಳು (ಪುರಸಭೆ, ನಗರಸಭೆ ಮತ್ತು ಪಾಲಿಕೆಗಳು) ಬಹುತೇಕ ರಾಜ್ಯ ಸರ್ಕಾರದ ಮೇಲೆಯೇ ಅನುದಾನಕ್ಕಾಗಿ ಅವಲಂಬಿತವಾಗಿವೆ. ಒಂದು ವೇಳೆ ಯಾವಾಗಲಾದರೂ ರಾಜ್ಯ ಸರ್ಕಾರದ ಆದಾಯ ಕಡಿಮೆಯಾದರೆ, ಅದರ ನೇರ ಪರಿಣಾಮ ಈ ಸ್ಥಳೀಯ ಸಂಸ್ಥೆಗಳ ಮೇಲೆ ಬೀಳುತ್ತದೆ. ಅಂದರೆ, ಒಂದು ಪಂಚಾಯಿತಿಯಿಂದ ಎಲ್ಲರೂ ಕೇಂದ್ರ ಸರ್ಕಾರವನ್ನು ದೈನ್ಯದಿಂದ ಬೇಡುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಜಿಎಸ್‌ಟಿ ಎಂಬುದು ಕೇವಲ ಎನ್‌ಡಿಎ ಕೂಸಲ್ಲ; ಆದರೆ, ಒಕ್ಕೂಟ ವ್ಯವಸ್ಥೆಯನ್ನು ಛಿದ್ರಗೊಳಿಸುವ ಕೆಲಸವನ್ನು ಮೋದಿ ಸರ್ಕಾರವು ವ್ಯವಸ್ಥಿತವಾಗಿ ಮಾಡುತ್ತಿದೆ. ಮೊದಲಿಗೆ ಇದುವರೆಗೂ ಅಸ್ತಿತ್ವದಲ್ಲಿದ್ದ 'ರಾಷ್ಟ್ರೀಯ ಅಭಿವೃದ್ಧಿ ಮಂಡಳಿ(ಎನ್‌ಡಿಸಿ)'ಯೇ ಇಲ್ಲವಾಯಿತು. ಇದು ಸಂವಿಧಾನಬದ್ಧ ಸ್ಥಾನಮಾನ ಹೊಂದಿರಬಹುದಾಗಿದ್ದ 'ಅಂತರ್‌ರಾಜ್ಯ ಮಂಡಳಿ'ಯೇನೂ ಆಗಿರಲಿಲ್ಲ. ಆದರೂ ಎಲ್ಲಾ ರಾಜ್ಯಗಳ ಪ್ರಾತಿನಿಧ್ಯವೂ ಇದ್ದ ಅಲ್ಲಿ ಹಲವಾರು ಅಂಶಗಳ ಬಗ್ಗೆ ವಾದ-ವಿವಾದ ನಡೆಯುತ್ತಿತ್ತು. ಇಂದು ಎನ್‌ಡಿಸಿ ಇಲ್ಲ.

ಎರಡನೆಯದಾಗಿ ಈ ಮುಂಚೆ ಯೋಜನಾ ಆಯೋಗವಿತ್ತು. ಅದು ದೇಶದ ಒಟ್ಟಾರೆ ಭವಿಷ್ಯದ ಅಭಿವೃದ್ಧಿಗಾಗಿ ಯೋಜನೆಯನ್ನೂ, ಅದಕ್ಕಾಗಿ ಹಣಕಾಸಿನ ಹಂಚಿಕೆಯನ್ನೂ ಯೋಜಿಸುತ್ತಿತ್ತು. ರಾಜ್ಯಗಳಿಗೆ ಹಣಕಾಸಿನ ಹಂಚಿಕೆಯ ಪ್ರಮಾಣವನ್ನೂ ಒಳಗೊಂಡಂತೆ ತನ್ನದೀ ಯೋಜನೆಯನ್ನು ಆಯೋಗವು, ಅನುಮೋದನೆಗಾಗಿ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಮುಂದಿಡುತ್ತಿತ್ತು. ಆದರೆ, ಈಗ ಅಂತಹ ಆಯೋಗವೇ ಇಲ್ಲ. ಬದಲಿಗೆ ನೀತಿ ಆಯೋಗದ ಹೆಸರಿನಲ್ಲಿ ಅದನ್ನು ಪುನರ್‌ರಚಿಸಲಾಗಿದೆ. ಇದಕ್ಕೆ ಯೋಜನಾ ಆಯೋಗದ ರೀತಿಯಲ್ಲಿ ಹಣಕಾಸಿನ ಹಂಚಿಕೆಯ ಅಧಿಕಾರವಿಲ್ಲ. ಕೇವಲ ಆಗಾಗ್ಗೆ ಸೇರಬಹುದಾದ ಒಂದು ಚರ್ಚಾಕೂಟ ಅಥವಾ ಅಹವಾಲು ಕೂಟವಾಗಿದೆ ಅಷ್ಟೇ.

ರಾಜ್ಯಗಳ ಆರ್ಥಿಕ ಅಧಿಕಾರವನ್ನು ಕಿತ್ತುಕೊಳ್ಳುವ ಕೆಲಸ ಈಗಾಗಲೇ ಆರಂಭವಾಗಿದೆ. ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ನೀಡುತ್ತಿರುವ ಅನುದಾನವೇ ಕಡಿಮೆಯಾಗಿದೆ. 14ನೇ ಹಣಕಾಸು ಆಯೋಗವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಹಂಚಿಕೆಯಾಗುವ ಹಣಕಾಸು ನಿಧಿಯಲ್ಲಿ ರಾಜ್ಯಗಳ ಪಾಲನ್ನು ಹೆಚ್ಚು ಮಾಡಲು ಶಿಫಾರಸ್ಸನ್ನು ಮಾಡಿದೆ. ಅದನ್ನು ಕೇಂದ್ರ ಸರ್ಕಾರವೂ ಒಪ್ಪಿಕೊಂಡಿದೆ. ಹಾಗಾದರೆ, ರಾಜ್ಯಗಳ ಪಾಲು ಹೆಚ್ಚಾಗಬೇಕಲ್ಲವೇ? ಇಲ್ಲ, ಈ ರೀತಿ ಹಂಚಿಕೆಯಾಗುವ ಹಣಕಾಸು ನಿಧಿಯನ್ನೇ ಕಡಿಮೆ ಮಾಡಲಾಗಿದೆ ಮತ್ತು ಈ ನಿಧಿಯಲ್ಲದೇ ಇತರ ಮೂಲಗಳಿಂದ ರಾಜ್ಯಗಳಿಗೆ ಹೋಗುವ ಹಣದ ಪ್ರಮಾಣವನ್ನೂ ತಗ್ಗಿಸಲಾಗಿದೆ. ಇದು ಸತತವಾಗಿ ಕಳೆದ 6 ವರ್ಷಗಳಿಂದ ಆಗುತ್ತಾ ಬರುತ್ತಿದೆ. ಉದಾ: ಒಟ್ಟು ಜಿಡಿಪಿಯಲ್ಲಿ ರಾಜ್ಯಗಳಿಗೆ ಹಂಚಿಕೆಯಾದ ಪಾಲಿನ ಪ್ರಮಾಣವನ್ನು ನೋಡಿ. 2010-11ರಲ್ಲಿ 6.4% ಇದ್ದದ್ದು 2011-12ರಲ್ಲಿ 6.1%ಗೆ ಇಳಿದಿತ್ತು 2012-13ರಲ್ಲಿ 5.8%ಗೂ, 2013-14ರಲ್ಲಿ 5.6%ಗೂ ಇಳಿದಿತು. 2014-15ರ ಪರಿಷ್ಕೃತ ಅಂದಾಜಿನ ಪ್ರಕಾರ 5.4%ಗೆ ಇಳಿಯಿತು. ಸಾಮಾನ್ಯವಾಗಿ ಬಜೆಟ್‌ನಲ್ಲಿ ಮಂಡಿಸುವ ಅಂದಾಜು ಹೆಚ್ಚಿರುತ್ತದೆ. ಆದರೆ, ವಾಸ್ತವದಲ್ಲಿ ಅದು ಕಡಿಮೆಯಾಗುತ್ತದೆನ್ನುವುದು ಪರಿಷ್ಕೃತ ಅಂದಾಜಿನಲ್ಲಿ ಗೊತ್ತಾಗುತ್ತದೆ. ಉದಾಹರಣೆಗೆ 2014-15ರಲ್ಲಿ ಬಜೆಟ್ ಅಂದಾಜು 6.1% ಇದ್ದರೂ, ವಾಸ್ತವದಲ್ಲಿ ದಕ್ಕಿದ್ದು 5.4%ಗೆ. 2015-16ರಲ್ಲಿ ಬಜೆಟ್ ಅಂದಾಜೇ 5.8%ಗೆ ಇಳಿಯಿತು. ಅಂದರೆ, ನಿಜವಾಗಲೂ ದಕ್ಕುವುದು ಇನ್ನೂ ಕಡಿಮೆಯಾಗುತ್ತದೆ. ಖ್ಯಾತ ಅರ್ಥಶಾಸ್ತ್ರಜ್ಞ ಪ್ರಭಾತ್ ಪಟ್ನಾಯಕ್ ಅವರ ಪ್ರಕಾರ ಇದು ಹಿಂದಿನ ಯಾವುದೇ ವರ್ಷಕ್ಕಿಂತ ಅತ್ಯಂತ ಕಡಿಮೆ ಪಾಲಾಗಿದೆ.

ಇವೆಲ್ಲವೂ ಯಾಕಾಗಿ ಸಂಸತ್ತಿನಲ್ಲಿ ಚರ್ಚೆಯಾಗಲಿಲ್ಲ? ಚರ್ಚೆಯಾಯಿತು. ಕಾಂಗ್ರೆಸ್, ಪ್ರಾದೇಶಿಕ ಪಕ್ಷಗಳು ಮಾತ್ರವಲ್ಲದೇ ಎಡಪಕ್ಷಗಳೂ ಮಾತಾಡಿದವು. ಸ್ವತಃ ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯಚೂರಿಯವರು ರಾಜ್ಯಸಭೆಯಲ್ಲಿ ಮೇಲೆ ಪ್ರಸ್ತಾಪಿಸಲಾದ ಅಂಶಗಳಲ್ಲಿ ಕೆಲವನ್ನು ಮುಂದಿಟ್ಟರು. ಆದರೆ, ಅವರ ಅಹವಾಲು ಏನಾಗಿತ್ತೆಂದರೆ, 'ಇವನ್ನು ನಂತರ ಮಸೂದೆ ಮಂಡಿಸುವಾಗಲಾದರೂ ಬದಲಾಯಿಸಿ, ರಾಜ್ಯಗಳ ಹಕ್ಕುಗಳನ್ನು ರಕ್ಷಿಸಿ' ಎಂದು.

ಇದರಿಂದ ಏನಾದರೂ ಪ್ರಯೋಜನವಿದೆಯೇ? ಶಿಕ್ಷಣ ಹಕ್ಕು ಕಾಯ್ದೆಯ ವಿಚಾರದ ಒಂದು ಉದಾಹರಣೆ ಕೊಟ್ಟರೆ ಏನಾಗಬಹುದೆಂದು ಅರ್ಥವಾಗುತ್ತದೆ. ಶಿಕ್ಷಣ ಹಕ್ಕು ಕಾಯ್ದೆ ಬಂದಿದ್ದು 1993ರಲ್ಲಿ ಸುಪ್ರೀಂಕೋರ್ಟ್ ಉನ್ನಿಕೃಷ್ಣನ್ ವರ್ಸಸ್ ಆಂಧ್ರ ಸರ್ಕಾರ ಮೊಕದ್ದಮೆಯಲ್ಲಿ ನೀಡಿದ ತೀರ್ಪಿನ ಪರಿಣಾಮವಾಗಿ. ಅದರ ಪ್ರಕಾರ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಉಚಿತ ಹಾಗೂ ಕಡ್ಡಾಯ ಶಿಕ್ಷಣ ನೀಡುವುದು ಮೂಲಭೂತ ಹಕ್ಕಾಗಬೇಕಿತ್ತು. ಆದರೆ, ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರವು ಇದಕ್ಕಾಗಿ ಸಂವಿಧಾನ ತಿದ್ದುಪಡಿ ತರುವಾಗ '6ರಿಂದ 14 ವರ್ಷಗಳೊಳಗಿನ ಮಕ್ಕಳಿಗೆ, ಪ್ರಭುತ್ವವು ಕಾಯ್ದೆಯೊಂದರ ಮೂಲಕ ಹೇಗೆ ತೀರ್ಮಾನಿಸುತ್ತದೋ ಹಾಗೆ' ಶಿಕ್ಷಣವು ಮೂಲಭೂತ ಹಕ್ಕಾಗಿರುತ್ತದೆ ಎಂದು ತಂದಿತು. ಇದನ್ನು ವಿರೋಧ ಪಕ್ಷದ ನಾಯಕಿ ಸೋನಿಯಾ ಗಾಂಧಿ ವಿರೋಧಿಸಿದ್ದರು. ಇದು 0ಯಿಂದ 6 ವರ್ಷಗಳೊಳಗಿನ ಮಕ್ಕಳನ್ನು ಕೈಬಿಡುತ್ತದೆ ಎಂಬುದು ಅವರ ಆಕ್ಷೇಪವಾಗಿತ್ತು. ಅದನ್ನು ಕಾಯ್ದೆ ತರುವಾಗ ಸರಿಮಾಡಿಕೊಳ್ಳುತ್ತೇವೆ ಎಂದು ಬಿಜೆಪಿ ಸರ್ಕಾರವು ಹೇಳಿತ್ತು. ಕಾಯ್ದೆಯನ್ನು ಸ್ವತಃ ಸೋನಿಯಾ ಗಾಂಧಿಯವರ ಸರ್ಕಾರವೇ ತಂದಿತು. ಆದರೆ, ಅದೂ 0ಯಿಂದ 6 ವರ್ಷದೊಳಗಿನ ಮಕ್ಕಳನ್ನು ಕೈಬಿಟ್ಟಿತು.

ಅಂದರೆ, ವಿಷಯ ಸ್ಪಷ್ಟವಾಗಿದೆ. ಈ ದೇಶದ ಎಲ್ಲಾ ರಾಜ್ಯಗಳೂ ಇನ್ನು ಮುಂದೆ ಆರ್ಥಿಕ ಸ್ವಾತಂತ್ರ್ಯ ಮತ್ತು ಅಧಿಕಾರವನ್ನು ಕಳೆದುಕೊಳ್ಳಲಿವೆ. ಆ ಮೂಲಕ ದೇಶದ ಒಕ್ಕೂಟ ವ್ಯವಸ್ಥೆಗೆ ದೊಡ್ಡ ಪೆಟ್ಟು ಬೀಳಲಿದೆ. ಏಕರೂಪ ದೇಶ, ಕೇಂದ್ರೀಕೃತ ಅಧಿಕಾರವನ್ನು ಹೊಂದಿರುವ ದೇಶ, ವೈವಿಧ್ಯತೆಯು ನಾಶ ಹೊಂದಿರುವ ದೇಶವನ್ನು ಬಯಸುವ ಹಿಂದುತ್ವದ ಆಕಾಂಕ್ಷೆ ... ಈ ಆರ್ಥಿಕ ಸ್ವಾತಂತ್ರ್ಯದ ನಾಶ ಆಧಾರವಾಗಿ ಸಹಾಯ ಮಾಡಲಿದೆ. ■

Registered No.RNP/KA/BGS/2036/2014-16 Posted at :Bangalore, PSO, Mysore Road BG-560026 Thursday

ಧೈರ್ಯ ಮಾಡಿದ ಅಜಯ್



ಲವರ್‌ಬಾಯ್ ಪಾತ್ರಗಳಿಗೆ ಅಂಟಿಕೊಂಡಿದ್ದ ಅಜಯ್ ರಾವ್‌ಗೆ ಅಂಥದ್ದೇ ಪಾತ್ರಗಳು ಬೋರು ಅನಿಸಿವೆ. ಹೀಗಾಗಿಯೇ ಮಾಸ್ ಲುಕ್‌ನತ್ತ ಮುಖ ಮಾಡಿದ್ದಾರೆ ಕೃಷ್ಣ ಅಜಯ್. ಫ್ಯಾಮಿಲಿ ಎಂಟರ್‌ಟೈನ್‌ಮೆಂಟ್ ಸಿನಿಮಾದ ಮೂಲಕ ಈವರೆಗೂ ರಂಜಿಸಿದ ಇವರಿಗೆ, ಮಾಸ್ ಕತೆಗಳಲ್ಲಿ ನಟಿಸಲು ಅವಕಾಶ ಸಿಕ್ಕಿದ್ದರೂ ನಿರಾಕರಿಸಿದ್ದರಂತೆ. ಈ ಬಾರಿ ಧೈರ್ಯ ಮಾಡಿ 'ಧೈರ್ಯಂ' ಎಂಬ ಚಿತ್ರವನ್ನು ಒಪ್ಪಿಕೊಂಡಿದ್ದಾರೆ. ಶಿವ ತೇಜಸ್ ನಿರ್ದೇಶನದಲ್ಲಿ ಚಿತ್ರ ಮೂಡಿಬರಲಿದೆ.

ಮಾಸ್‌ಲುಕ್‌ನಲ್ಲಿ ಅಜಯ್ ಹೇಗೆ ಕಾಣಿಸಲಿದ್ದಾರೆ ಅನ್ನುವುದಕ್ಕಾಗಿ ಈಗಾಗಲೇ ಫೋಟೋ ಶೂಟ್ ಕೂಡ ಮಾಡಿದ್ದಾರೆ ನಿರ್ದೇಶಕರು. ಇವರೇನಾ ಅಜಯ್ ಅನ್ನುವಷ್ಟು ಆ ಲುಕ್‌ಗೆ ಒಪ್ಪಿಕೊಂಡಿದ್ದು ವಿಶೇಷ.

ಇದೇ ಮೊದಲ ಬಾರಿಗೆ ಇಂಥದ್ದೊಂದು ಸಿನಿಮಾವನ್ನು ಒಪ್ಪಿಕೊಂಡಿದ್ದಕ್ಕೆ ಕೊಂಚ ಭಯವೂ ಇದೆಯಂತೆ ಈ ನಟನಿಗೆ. 'ಕೃಷ್ಣಲೀಲಾ' ಚಿತ್ರದ ಮೂಲಕ ಮತ್ತೆ ತಮ್ಮ ಡಿಮಾಂಡ್ ಉಳಿಸಿಕೊಂಡಿರುವ ಅಜಯ್, ಮಾಸ್ ಸಿನಿಮಾದಲ್ಲೂ ಅದನ್ನು ಮುಂದುವರೆಸಿಕೊಂಡು ಹೋಗಬೇಕಿದೆ. ಹೀಗಾಗಿ ತುಂಬಾ ನಾಜೂಕಾಗಿ ಪಾತ್ರವನ್ನು ಪ್ಲೇ ಮಾಡಲಿದ್ದಾರೆ. ಈಗಾಗಲೇ ದೇಹ ದಂಡಿಸಿ, ಪಾತ್ರಕ್ಕಾಗಿ ರೆಡಿ ಆಗಿದ್ದಾರೆ. ಮೊನ್ನೆಯಷ್ಟೇ ಸಿನಿಮಾಗೆ ಮುಹೂರ್ತವಾಗಿದ್ದು, ಡಾ.ಕೆ.ರಾಜು ಸಿನಿಮಾವನ್ನು ನಿರ್ಮಿಸುತ್ತಿದ್ದಾರೆ. 'ಮಳೆ' ಚಿತ್ರದ ಮೂಲಕ ನಿರ್ದೇಶಕರಾಗಿರುವ ಶಿವತೇಜಸ್‌ಗೆ ಇದು ಎರಡನೇ ಸಿನಿಮಾ. ಸಾಧುಕೋಕಿಲ, ಹೊನ್ನವಳ್ಳಿ ಕೃಷ್ಣ ಸಂಗೀತ, ಶ್ರೀನಿವಾಸಪ್ರಭು ಸೇರಿದಂತೆ ಹಲವು ಹೆಸರಾಂತ ಕಲಾವಿದರು ತಾರಾಗಣದಲ್ಲಿದ್ದಾರೆ.

ಬಿಳಿಕುದುರೆ ಏರಿದ ಸಂಚಾರಿ

ಕಲಾತ್ಮಕ ಸಿನಿಮಾಗಳ ಮೂಲಕ ಗುರುತಿಸಿಕೊಂಡಿರುವ ಸಂಚಾರಿ ವಿಜಯ್, ಈ ಬಾರಿ ಪಕ್ಕಾ ಕಮರ್ಷಿಯಲ್ ಸಿನಿಮಾಗೆ ಸಹಿ ಮಾಡಿದ್ದಾರೆ. ನಂದಕುಮಾರ್ ನಿರ್ದೇಶನದಲ್ಲಿ ಮೂಡಿಬರಲಿರುವ ಚಿತ್ರದಲ್ಲಿ ವಿಜಯ್ ಮಧ್ಯಮ ವರ್ಗದ ಹುಡುಗನಾಗಿ ಕಾಣಿಸಿಕೊಂಡಿದ್ದಾರೆ.

ಚಿತ್ರದಲ್ಲಿ ಅಪ್ಪಟ ಪ್ರೀತಿಯನ್ನು ತೋರಿಸಲು ಹೊರಟಿದ್ದಾರೆ ನಿರ್ದೇಶಕರು. ಹದಿನೈದು ವರ್ಷಗಳ ಹಿಂದೆ ಬರೆಯಲಾದ ಈ ಕತೆಯನ್ನು ಭಾರತದಲ್ಲಿ ಯಾರು ಕೇಳಿರೋಕೆ ಸಾಧ್ಯವಿಲ್ಲ ಅನ್ನುವುದು ನಿರ್ದೇಶಕರ ಮಾತು. ಸಂಚಾರಿ ವಿಜಯ್ ಇಲ್ಲಿ ವಿಭಿನ್ನ ಪಾತ್ರ ನಿರ್ವಹಿಸಿದ್ದು, ಅದು ಮಧ್ಯಮ ವರ್ಗದ ಹುಡುಗನ ಪಾತ್ರವಾಗಿದ್ದರೂ, ಕ್ಯಾರೆಕ್ಟರ್‌ಗೆ ವಿಭಿನ್ನವಾದ ಹಿನ್ನೆಲೆ ಕೊಟ್ಟಿದ್ದಾರಂತೆ.



ಮನಸ್ಸನ್ನು ಕುದುರೆಗೆ ಹೋಲಿಸಿ, ಅದನ್ನೇ ಸಿಂಬಲ್ ಆಗಿಟ್ಟುಕೊಂಡು ಕತೆ ಬರೆದಿದ್ದಾರಂತೆ ನಿರ್ದೇಶಕರು. ನಾಯಕಿಯಾಗಿ ಬಾಂಬೆ ಮೂಲದ ಮಾಡಲ್ ಹನಿಬಲ್ ನಟಿಸುತ್ತಿದ್ದಾರೆ. ಚಿತ್ರದಲ್ಲಿ ಪ್ರೇಮಕ್ಕೆ ಪ್ರಾಮುಖ್ಯತೆ ನೀಡಲಾಗಿದ್ದರೂ, ಮೂರು ಸಾಹಸ ಸನ್ನಿವೇಶಗಳಿವೆ.


ಹೊಸ ಅವತಾರದಲ್ಲಿ ಧನಂಜಯ್

'ಸುಳ್ಳೇ ಸತ್ಯ' ಎಂಬ ಕಿರುಚಿತ್ರದ ಮೂಲಕ ದೊಡ್ಡ ಮಟ್ಟದಲ್ಲಿ ಸದ್ದು ಮಾಡಿದವರು ನಿರ್ದೇಶಕ ಆಕಾಶ್ ಶ್ರೀವತ್ಸ. ಈ ಮೆಚ್ಚುಗೆ 'ಬದ್ಮಾಶ್' ಸಿನಿಮಾದಲ್ಲೂ ಮುಂದುವರೆದಿದೆ. ಸಿನಿಮಾದಲ್ಲಿ ಅನೇಕ ವಿಶೇಷತೆಗಳಿವೆ. ಸ್ಕ್ರೀನ್ ಪ್ಲೇ ಸಿನಿಮಾದ ಜೀವಾಳ. ಹೊಸದಾಗಿರುವ ಮೇಕಿಂಗ್, ಪಂಚಿಂಗ್ ಡೈಲಾಗ್ಸ್ ಮತ್ತು ಸ್ಟೈಲಿಶ್ ನಟನೆಯಿಂದಾಗಿ ಚಿತ್ರವು ಗಮನ ಸೆಳೆಯಲಿದೆಯಂತೆ. ಚಿತ್ರಕತೆಯಲ್ಲಿ ಕರೆಂಟ್ ಅಫೇರ್ಸ್ ಬಳಸಿಕೊಂಡಿದ್ದರಿಂದ ಹೊಸ ರೀತಿಯ ಅನುಭವವನ್ನು ಸಿನಿಮಾ ಕಟ್ಟಿಕೊಡಲಿದೆಯಂತೆ.

ಧನಂಜಯ್ ಇಲ್ಲಿ ಹೊಸ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ಇವರು ಬರೋಬ್ಬರಿ ಹತ್ತು ವಿಭಿನ್ನ ಗೆಟಪ್ ಹಾಕಿದ್ದಾರೆ. ಪವರ್‌ಫುಲ್ ರಾಜಕಾರಣಿ ಮತ್ತು ಸ್ಮಾರ್ಟ್ ಹುಡುಗನ ಮಧ್ಯೆ ನಡೆಯುವ ರೋಚಕ ಕತೆಯೇ ಸಿನಿಮಾ ಆಗಿದ್ದರಿಂದ, ರಾಜಕಾರಣಿಯ ಪಾತ್ರವನ್ನು ಅಚ್ಯುತ್ ಕುಮಾರ್ ನಿರ್ವಹಿಸಿದ್ದಾರೆ. ಮೊನ್ನೆಯಷ್ಟೇ ಸಿನಿಮಾದ ಹಾಡುಗಳು ರಿಲೀಸ್ ಆಗಿದ್ದು, ಕೇಳುಗರಿಂದ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. 'ಬದ್ಮಾಶ್' ಸಿನಿಮಾದ ಟೀಸರ್ ನೋಡಿದ್ದ ಬಾಲಿವುಡ್ ನಟ ಸಲ್ಮಾನ್ ಖಾನ್, ಈ ಚಿತ್ರವನ್ನು ಬಾಲಿವುಡ್‌ನಲ್ಲಿ ರೀಮೇಕ್ ಮಾಡುವುದಾಗಿ ಹೇಳಿದ್ದರು. ಈ ಬೆನ್ನಲ್ಲೇ ಮತ್ತೊಬ್ಬ ಹೆಸರಾಂತ ನಟ ಮತ್ತು ನಿರ್ದೇಶಕ ಪ್ರಭುದೇವ್ ಕೂಡ ಚಿತ್ರದ ಮೇಕಿಂಗ್ ಅನ್ನು ಹಾಡಿಹೊಗಳಿದ್ದಾರೆ. ಹೀಗಾಗಿಯೇ ಧನಂಜಯ್‌ನ ಅವತಾರ ಖಂಡಿತಾ ಕ್ಲಿಕ್ ಆಗಲಿದೆ ಅನ್ನುವುದು ನಿರ್ದೇಶಕರ ಮಾತು.



ಶಿಲ್ಪಿಗಳ ಬದುಕಿನತ್ತ ದತ್ತಣ್ಣನ ಬ...



ವಿಭಿನ್ನ ಪಾತ್ರಗಳ ಮೂಲಕ ಗುರುತಿಸಿಕೊಂಡಿರುವ ದತ್ತಣ್ಣ, ಇದೇ ಮೊದಲ ಬಾರಿಗೆ ಶಿಲ್ಪಿಯಾಗಿ ಕಾಣಿಸಿಕೊಂಡಿದ್ದಾರೆ. 'ಪ್ರತಿಮಾ' ಹೆಸರಿನ ಈ ಸಿನಿಮಾವನ್ನು ಎಂ.ಶಿವಾನಂದಂ ನಿರ್ದೇಶನ ಮಾಡಿದ್ದಾರೆ. ಭಾರತೀಯ ಶಿಲ್ಪಕಲೆಗೆ ವಿಶೇಷವಾದ ಸ್ಥಾನವಿದೆ. ಅದರಲ್ಲೂ ಕರ್ನಾಟಕಕ್ಕೆ ಅದರ ಸಿಂಹಪಾಲಿದೆ. ಹೀಗಾಗಿಯೇ ಶಿಲ್ಪಿಯ ಬದುಕನ್ನು ಆಧರಿಸಿ ಸಿನಿಮಾ ಮಾಡಿದ್ದಾರೆ ನಿರ್ದೇಶಕರು.


ಕಲೆಯನ್ನೇ ನಂಬಿರುವ ಶಿವಾರ ಪಟ್ಟಣವಿದೆ. ಅಲ್ಲಿ ಅನೇಕ ಕುಟುಂಬ... ಈ ಕಲೆಯನ್ನೇ ನಂಬಿಕೊಂಡಿವೆ. ಅವರ ನೋವುನಲಿವುಗಳನ್ನು ಸಿನಿಮಾ... ತೋರಿಸುವ ಪ್ರಯತ್ನ ಮಾಡಿದ್ದಾರೆ ನಿರ್ದೇಶಕರು. ಬೆಂಗಳೂರಿನ ಅಂತಾರಾಷ್ಟ್ರೀ... ಸಿನಿಮೋತ್ಸವದಲ್ಲೂ ಸಿನಿಮಾ ಪ್ರದರ್ಶನವಾಗಿದೆ. ಈ ಚಿತ್ರದ ಕತೆ... ಶಿಲ್ಪಕಲಾವೃತ್ತಿಯನ್ನು ಅವಲಂಬಿಸಿ, ಜೀವನ ಸಾಗಿಸುವವರ ಬದುಕನ್ನು ಆಧರಿ...

ಜೆ.ಎಂ.ಪ್ರಹ್ಲಾದ್ ಚಿತ್ರಕತೆ ಮತ್ತು ಸಂಭಾಷಣೆ ಬರೆದಿ... ಹೇಮಂತ್‌ಕುಮಾರ್‌ರ ಸಂಗೀತವಿದೆ. ಎಂ.ಮಹಮದ್ ಬಾಷಾ ... ಅವರ ಸಾಹಿತ್ಯದಲ್ಲಿ ಹಾಡುಗಳು ಮೂಡಿಬಂದಿವೆ. ತಾರಾಗಣದಲ್ಲಿ ದಿವ್ಯ... ರವಿಚೇತನ್, ಮೀನಾಕ್ಷಿ ಹರ್ತಿ,, ಬಿ.ಶಿವಾನಂದ ಸೇರಿದಂತೆ ಹ... ಕಲಾವಿದರಿದ್ದಾರೆ.

'ಕ್ವೀನ್'ನ ಕೈ ಹಿಡಿದ ಮಮ...

ಲೇಖಕಿ ಮಮತಾ ಜಿ ಸಾಗರ್ ಸಿನಿಮಾ ರಂಗಕ್ಕೂ ಧುಮುಕಿ... ಬಾಲಿವುಡ್‌ನ 'ಕ್ವೀನ್' ಚಿತ್ರವು ಕನ್ನಡಕ್ಕೆ ರೀಮೇಕ್ ಆಗುತ್ತಿದ್ದು, ಮ... ಆ ಸಿನಿಮಾದ ಸ್ಕ್ರಿಪ್ಟ್ ಬರೆಯಲಿದ್ದಾರೆ. ಈ ಸಿನಿಮಾ ಕೇವಲ ಕನ್ನಡ... ಮಾತ್ರವಲ್ಲ, ದಕ್ಷಿಣ ಭಾರತದ ಇನ್ನೂ ಮೂರು ಭಾಷೆಗಳಲ್ಲಿ ರಿ... ಆಗುತ್ತಿದೆ. ತಮಿಳಿನಲ್ಲಿ ನಟಿ ಸುಹಾಸಿನಿ ಚಿತ್ರಕತೆಯ ಜವಾಬ್ದಾರಿ ಹೊ... ತೆಲುಗು ಮತ್ತು ಮಲೆಯಾಳಂ ಭಾಷೆಯಲ್ಲಿ ಅಲ್ಲಿನ ಮಹಿಳಾ ಪರ ಲೇ... ಮಣೆ ಹಾಕಲಾಗಿದೆ ಎನ್ನಲಾಗುತ್ತಿದೆ.

ಸದ್ಯ ಚಿತ್ರಕತೆಯ ಕೆಲಸ ನಡೆಯುತ್ತಿದೆ. ಅಂದುಕೊಂಡಂತೆ ಆದರೆ ... ರೇವತಿ ಈ ಸಿನಿಮಾವನ್ನು ನಿರ್ದೇಶನ ಮಾಡಲಿದ್ದಾರೆ. ತ್ಯಾಗರಾಜನ್ ... ನಿರ್ಮಾಪಕರು. ಈ ಸುದ್ದಿಯನ್ನು ಸ್ವತಃ ಸುಹಾಸಿನಿಯೇ ಖಚಿತಪಡಿ... 'ಕ್ವೀನ್' ಮಹಿಳಾಪರ ಸಿನಿಮಾ. ಅಲ್ಲದೇ, ಅಲ್ಲಿನ ಅನೇಕ ವಿಷಯಗಳು ಹೊಸದು ಅನಿಸಿದವು. ಅವೆಲ್ಲವನ್ನೂ ನಮ್ಮ ನೆಲಕ್ಕೆ ಒಗ್ಗಿಸಿಕೊಂಡು ಸಿನಿಮಾ ಮಾಡುತ್ತಿದ್ದೇವೆ ಅಂದಿದ್ದಾರೆ.



ಪಾತ್ರಗಳ ಆಯ್ಕೆಯ ಬಗ್ಗೆ ಯಾವ ಮಾಹಿತಿಯೂ ಇಲ್ಲ. ಮುಂದಿನ ತಿಂಗಳ ಕೊನೆಯಲ್ಲಿ ಎಲ್ಲದಕ್ಕೂ ಸ್ಪಷ್ಟ ಉತ್ತರ ಸಿಗಲಿದೆಯಂತೆ. ಈವರೆಗೂ ಕತೆ, ಕವಿತೆ, ನಾಟಕ ಬರೆದುಕೊಂಡಿದ್ದ ಲೇಖಕಿ ಮಮತಾ ಮತ್ತೊಂದು ಮುಖ್ಯ ವಾಹಿನಿಗೆ ಕಾಲಿಟ್ಟಿದ್ದಾರೆ. ಹೀಗಾಗಿ 'ಕ್ವೀನ್' ಕುತೂಹಲ ಮೂಡಿಸಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com